# DAMAGE BOOK

# THE BOOK WAS DRENCHED

UNIVERSAL LIBRARY
OU_200154
UNIVERSAL LIBRARY

ಮನೋಹರ ಗ್ರಂಥಮಾಲೆಯ ೪೧ನೆಯ ಕುಸುಮ

# ಗ್ರಾಮ ಪಂಚಾನನ

(ಸಾಮಾಜಿಕ ಸ್ವತಂತ್ರ ಕಾದಂಬರಿ)

ಬರೆದವರು:

ಬಾ. ಕೃ. ಲಕ್ಷ್ಮೇಶ್ವರ

ಮನೋಹರ ಗ್ರಂಥಪ್ರಕಾಶನ ಸಮಿತಿ

— ಧಾರವಾಡ —

ಎಪ್ರಿಲ್ ೧೯೪೦ ಬೆಲೆ ೦-೧೨-೦

**ಸಾಹಿತ್ಯ ವಿಷಯದಲ್ಲಿ ಸಲಹೆಗಾರರು :**

ಶ್ರೀ. ದ. ರಾ. ಬೇಂದ್ರೆ, ಎಂ. ಎ.
ಶ್ರೀ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ.
ಶ್ರೀ. ವಿ. ಕೃ. ಗೋಕಾಕ, ಬಿ. ಎ. (ಆಕ್ಸಫರ್ಡ)


ಮುದ್ರಕರು
**ಕೆ. ಜಿ. ರಾಯದುರ್ಗ**
ಮೋಹನ ಮುದ್ರಣಾಲಯ
ಧಾರವಾಡ.

ಪ್ರಕಾಶಕರು :
**ಜಿ. ಬಿ. ಜೋಶಿ**
ಮನೋಹರ ಗ್ರಂಥಮಾಲಾ
ಧಾರವಾಡ


**ಸಂಪಾದಕ :**

**ಜಿ. ಬಿ. ಜೋಶಿ**

*

# ನಮ್ಮ ಮಾತು.

●

‘ಗ್ರಾಮಪಂಚಾನನ’ವು-ಹಳ್ಳಿಯ ಜೀವನವನ್ನು ಇದ್ದಕ್ಕಿದ್ದಂತೆ ಚಿತ್ರಿಸುವ ಸಾಮಾಜಿಕ ಸ್ವತಂತ್ರ ಕಾದಂಬರಿ. ಪಟ್ಟಣಿಗರ ದೃಷ್ಟಿಯೆಲ್ಲ ಹಳ್ಳಿಯ ಕಡೆಗೆ ಓಡುತ್ತಿರುವ ಈ ಕಾಲದಲ್ಲಿ, ಹಳ್ಳಿಯ ಜೀವನದ ನಿಜಜ್ಞಾನವನ್ನು ಪಟ್ಟಣಿಗರಿಗೆ ಮಾಡಿಕೊಡಲು ಇಂತಹ ಕಾದಂಬರಿಗಳು ಅತ್ಯವಶ್ಯವೆಂದು ನಮಗನಿಸಿದ್ದರಿಂದ ಹಳ್ಳಿಯ ಜೀವನದ ಮರ್ಮವನ್ನರಿತ ಶ್ರೀಮಾನ್ ಬಾ. ಕೃ. ಲಕ್ಷ್ಮೇಶ್ವರ ಅವರ ಈ ಕಾದಂಬರಿಯನ್ನು ನಮ್ಮ ಈ ಗ್ರಂಥಮಾಲೆಯಲ್ಲಿ ಪೋಣಿಸಿದ್ದೇವೆ. ‘ಭಾರತಮಾರ್ಗ’ದಂತಹ ಜಡ ಕಾದಂಬರಿಯನ್ನು ಓದಿ ಬೇಸರಗೊಂಡ ನಮ್ಮ ಕೆಲ ವಾಚಕರು ಈ ಸರಳ ಕಾದಂಬರಿಯನ್ನು ಓದಿ ಸಂತೋಷಹೊಂದುವರೆಂದು ನಮ್ಮ ಆಶೆಯಿದೆ.

ಈ ಕಾದಂಬರಿಯನ್ನು ನಾವು ಕೇಳಿದೊಡನೆ ನಮಗೆ ಕೊಟ್ಟುದಕ್ಕಾಗಿ ಶ್ರೀಮಾನ್ ಬಾ. ಕೃ. ಲಕ್ಷ್ಮೇಶ್ವರ ಅವರಿಗೂ ಈ ಕಾದಂಬರಿಯನ್ನು ಒಂದು ರೂಪಕ್ಕೆ ತಂದುದಲ್ಲದೆ, ಇದಕ್ಕೊಂದು ಬೆಲೆಯುಳ್ಳ ಮುನ್ನುಡಿಯನ್ನೂ ಬರೆದುಕೊಟ್ಟ ಶ್ರೀಮಾನ್ ವಿ. ಕೃ. ಗೋಕಾಕ ಅವರಿಗೂ ಹಸ್ತಪ್ರತಿಯನ್ನು ತಯಾರಿಸಿ ಸಹಾಯಮಾಡಿದ ಶ್ರೀಮಾನ್ ಗನ್ರೆಯವರಿಗೂ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

—ಸಂಪಾದಕ.

*

# ಮುನ್ನುಡಿ

'ಗ್ರಾಮಪಂಚಾನನ'ದಂಥ ಕಾದಂಬರಿಗಳು ಇಂದು ನಮಗೆ ಬೇಕಾಗಿವೆ. ಹಳ್ಳಿಯಲ್ಲೇನು ನಡೆದಿದೆ? ಗ್ರಾಮಪಂಚಾಯತಿಯ 'ಪಂಚೇತಿ'ಗೆ ನಾವು ಹೋಗಬೇಕೊ, ಬೇಡವೊ? ಹಳ್ಳಿಗಳಲ್ಲಿಯ ಜನರು ಸಜ್ಜನರೆಂದು ಹೇಳುತ್ತಾರಲ್ಲ? ಈ ಮಾತು ಎಷ್ಟರ ಮಟ್ಟಿಗೆ ನಿಜ? ಮುಖ್ಯತಃ ಹಳ್ಳಿಗಳ ಬಳ್ಳಿಯಾಗಿರುವ ಹಿಂದುಸ್ಥಾನದಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವದೆಂದರೆ ರಾಜಕಾರಣದ ಮೊದಲನೆಯ ಪಾಠವನ್ನು ಕಲಿತಂತೆ. ಉತ್ತರಕರ್ನಾಟಕದಲ್ಲಿಯ ಈ ಜೀವನಕ್ಕೆ ಶ್ರೀ. ಲಕ್ಷ್ಮೀಶ್ವರರವರು ಕನ್ನಡಿಯನ್ನು ಎದುರು ಹಿಡಿದು ಅದನ್ನು 'ಗ್ರಾಮಪಂಚಾನನ'ದಲ್ಲಿ ಪ್ರತಿಬಿಂಬಿಸಿದ್ದಾರೆ. ಹಳ್ಳಿಗಳ ಪಾಡಿನ ಲೇಸು-ಕೆಡಕನ್ನೂ ಜ್ಞಾನಾಜ್ಞಾನಗಳನ್ನೂ ಆಶೆ-ನಿರಾಶೆಗಳನ್ನೂ ನಾವಿಲ್ಲಿ ಕಾಣಬಹುದು. ಕಥಾವಸ್ತುವಿನ ಮಹತ್ವದಿಂದ ಹಾಗು ನಿರೂಪಣೆಯ ಕಲಾವಂತಿಕೆಯಿಂದ ಇದು ಇಂದಿನ ಸ್ವತಂತ್ರ ಕಾದಂಬರಿಗಳಲ್ಲಿ ಮೇಲ್ಪಙ್ತಿಗೆ ಸೇರತಕ್ಕುದಾಗಿದೆ.

'ಗ್ರಾಮಪಂಚಾನನ'ವು ಪ್ರಧಾನವಾಗಿ ನಡೆವಳಿಕೆಯ ಕಾದಂಬರಿಯೆಂದು ನಾವು ತಿಳಿದರೂ ಸ್ವಭಾವನಿರೂಪಣೆಯೂ ಇಲ್ಲಿ ಬಹಳವಾಗಿ ಒಪ್ಪುವಂತೆ ಬಂದಿದೆ. ದೇಸಾಯರ ಸದ್ಗುಣಗಳ ವಜ್ರವೈಭವವನ್ನು ಚಂದ್ರಾವತಿಬಾಯಿಯವರ ಸ್ವಭಾವದ ಹಿತ್ತಾಳಿಯ ಉಂಗುರದಲ್ಲಿ ಕೂಡಿಸಿದೆಯಷ್ಟೆ. ಒಡಕಣ್ಣಾನ ಕಲ್ಲಿದ್ದಲಿ ಸ್ವಭಾವವು ಊರ ನೋರೆಗೇ ಹೇಗೆ ಕಪ್ಪು ಹಚ್ಚುವದೆಂಬುದು ಪಾತ್ರವೈಷಮ್ಯದ ಮೂಲಕ ನಮಗೆ ಸ್ಪಷ್ಟವಾಗಿ ಹೊಳೆಯುತ್ತದೆ. ಲೇಸು-ಕೆಡಕಿನ ನಡುವೆ ಜಗತ್ತಿನಲ್ಲಿ ನಿರಂತರವಾಗಿ ನಡೆದ ಕಲಹವು ಇಲ್ಲಿಯೂ ಚಿತ್ರಿತವಾಗಿದೆ. ನೀಚರ ಕಾರಸ್ಥಾನದಿಂದ ಸದ್ಗುಣಿಗಳೂ ಹೇಗೆ ದುಃಖಕ್ಕೆ ಗುರಿಯಾಗುವರೆಂಬುದು ಇಲ್ಲಿಯ ಕಥಾವಸ್ತುವಾಗಿದೆ. 'ಬಂಜೆಯ ಬಸಿರು ಬಿಚ್ಚಿಬಿತ್ತು'— 'ಸಿದ್ದಯ್ಯನ ಯಂತ್ರಮಂತ್ರಗಳು' ಮೊದಲಾದ ಪ್ರಕರಣಗಳಲ್ಲಿ ಹಳ್ಳಿಗಾಡಿನ ವೈಚಿತ್ರ್ಯಗಳು ಕಂಡುಬಂದರೆ, 'ಮನೆಯಲ್ಲಿಯ ಮೂಲಮಂತ್ರ'— 'ದೇಸಾಯರ ಮನೆಯಲ್ಲಿ ದೆವ್ವನ ಕುಣಿತ' ಮೊದಲಾದೆಡೆಗೆ ಈ ವೈಚಿತ್ರ್ಯಗಳು ಮಾನವಸ್ವಭಾವದ ವಿಲಕ್ಷಣ ರೀತಿಗಳೊಡನೆ ಕೂಡಿ ಬಂದಿವೆ. ಅಲ್ಲದೆ ಈ ಕಾದಂಬರಿಯಲ್ಲಿಯ ಸಂಭಾಷಣೆಗಳಲ್ಲಿ ಹಳ್ಳಿಗರ ತಿರು

ಳ್ಗನ್ನಡವೂ ನಾಣ್ಣುಡಿಗಳೂ ತುಂಬಿ ಬರುತ್ತವೆ. ಶ್ರೀ. ಪುಟ್ಟಣ್ಣನವರ ಕಾದಂಬರಿಗಳಂತೆ 'ಗ್ರಾಮಪಂಚಾಯಸ'ವು ವಾಸ್ತವಿಕತೆಯ ಹಾದಿಯನ್ನು ತುಳಿದು ಧ್ಯೇಯವಾದಿತ್ವವನ್ನು ಸಾಧಿಸುತ್ತದೆ.

ಲೇಖಕರೇ ಒಪ್ಪಿಕೊಂಡಂತೆ ಈ ಕಾದಂಬರಿಯಲ್ಲಿ ಶ್ರೀ. ಗಳಗನಾಥರ ಮಾರ್ಗವೂ ಹೊಸ ಕಾದಂಬರಿಗಳ ದೇಸಿಯೂ ಕೂಡಿ ನಿಂತಿವೆ. ಒಂದು ವಿಧದಿಂದ ಓದುಗರಿಗೆ ಇದು ಇಷ್ಟವಾಗಬಹುದು.

ಮೊದಲನೆಯ ಸಲ ನಾನಿದನ್ನು ಓದಿದಾಗ 'ಗ್ರಾಮಪಂಚಾಯಸ'ವು ಕೆಚ್ಚದೆ ಇದ್ದ ರತ್ನವಾಗಿತ್ತು, ಹದಸವಾಗಿಸದೆ ಇದ್ದ ಕೈಗತ್ತಿಯಾಗಿತ್ತು. ಶ್ರೀ. ರಾ. ಬಾ. ಲಕ್ಷ್ಮೇಶ್ವರ ಹಾಗು ಶ್ರೀ. ಜಿ. ಕೆ. ಗದ್ರೆ ಬಿ. ಎ. ಇವರ ಸಹಾಯದಿಂದ ನಾನಿದನ್ನು ಸಾಣೆ ಹಿಡಿದೆನು. ನಾನು ಮಾಡಿದ ಸೂಚನೆಗಳ ನೇರೆಗೆ ಶ್ರೀ. ಗದ್ರೆಯವರು ಇದನ್ನು ಅಲ್ಲಲ್ಲಿ ಎದ್ದು ಕಾಣುವಂತೆ ಮಾಡಿ ಬರೆದುಕೊಟ್ಟರು. ಇದ್ದುದನ್ನು ಸ್ಫುಟವಾಗಿಸಲು ನಾವು ಪ್ರಯತ್ನಿಸಿದೆವೇ ಹೊರತು ಒಂದೆರಡು ಸನ್ನಿವೇಶಗಳನ್ನು ಬಿಟ್ಟರೆ ಯಾವ ಮಾರ್ಪಾಟು ಮಾಡಲೂ ಪ್ರಯತ್ನಿಸಲಿಲ್ಲ. ತಿರುಳಲ್ಲದುದನ್ನು ನಾವು ಬಿಟ್ಟುಬಿಟ್ಟೆವು. ಹೊಲಿಗೆಯು ಸಡಿಲಾದಲ್ಲಿ ನಾವು ಇನ್ನಿಷ್ಟು ಬಿಗಿದೆವು. ಹಳೆಯ ರೀತಿಯು ಹೊಸ ರೀತಿಯನ್ನು ಅಪ್ಪಗಟ್ಟಿದಾಗ ನಾವು ಅವೆರಡನ್ನೂ ಬೇರೆ ಬೇರೆಯಾಗಿಸಿದೆವು ಇಷ್ಟೆ. ಕಾದಂಬರಿಯಲ್ಲಿ ಕಂಡುಬರುವ ಪ್ರತಿಭೆಯು ಲೇಖಕರದು; ಅನೇಕ ವರ್ಷಗಳ ವರೆಗೆ ಲೇಖಕರು ಹಳ್ಳಿಗರೊಡನೆ ಒಂದಾಗಿ ಪಡೆದ ವಿಶಾಲ ಅನುಭವವನ್ನು ಅದು ಕೂಡಿ ನಿಂತಿದೆ.

ಯಾರೇ ಆಗಲಿ, ಒಮ್ಮೆ ಈ ಕಾದಂಬರಿಯನ್ನು ಅವರು ಓದಲು ಪ್ರಾರಂಭಿಸಿದರೆ ಮುಗಿಯುವ ತನಕ ಕೆಳಗಿಡಲಾರರೆಂದು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಕಾದಂಬರಿಕಾರನಿಗೆ ಇದಕ್ಕಿಂತ ಹೆಚ್ಚಿನ ಸಾಫಲ್ಯವಾವುದು ಬೇಕು?

ವಿಲಿಂಗ್ಡನ್ ಕಾಲೇಜ್
೧೮-೩-೧೯೪೨

ವಿ. ಕೃ. ಗೋಕಾಕ.

# ಬರಹಗಾರನ ಬಿನ್ನಹ

ಕರ್ನಾಟಕಾಂಬೆಯ ದಿವ್ಯಮೂರ್ತಿಯ ಸಾಕ್ಷಾತ್ಕಾರವಾಗಿ ಸಿರಿಚೆಟ್ಟೆಯಿಂದ ಸೇವೆಮಾಡುತ್ತ ಸಂದಿ ಹಿಡಿದು ಕುಳಿತ ಮುಗ್ಗಲಗೇಡಿ ಮಾನವರಲ್ಲಿ ನಾನೊಬ್ಬನಿರುವೆನು. ಇದೇ ನನ್ನ ಮೊದಲನೆಯ ಸೇವೆ. ಹಿಂದಿನವೆಲ್ಲ ಮುಚ್ಚುಬಾಗಣಗಳಾಗಿದ್ದು ಅಸ್ತವ್ಯಸ್ತವಾಗಿ ಪದ್ಯರೂಪದಲ್ಲಿವೆ. ಅನೇಕ ವರ್ಷಗಳ ಹಿಂದೆ ಕೀರ್ತನಕಾರರ ನಾಲಗೆಯ ಮೇಲೆ ಮಹಾರಾಷ್ಟ್ರೀಯ ಸುಭಾಷಿತಗಳು ಸುಳಿದಾಡುತ್ತಿದ್ದಾಗ ಕನ್ನಡ ಕಾವ್ಯಭಂಡಾರದೊಳಗಿಂದ ರತ್ನಗಳನ್ನು ಆಯ್ದುಕೊಂಡು ನಾನೊಂದು ಕೀರ್ತನತರಂಗಿಣಿಯನ್ನು ರಚಿಸಿದೆ, ಶೇಷಗಿರಿಯ ಶ್ರೀ. ದೇಸಾಯಿ ಹಣಮಂತರಾಯರು ಒದಗಿಸಿದ ಗ್ರಂಥಸಹಾಯದಿಂದ. ಹಳ್ಳಿಯ ವೈದ್ಯನಾದೆ; ಪದ್ಯಕಾರನಾದೆ. ಮುಂದೆ ಅಲ್ಲಲ್ಲಿ ಹಳ್ಳಿಗಳೊಳಗೆ ಸುರುವಾದ ಸಹಕಾರ ಚಳವಳಿಯ ದಿನದಲ್ಲಿ ನಾಸಿದ್ದ ಹಳ್ಳಿಯಲ್ಲೊಂದು ಸಹಕಾರಿ ಸಂಘವನ್ನು ಸ್ಥಾಗತಿಸಿ ಅದರ ಕಾರ್ಯದರ್ಶಿಯಾದೆ. ಆಗ ಹಳ್ಳಿಗಳಲ್ಲಿ ಪ್ರಬಲರಾದ 'ಗ್ರಾಮಪಂಚಾನನ'ರ ದಿವ್ಯದರ್ಶನವು ನನಗಾಯಿತು. ಇಂತಹರ ಸ್ವಭಾವ-ಕೃತಿಗಳನ್ನು ಕುರಿತು ನಾನು ರಚಿಸಿದ ಕೆಲವು ಪದ್ಯಗಳನ್ನು ಶ್ರೀ. ಗಳಗನಾಥರೆದುರಿಗಂದು ತೋರಿಸಿದೆನು. ಅವರು ನಾನೊಂದು ಸಾಮಾಜಿಕ ಕಾದಂಬರಿಯನ್ನು ಬರೆಯಬಹುದೆಂದು ಸೂಚಿಸಿದರು. ನಾನು ಎಂದೂ ಗದ್ಯಗ್ರಂಥಗಳನ್ನು ಬರೆದವನಲ್ಲ; ತಲೆಯಲ್ಲಿ ತುಂಬಿದ ವಿಷಯಗಳನ್ನೆಲ್ಲ ಸ್ವಲ್ಪ ವೇಳೆಯಲ್ಲಿಯೇ ಪದ್ಯರೂಪದಲ್ಲಿ ಹೊರಗೆಡಹಿ ಕೈಝಾಡಿಸಿ ಏಳುವ ಚಂಚಲ ಸ್ವಭಾವದವನು. ಹೀಗಿರುವಾಗ ತಿಂಗಳುಗಟ್ಟಲೆ ಕಾದಂಬರಿಯೊಂದನ್ನು ಸೇರಿಸಿಕೊಂಡು ತಲೆಯನ್ನು ಭಾರ ಮಾಡಿಕೊಂಡು ಕುಳಿತುಕೊಳ್ಳುವದು ನನಗೆ ಸಾಧ್ಯವಿರಲಿಲ್ಲ. ಆದರೂ ನನ್ನ ಪದ್ಯಗಳಲ್ಲಿ ವರ್ಣಿಸಿದ ಸಾಮಾಜಿಕ ವಿಷಯಗಳನ್ನು ಕಲೆಹಾಕಿ ಪಾತ್ರಗಳನ್ನು ಕಲ್ಪಿಸಿಕೊಂಡು ಕಾದಂಬರಿಯನ್ನು ಬರೆಯಲಿಕ್ಕೆ ಅಣಿಯಾದೆನು. ಅಷ್ಟರಲ್ಲಿ 'ಇಜ್ಜೋಡು' ಪ್ರಸಿದ್ಧವಾಯಿತು. ಆಗ ಅದನ್ನು ಆಮೂಲಾಗ್ರವಾಗಿ ಓದಿ ಈ ಕಾದಂಬರಿಗೆ ಮೊದಲು 'ಮುಗ್ಗೇಡು' ಎಂದು ಹೆಸರಿಟ್ಟು ಬರೆಯಲು ಪ್ರಾರಂಭಿಸಿದೆನು. ಹಳ್ಳಿಯ ಮಾಸ್ತರಕಿಯಲ್ಲಿ, ಪುಕ್ಕಟೆ ವೈದ್ಯಕಿಯಲ್ಲಿ,

ಉಳಿದಷ್ಟು ವೇಳೆಯಲ್ಲಿ ಕುಂಟುತ್ತ ಕಾದಂಬರಿಯು ಮುಂದುವರಿಯಿತು. ಒಂದು ರಾತ್ರಿ ಊಟವಿಲ್ಲದೆ ಬೆಳ್ಳಬೆಳಗಾಗುವ ವರೆಗೆ ಕುಳಿತು 'ಮೆಚ್ಚು ಮದ್ದು ಮರಣವ ತಂದಿತು' ಎಂಬ ಪ್ರಕರಣವನ್ನು ಬರೆದು ಹೊರಗೆ ಹೋಗಲು ಮುಳುಗುವ ಚಂದ್ರಮನನ್ನು ನೋಡಿ ಚಂದ್ರಾಸ್ತವನ್ನು ವರ್ಣಿಸಿ ಆ ಪ್ರಕರಣವನ್ನು ಮುಗಿಸಿದೆನು. ಮರುದಿನ ಮುಂಜಾನೆ ಮನೆಯವರೆದ್ದು 'ನಿಮ್ಮಷ್ಟಕ್ಕೆ ನೀವೆಯಾದರೂ ಊಟ ಮಾಡಿದಿರಾ?' ಎಂದು ಕೇಳಿದಾಗ 'ಶ್ರೀಪತಿರಾಯರಂಥ ಸಜ್ಜನರು ದುರ್ಜನರ ಬಲೆಗೆ ಬಿದ್ದು ಸಿಕ್ಕು ಸತ್ತಾಗ ನನಗೆಲ್ಲಿ ಊಟ ಬೇಕಾಗಿದೆ?' ಎಂದೆನು. ಆಗ ಮನೆಯವರು ಗಾಬರಿಯಾಗಿ 'ಅಯ್ಯೋ! ಯಾರು ಸತ್ತರು?' ಎಂದು ಕೇಳಲು 'ನನ್ನ ಕಾದಂಬರಿಯಲ್ಲಿಯ ಒಂದು ಸತ್ಪಾತ್ರವು ಸತ್ತಿತು' ಎಂದುಹೇಳಿ ಆ ಪ್ರಕರಣವನ್ನು ಓದಿ ತೋರಿಸಿದೆನು. ಹೀಗೆ ನಡೆದಿತ್ತು ನನ್ನ ಕಾದಂಬರಿ.

ಈ ನನ್ನ ಕಾದಂಬರಿಯು ಯಾವ ವ್ಯಕ್ತಿಗಳಿಗೂ ಸಂಬಂಧಿಸಿದ್ದಲ್ಲ. ಅನೇಕ ಹಳ್ಳಿಗಳಲ್ಲಿ ಅಲೆದಾಡಿ, ಅನೇಕ ವ್ಯಕ್ತಿಗಳ ಗುಣಧರ್ಮಗಳನ್ನು ಪರಿಶೀಲಿಸಿ, ಕಲ್ಪನಾಸೃಷ್ಟಿಯಲ್ಲಿ ಪಾತ್ರಗಳನ್ನು ಕಲ್ಪಿಸಿ ಬರೆದದ್ದಾಗಿದೆ. ಈಗ ಹಳ್ಳಿಗಳ ನಿಜವಾದ ಪರಿಸ್ಥಿತಿಯು ಹೇಗಿದೆ? ಹಳ್ಳಿಗಳು ಅವನತಪಥವನ್ನು ಹಿಡಿದು ಹಾಳಾಗಲಿಕ್ಕೆ ಕಾರಣಗಳು ಯಾವವು? ಹಳ್ಳಿಗಳ ಉದ್ಧಾರಕ್ಕಾಗಿ ಸರಕಾರವು ಮಾಡುವ ಪ್ರಯತ್ನಗಳೆಲ್ಲ ಯಾಕೆ ನಿಷ್ಫಲವಾಗುತ್ತವೆ? ಎಂಬ ವಿಷಯವನ್ನೇ ಇಲ್ಲಿ ಪ್ರಾಮುಖ್ಯವಾಗಿ ಪ್ರತಿಪಾದಿಸಿರುವೆನು. ರಾಜಕಾರಣದಲ್ಲಿದ್ದ ಕುಟಿಲತಂತ್ರವು ಹಳ್ಳಿಯ ಸಮಾಜದಲ್ಲಿ ಪ್ರವೇಶಿಸಿದ್ದನ್ನು 'ಕಲಿಪ್ರವೇಶ'ವೆಂಬ ಪ್ರಕರಣದಿಂದ ಪ್ರಾರಂಭಿಸಿ, ಹಳ್ಳಿಯಲ್ಲಿದ್ದ ಸ್ವಾರ್ಥಸಾಧಕರು ತಮ್ಮ ಇಚ್ಛಾಸಿದ್ಧಿಗಾಗಿ ಹೂಡಿದ ಕುತಂತ್ರಗಳನ್ನೂ, ಆ ಕುತಂತ್ರಗಳ ಬಲಿಗೆ ಬಿದ್ದು ಸಮಾಜದಲ್ಲಿದ್ದ ಸಜ್ಜನರಾದ ಸ್ತ್ರೀಪುರುಷರು ನರಳಿದ್ದನ್ನೂ, ಹಳ್ಳಿಯ ಸಮಾಜದಲ್ಲಿ ಮನೆಮಾಡಿಕೊಂಡಿದ್ದ ಸತ್ಯ, ನ್ಯಾಯ, ಭೂತದಯೆ, ಸಹಾನುಭೂತಿ ಮೊದಲಾದ ಸದ್ಗುಣಗಳನ್ನು ಕುಟಿಲತಂತ್ರವು ತುಳಿದು ಮೆಟ್ಟಿ, ತನ್ನ ಪ್ರಭಾವವನ್ನು ತೋರಿಸಿದ್ದನ್ನೂ ಬೇರೆ ಬೇರೆ ಪ್ರಕರಣಗಳಲ್ಲಿ ನಿರೂಪಿಸಿರುವೆನು. ಒಟ್ಟಿಗೆ ಹಳ್ಳಿಯಲ್ಲಿರತಕ್ಕ ಸ್ವಾರ್ಥಸಾಧಕ ಶಕುನಿಗಳ ಕಾರಸ್ಥಾನಗಳೆಲ್ಲ ಇಲ್ಲಿರುವವು. ಪರೋತ್ಕರ್ಷ ಸಹನವಾಗದ ಹಳ್ಳಿಯ

ಶಕುನಿಗಳು ಪರಹಿತದ ಘಾತ ಮಾಡುವದೇ ತಮ್ಮ ಕರ್ತವ್ಯವೆಂದು ತಿಳಿದು ಪರೋಪಕಾರಿಗಳ ವೇಷವನ್ನು ಧರಿಸಿ, ಅನೇಕ ವ್ಯಕ್ತಿಗಳ ಮೇಲೆ ತಮ್ಮ ಕುಟಿಲತಂತ್ರಗಳ ಪ್ರಯೋಗ ಮಾಡಿ, ಹಳ್ಳಿಯ ಸಮಾಜವನ್ನೇ ಹಾಳು ಮಾಡಿದ್ದನ್ನು ಇಲ್ಲಿ ಕಾಣಬಹುದು. ಈ ಕೃತಿಯು ಪಟ್ಟಣವಾಸಿಗಳಿಗೆ ಮನೋರಂಜಕವೂ, ಹಳ್ಳಿಗರಿಗೆ ಮರ್ಮಭೇದಕವೂ, ಹಳ್ಳಿಯ ಸುಧಾರಣೆ ಗಾಗಿ ಹೆಣಗುವವರಿಗೆ ಮಾರ್ಗದರ್ಶಕವೂ ಆಗಬಹುದು. ಹಳ್ಳಿಗಳ ನಿಜವಾದ ಪರಿಸ್ಥಿತಿಯ ಜ್ಞಾನವಿದ್ದವರಿಗೆ ಬರೆಯಲು ಬರುವಂತಿಲ್ಲ; ಅವರಲ್ಲಿ ಒಬ್ಬಿಬ್ಬರು ಬರಹ ಬಲ್ಲವರಿದ್ದರೆ ಅವರಿಗೆ ಬರೆಯಲು ಧೈರ್ಯವಿಲ್ಲ. ಇನ್ನು ಪಟ್ಟಣವಾಸಿ ಗಳಲ್ಲಿ ವಕೀಲ ವರ್ಗದವರ ಹೊರತಾಗಿ ಉಳಿದವರಿಗೆ ಹಳ್ಳಿಗಳ ಪರಿಸ್ಥಿತಿಯ ಸಾಮಾನ್ಯ ಜ್ಞಾನವಾಗಿದ್ದರೂ ಹಳ್ಳಿಗಳ ಶಕುನಿಗಳಿಂದಲೇ ವಕೀಲ ವರ್ಗದ ಉದರಂಭರಣವಾಗುತ್ತಿರುವದರಿಂದ, ತಮ್ಮ ಹೊಟ್ಟೆಯ ಮೇಲೆ ಕಲ್ಲು ಹೇರಿ ಕೊಳ್ಳುವ ಕಾರ್ಯಕ್ಕೆ ಅವರು ಕೈಹಾಕದಿರುವದು ಸ್ವಾಭಾವಿಕವಿದೆ. 'ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ'ವೆಂಬಂತೆ ಹಳ್ಳಿಗರ ನಿಜವಾದ ಪರಿಸ್ಥಿತಿಯ ಅರಿವೇ ಸಮಾಜಕ್ಕೆ ಇಲ್ಲದಂತಾಗಿದೆ. ಇಂಥ ಪರಿ ಸ್ಥಿತಿಯಲ್ಲಿ ಬರಹಗಾರನಲ್ಲದ ನಾನು ಹಳ್ಳಿಗಳ ನಿಜವಾದ ಸ್ಥಿತಿಯನ್ನು ಬೈಲಿ ಗಿಡಬೇಕೆಂಬ ಉದ್ದೇಶದಿಂದ ಈ ಸಾಮಾಜಿಕ ಕಾದಂಬರಿಯನ್ನು ಬರೆಯುವ ಸಾಹಸ ಮಾಡಿರುವೆನು. ನನ್ನ ಪರಿಶ್ರಮದ ಫಲಿತಾರ್ಥವು ನನಗಂತೂ ಹೊಳೆಯದು. ಓದುಗರೇ ಅದನ್ನು ಮನಗಾಣಬೇಕು. ನನ್ನ ಕನ್ನಡ ಗುರುಗಳಾದ ಶ್ರೀ. ಗಳಗನಾಥರು ಈ ಕಾದಂಬರಿಯ ಕೆಲವು ಪ್ರಕರಣ ಗಳನ್ನು ಕೇಳಿ 'ಈ ಕೃತಿಯಲ್ಲಿ ಪ್ರಾಚೀನ ಅರ್ವಾಚೀನ ಪದ್ಧತಿಗಳ ಮಧ್ಯ ಸ್ಥಿಕೆ'ಯಾಗಿದೆಯೆಂದು ಆಶೀರ್ವದಿಸಿದರು. ಪ್ರೊ. ಗೋಕಾಕರು ಇದನ್ನೋದಿ ಅನೇಕ ಸಲಹೆಗಳನ್ನು ಕೊಟ್ಟರು. ಮನೋಹರ ಗ್ರಂಥಮಾಲೆಯ ಸಂಪಾ ದಕರು ಇದನ್ನು ತಮ್ಮ ಮಾಲೆಯಲ್ಲಿ ಪ್ರಕಟಿಸಿದರು. ಇವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ಹುಲಗೂರು<br>
೧-೩-೧೯೪೦.

ಬಾ. ಕೃ. ಲಕ್ಷ್ಮೇಶ್ವರ.

# ಅರ್ಪಣ

ಕರ್ನಾಟಕದ ಸುಪ್ರಸಿದ್ಧ ಕಾದಂಬರಿಕಾರರೂ

ಕರ್ನಾಟಕಮಾತೆಯ ಅನನ್ಯಸೇವಕರೂ

ಹಾಗು ತನ್ನ ಕನ್ನಡ ಗುರುಗಳೂ ಆಗಿ

ಪ ರ ಮ ಪೂ ಜ್ಯ ರಾ ದ

**ಶ್ರೀ. ಗಳಗನಾಥರ**

ಚರಣಸನ್ನಿಧಿಯಲ್ಲಿ

ಲೇಖಕನು ಈ ಮೊದಲನೆಯ

ಕೃತಿಯನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸಿರುವನು.

ಮನೋಹರ ಗ್ರಂಥಮಾಲೆಯ ೪೨ನೆಯ ಕುಸುಮ

ಮುಂದಿನ ಕುಸುಮ

# ಮಾರ್ಗದರ್ಶಕ

(ಮಾರ್ಮಿಕ ಸಣ್ಣ ಕತೆಗಳ ಸಂಗ್ರಹ)

ಕತೆಗಾರರು:

ಎಂ. ವಿ. ಸೀತಾರಾಮಯ್ಯ ಎಂ. ಎ.

# ಗ್ರಾಮಪಂಚಾನನ

## ೧

**ಬೊಮ್ಮಗೇರಿ....**

ಬೊಮ್ಮಗೇರಿಯೆಂಬುದು ಮಲೆನಾಡಿನಲ್ಲಿರುವ ಒಂದು ಗ್ರಾಮವು. ಇದು ಪ್ರಾಚೀನಕಾಲದಿಂದ ಹೆಸರುವೆತ್ತ ಗ್ರಾಮವಿರದಿದ್ದರೂ, ಅರ್ವಾಚೀನ ಕಾಲದಲ್ಲಿ ಪ್ರಸಿದ್ಧಿಪಡೆದಿತ್ತೆಂಬುದು ಗಂಗಾಧರದೀಕ್ಷಿತರು ಬರೆದ "ಬ್ರಹ್ಮಪುರಿ-ವರ್ಣನೆ" ಎಂಬ ಕಾವ್ಯದಿಂದ ತಿಳಿದುಬರುತ್ತದೆ. ಈ ಗ್ರಂಥದ ಹಸ್ತಲಿಖಿತ ಪತ್ರಗಳು ಚಹಾಭಕ್ತರ ಚೂಡಾಪ್ರಾಶನದ ಪಾತ್ರಗಳಾಗಿ ಹೋದವು. ಇದಕ್ಕೆ ಗಂಗಾಧರದೀಕ್ಷಿತರ ವಂಶದಲ್ಲಿ ಸರಸ್ವತಿಭಕ್ತರ ಸುಳಿವು ಅಡಗಿ, ಸೇವಾಧುರಂಧರರು ಉದಯಹೊಂದಿದ್ದೇ ಕಾರಣವಿರಬಹುದು. ಗಂಗಾಧರದೀಕ್ಷಿತರ ಸಮಕಾಲೀನರಾದ ವಯೋವೃದ್ಧ ಜನರ ಮಾತಿನಿಂದ ಹಾಗು ಅವರ ಮನೆತನದಲ್ಲಿ ಅಸ್ತವ್ಯಸ್ತವಾಗಿ ದೊರೆಯುವ ಕೆಲವು ಪುಟಗಳಿಂದ ಬ್ರಹ್ಮಪುರಿ-ವರ್ಣನದ ಸಾಮಾನ್ಯ ಜ್ಞಾನವಾಗುವಂತಿದೆ. ಗಂಗಾಧರದೀಕ್ಷಿತರು ತಮ್ಮ ಗ್ರಂಥವನ್ನು, ಮಹಾಭಾರತಕ್ಕೆ ಹೋಲಿಸಿ ಬರೆದಿದ್ದರೆಂಬುದು ಆ ಗ್ರಂಥದಲ್ಲಿರುವ ಹದಿನೆಂಟು ಅಧ್ಯಾಯಗಳಿಂದ, ಆದಿ ಪರ್ವದಿಂದ ಸ್ವರ್ಗಾರೋಹಣ ಪರ್ವಗಳ ವರೆಗೆ ಒಂದೊಂದು ಅಧ್ಯಾಯಕ್ಕೆ ಕ್ರಮವಾಗಿ ಹೆಸರು ಕೊಟ್ಟಿದ್ದರ ಮೇಲಿಂದ, ಅಲ್ಲಲ್ಲಿ ಪಾಂಡವರ ರಾಜ್ಯದ ಉಪಮೆಯನ್ನು ಕೊಟ್ಟು ವರ್ಣನೆ ಮಾಡಿದ್ದರ ಮೇಲಿಂದ ತಿಳಿದುಬರುತ್ತದೆ. ಈ ಗ್ರಂಥವು ಸಂಸ್ಕೃತ ಕಾವ್ಯವಾಗಿದ್ದು ಇದರ ಆಧಾರದಿಂದ ಬೊಮ್ಮಗೇರಿಯ ಇತಿಹಾಸವನ್ನು ಸ್ವಲ್ಪಾದರೂ ತಿಳಿಯಲು ಸಾಧ್ಯವಿದೆ.

ಮೊದಲಿಗೆ ಬೊಮ್ಮಗೇರಿಯು ಉತ್ತಂಗಿಯ ಮಹಲಿನ ಸಮೀಪದಲ್ಲಿರುವ ಒಂದು ಸಣ್ಣ ಹಳ್ಳಿಯು. ವಿಜಯನಗರ ಸಾಮ್ರಾಜ್ಯದ ಉನ್ನತ ಸ್ಥಿತಿಯಲ್ಲಿ ಉತ್ತಂಗಿಯು ಊರ್ಜಿತಸ್ಥಿತಿಯಲ್ಲಿತ್ತು. ಅಲ್ಲಿ ಮಹಲಕರಿ ಕಚೇರಿಯಿದ್ದು ಸುತ್ತಲೂ ಭದ್ರವಾದ ಕೋಟೆಯಿತ್ತು. ಕೋಟೆಗೆ ಎರಡು ಮಹಾದ್ವಾರಗಳೂ ಒಂದು ಗುಪ್ತದ್ವಾರವೂ ಇದ್ದವು. ಊರ ಮಧ್ಯದಲ್ಲಿ ಪೇಟೆಯು ಹಾಗು ದೊಡ್ಡ ದೊಡ್ಡ ಶ್ರೀಮಂತರ ಮನೆಗಳಿದ್ದವು. ಉತ್ತರಕ್ಕೆ ದಂಡಾಳುಗಳ ಬಿಡಾರವಿದ್ದು ಅದಕ್ಕೆ ದಂಡಿನಪೇಟೆಯೆನ್ನುತ್ತಿದ್ದರು. ಪೂರ್ವಕ್ಕೆ ಮಹಲಕರಿ ಮೊದಲಾದ ಅಧಿಕಾರಸ್ಥರ ಕಚೇರಿಗಳಿದ್ದು ಅದಕ್ಕೆ ಮಹಾಲ ಪೇಟೆಯೆನ್ನುತ್ತಿದ್ದರು. ದಕ್ಷಿಣಕ್ಕೆ ಒಕ್ಕಲಿಗರು ವಾಸವಾಗಿದ್ದು ಅದಕ್ಕೆ ಮೇಟಿಗೇರಿಯೆನ್ನುತ್ತಿದ್ದರು. ಪಶ್ಚಿಮಕ್ಕೆ ಶಿಲ್ಪಿಗರ ಮನೆಗಳಿದ್ದು ಅದಕ್ಕೆ ಚಿಪ್ಪಿಗರ ಓಣಿಯೆನ್ನುತ್ತಿದ್ದರು. ಅಲ್ಲಲ್ಲಿ ಅನೇಕ ದೇಗುಲಗಳ ಕಳಸಗಳು ಕಂಗೊಳಿಸುತ್ತಿದ್ದವು. ಕೋಟೆಗೆ ಭದ್ರವಾದ ಕಲ್ಲುಗೋಡೆಯಿದ್ದು ಅದರ ಮೇಲೆ ದಂಡಾಳುಗಳಿಂದ ತುಂಬಿದ ಹನ್ನೆರಡು ಬುರುಜುಗಳಿದ್ದವು. ಗೋಡೆಯ ಸುತ್ತಲೂ ಆಳವಾದ ಕಂದಕವಿದ್ದು ಅಲ್ಲಿ ನೀರು ಯಾವಾಗಲೂ ತುಂಬಿ ತುಳುಕುತ್ತಿತ್ತು. ಕೋಟೆಯ ಪಶ್ಚಿಮಕ್ಕೆ ದೊಡ್ಡ ಕೆರೆಯಿದ್ದು ಕೆರೆಯ ಕೆಳಬದಿಗೆ ಹಲಸು, ತೆಂಗು, ಕೌಂಗು, ಬಾಳೆ, ಕಿತ್ತಳೆ, ಲಿಂಬೆ, ಮೊದಲಾದ ಫಲವೃಕ್ಷಗಳಿಂದ ಕೂಡಿದ ಅನೇಕ ತೋಟಗಳಿದ್ದವು. ಉತ್ತರ ದಕ್ಷಿಣ ದಿಕ್ಕುಗಳಲ್ಲಿ ಸೆಲ್ಲುಗದ್ದೆಗಳು ಸಾಲಾಗಿ ಪಾವಟಿಗೆಗಳಂತೆ ಕಂಗೊಳಿಸುತ್ತಿದ್ದವು. ಹೀಗಿರುವದರಿಂದ ಉತ್ತಂಗಿಯು ಯಾವಾಗಲೂ ಚೆಲುವಾಗಿ ಕಾಣುತ್ತಿತ್ತು.

ಉತ್ತಂಗಿಯು ಈ ರೀತಿಯಾಗಿ ವಸಂತನ ವಸತಿಸ್ಥಾನವಾದರೂ ವೇಶ್ಯಾಂಗನೆಯರ ವಿಹಾರಸ್ಥಳವಾಗಿರಲಿಲ್ಲ. ಉತ್ತಂಗಿಯಿಂದ ಪೂರ್ವಕ್ಕೆ ಒಂದು ಮೈಲಿನ ಮೇಲೆ ವಾರಾಂಗನೆಯರ ಒಂದು ಓಣಿಯಿತ್ತು. ಅಲ್ಲಿ ಬೊಮ್ಮಾಸಾನಿಯೆಂಬವಳು ಅತ್ಯಂತ ರೂಪವತಿಯಾಗಿದ್ದು ನೃತ್ಯ, ಗಾಯನಗಳಲ್ಲಿ ನಿಪುಣಳಾಗಿದ್ದಳು. ಉತ್ತಂಗಿಯಲ್ಲಿ ನಡೆಯುತಕ್ಕ ಉತ್ಸವದ ಪ್ರಸಂಗಗಳಲ್ಲಿ ಬೊಮ್ಮಾಸಾನಿಯಿರದೆ ನಡೆಯುವಂತಿರಲಿಲ್ಲ. ಸಾನಿಯ ಪ್ರತಿಷ್ಠೆಯು ವಿಶೇಷವಾಗಿ ಬೆಳೆದು ಅವಳಿರುವ ಕೇರಿಗೆ ಬೊಮ್ಮಗೇರಿಯೆಂಬ ಹೆಸರು

ಬಿದ್ದಿತ್ತು. ಬೊಮ್ಮಿಗೇರಿಯು ವಿಟಪುರುಷರ ವಿಹಾರಸ್ಥಳವೂ, ವ್ಯಸನಿಗಳ ವಾಸಸ್ಥಳವೂ, ಉಡಾಳರ ಉಗಮಸ್ಥಳವೂ, ಗಾಯಕರ ಗುರುಸ್ಥಳವೂ, ಜಾರರ ಜನ್ಮಸ್ಥಳವೂ, ಕೃತಘ್ನರ ಕಾರ್ಯಸ್ಥಳವೂ ಆಗಿತ್ತು.

ವಿಜಯನಗರ ಸಾಮ್ರಾಜ್ಯವು ನಾಶವಾದ ಬಳಿಕ ಅಲ್ಲಲ್ಲಿ ಅನೇಕ ಪಾಳೆಗಾರರು ಸ್ವತಂತ್ರರಾದರು. ಆಗ ಉತ್ತಂಗಿಯ ಮಹಲು ಸ್ವಾದಿಯ ನಾಯಕರ ಸ್ವಾಧೀನವಾಯಿತು. ಸ್ವಾದಿಯ ನಾಯಕರ ಮಹಲಕರಿಯು ಉತ್ತಂಗಿಯಲ್ಲಿರಹತ್ತಿದನು. ಉತ್ತಂಗಿಯ ಸಮೀಪದಲ್ಲಿರುವ ಬಸಪಪುರಿಯ ವೀರಲಿಂಗಣ್ಣ ದೇಸಾಯರು ಉತ್ತಂಗಿಯ ಮಹಲಿನ ರಕ್ಷಕರಾದರು. ಇವರು ಸ್ವತಃ ಶೂರರಿದ್ದು ಇವರಲ್ಲಿ ಎರಡುನೂರು ಮಂದಿ ಕುದುರೆಯ ರಾಹುತರೂ ಸಾವಿರಾರು ದಂಡಾಳುಗಳೂ ಯಾವಾಗಲೂ ಸಜ್ಜಾಗಿರುತ್ತಿದ್ದರು. ವೀರಲಿಂಗಣ್ಣನವರು ದಕ್ಷತೆಯಿಂದ ಉತ್ತಂಗಿಯ ಮಹಲನ್ನು ರಕ್ಷಿಸುತ್ತಿದ್ದುದರಿಂದ ಅದ್ದೂಖಾನನಂಥ ಪ್ರಚಂಡ ಶೂರಪುರುಷನು ಸಹ ಉತ್ತಂಗಿಯ ಮಹಲಿನ ಗಡಿಗೆ ಬರಲು ಅಂಜುತ್ತಿದ್ದನು. ಹೀಗಿರಲು ಅಲ್ಲಿಆದಿಲ್‌ಶಹನು ಧಾರವಾಡದ ಕೋಟೆಯನ್ನು ವಶಮಾಡಿಕೊಂಡು ಸ್ವಾದಿಯ ನಾಯಕರ ರಾಜ್ಯದಲ್ಲಿ ಹೊಕ್ಕು ಒಂದೊಂದೇ ಮಹಲನ್ನು ವಶಮಾಡಿಕೊಳ್ಳುತ್ತಿರುವನೆಂಬ ವಾರ್ತೆಯು ವೀರಲಿಂಗಣ್ಣನವರಿಗೆ ಹತ್ತಿತು. ಆಗ ಸ್ವತಃ ಸೇನಾಪತಿಗಳಾಗಿ ತಮ್ಮ ನಾಡಿನ ಗಡಿಯನ್ನು ರಕ್ಷಿಸುತ್ತ ನಿಂತ ಅವರೆದುರಿಗೆ ಅಲ್ಲಿಆದಿಲ್‌ಶಹನು ಕಳುಹಿದ ಮಹಮ್ಮದಖಾನನು ತಲ್ಲಣಿಸಿ ಹೋದನು. ಆಗ ಅವನು ಗುಪ್ತವೇಷದಿಂದ ಬೊಮ್ಮಿಗೇರಿಗೆ ಬಂದು ಬೊಮ್ಮಾಸಾನಿಗೆ ದುಡ್ಡಿನ ದುರಾಶೆ ಹಚ್ಚಿ ವಿಟರ ವೇಷದಿಂದ ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ಸರದಾರರನ್ನಿಟ್ಟು, ಉತ್ತಂಗಿಯ ಗುಪ್ತದ್ವಾರವನ್ನು ಬೊಮ್ಮಾಸಾನಿಯಿಂದ ತಿಳಿದುಕೊಂಡು, ಅಕಸ್ಮಾತ್ತಾಗಿ ಕೋಟೆಯ ಮೇಲೆ ಬಿದ್ದು ಮಹಾದ್ವಾರವನ್ನು ಒಳಗಿನಿಂದ ತೆರೆದು, ಉತ್ತಂಗಿಯನ್ನು ಹಾಳುಮಾಡಿದನು. ಈ ಯುದ್ಧದಲ್ಲಿ ವೀರಲಿಂಗಣ್ಣನವರು ಮಡಿದರು. ಅಲ್ಲಿರುವ ಜನರು ನಿರಾಶ್ರಿತರಾಗಿ ಗ್ರಾಮತ್ಯಾಗ ಮಾಡಿದರು. ಹೀಗೆ ಬೊಮ್ಮಾಸಾನಿಯ ಕೃತಿಗಳಿಂದ ಉತ್ತಂಗಿಯ ಉನ್ನತಸ್ಥಿತಿಯು ಮಣ್ಣುಗೂಡಿತು. ಮುಂದೆ ಅಲ್ಲಿಆದಿಲ್‌ಶಹನು ವೀರಲಿಂಗಣ್ಣನವರ ಮಗನಾದ ಸಿದ್ಧರಾಮಣ್ಣ

ನಿಗೆ ದೇಸಗತ್ತಿಯನ್ನು ಕೊಟ್ಟು, ಬೊಮ್ಮಾಸಾನಿಯ ಮನೆಗೆ ಬೆಂಕಿಯನ್ನು ಹಚ್ಚಿ ಬೊಮ್ಮಗೇರಿಯಲ್ಲಿರುವ ವೇಶ್ಯಾಂಗನೆಯರನ್ನು ಪರಿಪರಿಯಾಗಿ ಅಪಮಾನಗೊಳಿಸಿ ಬೊಮ್ಮಗೇರಿಯನ್ನು ಹಾಳುಗೆಡಹಿ, ಉತ್ತಂಗಿಯಲ್ಲಿ ವಿಜಾಪುರದ ಮಹಲಕರಿಯನ್ನು ನಿಯಮಿಸಿ ಹೊರಟುಹೋದನು. ಹೀಗಾಗಿ ಬೊಮ್ಮಗೇರಿಯಲ್ಲಿ ವೇಶ್ಯಾಂಗನೆಯರು ಮಾಯವಾದರು.

ವಿಜಾಪುರ ರಾಜ್ಯದ ವೈಭವಕಾಲದಲ್ಲಿಯೂ ಉತ್ತಂಗಿಯು ಮಹಲಿನ ಸ್ಥಳವಾಗಿತ್ತು. ಆದರೆ ಮೊದಲಿನ ಉನ್ನತ ಸ್ಥಿತಿಯಲ್ಲಿರಲಿಲ್ಲ. ಬರಬರುತ್ತ ಬೊಮ್ಮಗೇರಿಯು ಒಕ್ಕಲಿಗರ ಮತ್ತು ತೋಟಿಗರ ವಾಸಸ್ಥಳವಾಯಿತು. ಆದಿಲ್‌ಶಾಹಿಯ ರಾಜ್ಯವು ಹಾಳಾದ ಬಳಿಕ ಉತ್ತಂಗಿಯ ಮಹಲು ಸವಣೂರ ನವಾಬರ ರಾಜ್ಯಕ್ಕೆ ಸೇರಿತು. ಮೊದಲನೆಯ ಮಾಧವರಾಯನ ಸರದಾರರು ಉತ್ತಂಗಿಯ ಮಹಲನ್ನು ಸ್ವಾಧೀನಪಡಿಸಿಕೊಂಡು ಪೇಶವಾಯಿ ರಾಜ್ಯಕ್ಕೆ ಸೇರಿಸಿದರು. ಆಗ ಪೇಶ್ವೆಯವರು ನಿಯಮಿಸಿದ ಕಾರಭಾರಿಯು ಉತ್ತಂಗಿಯಲ್ಲಿರಹತ್ತಿದನು. ಗಂಗಾಧರಪಂತರೆಂಬುವರು ಇಂಥ ಒಬ್ಬ ಕಾರಭಾರಿಗಳಾಗಿದ್ದರು. ಆಗ ಅನೇಕ ಬ್ರಾಹ್ಮಣ ಕುಟುಂಬಗಳು ಬೊಮ್ಮಗೇರಿಗೆ ಬಂದವು. ಉತ್ತಂಗಿ ಮಹಲಿನ ದೇಶಪಾಂಡೆಯರೂ ತಮ್ಮ ಇನಾಮು ಗ್ರಾಮವನ್ನು ಬಿಟ್ಟು ಬಂದು ಬೊಮ್ಮಗೇರಿಯಲ್ಲಿಯೇ ಮನೆ ಮಾಡಿದರು. ದೇಸಾಯರು ಮಾತ್ರ ತಮ್ಮ ಇನಾಮು ಗ್ರಾಮವಾದ ಬಸವಪುರಿಯಲ್ಲಿಯೇ ಇರುತ್ತಿದ್ದರು. ಕಾಲಾಂತರದಲ್ಲಿ ದೇಸಾಯರ ಕಡೆಗಿದ್ದ ಮಹಲಿನ ಸಂರಕ್ಷಣೆಯ ಕಾರಭಾರವೂ ದೇಶಪಾಂಡೆಯರ ಕಡೆಗಿದ್ದ ಮಹಲಿನ ತೆರಿಗೆ ಯೆತ್ತುವ ಅಧಿಕಾರವೂ ಹೋಗಿ ಪೇಶ್ವೆಯವರು ನಿಯಮಿಸಿದ ಕಾರಭಾರಿಯೇ ಮಹಲಿನ ತೆರಿಗೆಯೆತ್ತುವವನೂ ರಕ್ಷಕನೂ ಆದನು. ದೇಸಾಯಿ ದೇಶಪಾಂಡೆ ಯವರಿಗೆ ತಮ್ಮ ಮಹಲನ್ನು ರಕ್ಷಿಸುವ ಭಾರವೂ ತೆರಿಗೆಯೆತ್ತುವ ಭಾರವೂ ತಪ್ಪಿದ್ದರಿಂದ ಅವರು ಈ ರೀತಿಯಾಗಿ ಬರಿಯ ವತನದಾರರಾದರು. ಅವರ ವತನಗಳು ಅಣ್ಣತಮ್ಮಂದಿರಲ್ಲಿ ಹಂಚಹತ್ತಿದವು. ಹೀಗಾಗಿ ದೇಸಾಯಿ ದೇಶಪಾಂಡೆಯರೂ ಸುಖವಸ್ತಿಗಾಗಿ ಬೊಮ್ಮಗೇರಿಯಲ್ಲಿ ಬಂದು ಇರಹತ್ತಿದರು. ಇವರ ಆಶ್ರಯಸ್ಥರಾದ ಅನೇಕ ಜನ ಬ್ರಾಹ್ಮಣರೂ ಬೊಮ್ಮಗೇರಿ ಯಲ್ಲಿಯೇ ಮನೆಮಾಡಿದರು. ಇದೇ ಕಾಲಕ್ಕೆ ಗಂಗಾಧರದೀಕ್ಷಿತರ ಅಜ್ಜಂದಿ

ರಾದ ಲಕ್ಷ್ಮಣದೀಕ್ಷಿತರೆಂಬವರೂ ಬೊಮ್ಮಗೇರಿಗೆ ಬಂದರು. ಇವರು ಬೊಮ್ಮಗೇರಿಯ ಊರಮಧ್ಯದಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಲಿಂಗಪ್ರತಿಷ್ಠಾಪನೆಯನ್ನು ಮಾಡಿದರು. ಇವರು ಕೇವಲ ವಿರಕ್ತರಿದ್ದು ತಮಗಿದ್ದ ಜಹಗೀರನ್ನು ಸಹ ಬಿಟ್ಟುಕೊಟ್ಟು ಬಂದಿದ್ದರಂತೆ. ವಿಶ್ವನಾಥ ಪಂತರೆಂಬ ಉತ್ತಂಗಿ ಮಹಲಿನ ಕಾರಭಾರಿಗಳು ಇವರ ಶಿಷ್ಯರಾಗಿದ್ದರು. ಅವರ ಪ್ರಯತ್ನದಿಂದ ಶಿವಾಲಯದ ಪೂಜಾ ವಿನಿಯೋಗಕ್ಕಾಗಿ ಪೇಶ್ವಾಯಿಯಿಂದ ಇನಾಮು ಭೂಮಿಯು ದೊರೆಯಿತು. ಮುಂದೆ ಕೆಲವು ಕಾಲದ ಮೇಲೆ ದಾಸಾಚಾರ್ಯರೆಂಬವರು ವೆಂಕಟಗಿರಿಯಿಂದ ಶ್ರೀನಿವಾಸನ ಪ್ರತಿಮೆಯನ್ನು ತಮ್ಮ ಹಸಿಬೆಯಲ್ಲಿ ಹಾಕಿಕೊಂಡು ಬಂದು ಬೊಮ್ಮಗೇರಿಯಲ್ಲಿ ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿ ಅಲ್ಲಿ ಆ ಮೂರ್ತಿಯ ಪ್ರತಿಷ್ಠಾಪನೆಯನ್ನು ಮಾಡಿದರು. ಆಗ ದಾಸಾಚಾರ್ಯರ ಭಕ್ತಿಗೆ ಮೆಚ್ಚಿ ವೆಂಕಟರಮಣನು ಗಿರಿಯಿಂದ ಬೊಮ್ಮಗೇರಿಗೆ ಬಂದಿರುವನೆಂಬ ವಾರ್ತೆಯು ಹಬ್ಬಿತು. ಆದ್ದರಿಂದ ಅನೇಕ ಜನ ವೆಂಕಟರಮಣನ ಭಕ್ತರು ಬೊಮ್ಮಗೇರಿಗೆ ಬಂದು ಇರಹತ್ತಿದರು. ಆ ಕಾಲಕ್ಕೆ ವಿದ್ವಾಂಸರೆಂದು ಪ್ರಸಿದ್ಧಿಯನ್ನು ಪಡೆದ ಭೀಮಸೇನಾಚಾರ್ಯರೂ ಬೊಮ್ಮಗೇರಿಗೆ ಬಂದರು. ಹೀಗಾಗಿ ವೆಂಕಟರಮಣನ ದೇವಾಲಯದ ಸುತ್ತಲೂ ಅನೇಕ ಮಾಧ್ವರ ಮನೆಗಳುಂಟಾದವು. ವೆಂಕಟರಮಣನ ಪೂಜಾವಿನಿಯೋಗಕ್ಕಾಗಿ ಸಹ ಪೇಶ್ವಾಯಿ ಸರಕಾರದಿಂದ ಇನಾಮು ಭೂಮಿಯು ದೊರೆಯಿತು.

"ಅರ್ಚಕರ ತಪೋಬಲದಿಂದ ಪ್ರತಿಮೆಯಲ್ಲಿ ದೇವತಾಸಾನ್ನಿಧ್ಯವು ಬರುವದೆ"ಂಬ ಉಕ್ತಿಯಂತೆ ಮಹಾತ್ಮರಾದ ಲಕ್ಷ್ಮಣದೀಕ್ಷಿತ ಮತ್ತು ದಾಸಾಚಾರ್ಯರ ತಪೋಬಲದಿಂದ ರಾಮೇಶ್ವರ ವೆಂಕಟರಮಣರ ಮೂರ್ತಿಗಳು ಜಾಗೃತಮೂರ್ತಿಗಳೆಂದು ಪ್ರತಿಷ್ಠೆಯನ್ನು ಪಡೆದವು. ಹೀಗೆ ಬೊಮ್ಮಗೇರಿಯು ಹರಿಹರ ಜಾಗೃತಿಸ್ಥಾನವಾಗಿ,—ಹನುಮಸಾಗರ ಪುಷ್ಕರಣಿಯು ಊರಮಧ್ಯದಲ್ಲಿದ್ದ ಕಾರಣ—ಸದಾ ಜಲಭರಿತವಾಗಿ, ತೃಣಪರ್ಣಕಾಷ್ಠಗಳ ಸಮೃದ್ಧಿಯನ್ನು ಪಡೆದು, ಅನೇಕರಿಗೆ ಯೋಗ್ಯ ಸ್ಥಾನವಾಯಿತು. ದೇಸಾಯಿಯೂ ದೇಶಪಾಂಡೆಯವರೂ ಅನೇಕ ಸಾವುಕಾರರೂ ವಿದ್ಯಾಪಕ್ಷಪಾತಿಗಳಾಗಿದ್ದರಿಂದ ಅವರ ಆಶ್ರಯದಲ್ಲಿ ದೂರದೂರದಿಂದ ವಿದ್ವಾಂಸರು

ಬಂದು ಇರಹತ್ತಿದರು. ಪುಲಿಗೆರೆಯಲ್ಲಿ ಪ್ರತಿಷ್ಠೆ ಪಡೆದ ಕರ್ಮಯೋಗಿ ತ್ರಿವಿಕ್ರಮಭಟ್ಟರ ಮೊಮ್ಮಕ್ಕಳಾದ ಘನಾಧ್ಯಾಯಿ ಉಮಾಪತಿಭಟ್ಟರು ತಮ್ಮ ತಮ್ಮಂದಿರೊಡನೆ ಬೊಮ್ಮಿಗೇರಿಗೆ ಬಂದು ವಿರೂಪಾಕ್ಷ ಜ್ಯೋತಿಷಿಗಳ ಆಶ್ರಯ ಹೊಂದಿ ಶಿಷ್ಯವರ್ಗಕ್ಕೆ ವೇದಾಧ್ಯಯನ ಮಾಡಿಸಹತ್ತಿದರು. ಹೀಗೆ ಕಾಲಕ್ರಮದಿಂದ ಬೊಮ್ಮಿಗೇರಿಯಲ್ಲಿ ನೂರಾರು ವೈದಿಕ ಕುಟುಂಬಗಳು ವಾಸಮಾಡಿದವು. ಇದೇ ಕಾಲಕ್ಕೆ ಗಂಗಾಧರದೀಕ್ಷಿತರು ಬೊಮ್ಮಿಗೇರಿಗೆ ಬ್ರಹ್ಮಪುರಿಯೆಂಬ ಹೆಸರಿಟ್ಟು ತಮ್ಮ ಕಾವ್ಯವನ್ನು ಬರೆದಿರಬಹುದು.

ಬ್ರಹ್ಮಪುರಿ-ವರ್ಣನೆಯ ಅನುಶಾಸನಾಧ್ಯಾಯದಲ್ಲಿ "ಲಕ್ಷ್ಮಣದೀಕ್ಷಿತರ ಭಕ್ತಿಗೆ ಮೆಚ್ಚಿ ರಾಮನಾಥನು ಲಿಂಗರೂಪದಿಂದ ಬ್ರಹ್ಮಪುರಿಯಲ್ಲಿ ಪ್ರಾದುರ್ಭೂತನಾದನೆಂದೂ, ಕೂಡಲೆ ಹನುಮಂತನು ದಾಸಾಚಾರ್ಯರ ರೂಪದಿಂದ ಕಲಿಯುಗದಲ್ಲಿ ವೆಂಕಟಪತಿಯಾಗಿ ಅವತಾರ ಮಾಡಿದ ತನ್ನ ಸ್ವಾಮಿಯನ್ನೂ ಹಾಗು ಸಮುದ್ರನಾಥನನ್ನೂ ಕರೆತಂದು ರಾಮನಾಥನ ಸನ್ನಿಧಿಯನ್ನು ಹೊಂದಿದ"ನೆಂದೂ ವರ್ಣನೆಯಿದೆ. ಇದರಿಂದ ಲಕ್ಷ್ಮಣದೀಕ್ಷಿತರು ಪ್ರತಿಷ್ಠಾಪನೆ ಮಾಡಿದ ಲಿಂಗಕ್ಕೆ ರಾಮನಾಥನೆಂದೂ, ದಾಸಾಚಾರ್ಯರು ಪ್ರತಿಷ್ಠೆ ಮಾಡಿದ ಪ್ರತಿಮೆಗೆ ವೆಂಕಟರಮಣನೆಂದೂ, ಇವೆರಡೂ ದೇಗುಲಗಳ ಮಧ್ಯದಲ್ಲಿರುವ ಪುಷ್ಕರಣಿಗೆ ಹನುಮಸಾಗರವೆಂದೂ ಹೆಸರು ಬಂದಿರಬಹುದು. ಅದೇ ಅಧ್ಯಾಯದಲ್ಲಿ "ದುರ್ಯೋಧನನ ರಾಜ್ಯವು ನಾಶವಾಗಿ ಧರ್ಮರಾಜನ ರಾಜ್ಯವು ಸ್ಥಾಪಿತವಾಗಿರುವದೆಂ"ದು ಹೇಳಿ, ದೇಸಾಯಿ ಶ್ರೀವಲ್ಲಭರಾಯರಿಗೆ ಧರ್ಮರಾಜನೆಂದೂ, ದೇಶಪಾಂಡೆ ಮಾಧವರಾಯರಿಗೆ ಭೀಮಸೇನನೆಂದೂ, ಕರಣಿಕ ಕೃಷ್ಣರಾಯರಿಗೆ ಅರ್ಜುನನೆಂದೂ ಚಿನಿವಾಲ ಲೋಕನಾಥನಾಯಕರಿಗೆ ನಕುಲನೆಂದೂ ಸಾವಕಾರ ವಿಶ್ವನಾಥಪಂತರಿಗೆ ಸಹದೇವನೆಂದೂ ಸಂಬೋಧಿಸಿ, ಈ ಪಂಚರು ಪಂಚಪಾಂಡವರಂತೆ ಇದ್ದರೆಂದೂ, ಎಲ್ಲರೂ ಶಾಂತಿಯೆಂಬ ಒಬ್ಬಳೇ ಹೆಂಡತಿಯನ್ನು ಮದಿವೆಯಾಗಿದ್ದರೆಂದೂ ಇವರು ಧರ್ಮ ಮತ್ತು ಜನಹಿತಾರ್ಥಕ್ಕೆ ತಮ್ಮ ಸರ್ವಸ್ವವನ್ನು ಅರ್ಪಿಸಿದ್ದರೆಂದೂ, ಸಮತೆ, ತ್ಯಾಗ, ಭೋಗ, ನ್ಯಾಯಬುದ್ಧಿ, ನಿರ್ಮಾತ್ಸರ್ಯ ಗುಣಗಳು ಇವರ ಹುಟ್ಟುಗುಣಗಳಾಗಿದ್ದವೆಂದೂ ವರ್ಣಿಸಿರುವರು.

ಹೀಗೆ ದಯಾಳುಗಳಾದ ಸದ್ಗೃಹಸ್ಥರ ಸಾನ್ನಿಧ್ಯದಿಂದ ಬೊಮ್ಮಗೇರಿಯು ವೈಭವದಿಂದ ವಿರಾಜಿಸಹತ್ತಿತು. ಊರ ಜನಸಂಖ್ಯೆಯು ಬೆಳೆಯಹತ್ತಿ ಎರಡು ಸಾವಿರಕ್ಕೆ ಮಿಕ್ಕಿತು. ಉತ್ತಮವಾದ ರಾಜಬೀದಿಗಳುಂಟಾದವು. ಪೇಟೆಯು ಬೆಳೆದು ದೊಡ್ಡ ವ್ಯಾಪಾರಸ್ಥಳವಾಯಿತು. ಊರಮಧ್ಯದಲ್ಲಿರುವ ಹನುಮಸಾಗರ ಪುಷ್ಕರಣಿಯೂ ಅನೇಕ ಸೋಪಾನಗಳಿಂದ ಅಲಂಕೃತವಾಯಿತು. ಊರಲ್ಲಿ ಅಲ್ಲಲ್ಲಿ ತೆಂಗಿನ ಮರಗಳು ಕಂಗೊಳಿಸಹತ್ತಿದವು. ಒಕ್ಕಲಿಗರ ಅಕ್ಕರಕ್ಕೆ ಪಾತ್ರವಾದ ಕಾಲುವೆಯುಂಟಾದ್ದರಿಂದ ದುರ್ಭಿಕ್ಷದ ಒದವು ತಪ್ಪಿ ಎಲ್ಲಿ ನೋಡಿದಲ್ಲಿ ನೆಲ್ಲು ತುಂಬಿದ ಕಣಜಗಳು ಕಾಣಹತ್ತಿದವು. ಎಲ್ಲ ಬಗೆಯ ವ್ಯಾಜ್ಯಗಳನ್ನು ಊರೊಳಗಿನ ಪ್ರಮುಖ ಪಂಚರು ನಿಷ್ಪಕ್ಷಪಾತದಿಂದ ಬಗೆಹರಿಸುತ್ತಿದ್ದರು. ಹೀಗಾದ್ದರಿಂದ ಅಲ್ಲಿರುವ ಜನರ ದ್ರವ್ಯದ ಅಪವ್ಯಯವಾಗದೆ ಬೊಮ್ಮಗೇರಿಯು ಭಾಗ್ಯಶಾಲಿಗಳ ಗ್ರಾಮವಾಯಿತು. ಜಾತಿಮತ್ಸರದ ಗಾಳಿಯು ಸಹ ಇರಲಿಲ್ಲ. ಉಂಡಾಡಿಗರ ತಂಡಗಳು ಮಾಯವಾಗಿ ಎಲ್ಲರೂ ಉದ್ಯೋಗಿಗಳಾದರು. ಅಲ್ಲಿ ಕಳ್ಳರ ಕಾಟವು ತಪ್ಪಿತು. ಸುಳ್ಳರ ಸುಳಿವು ಇಲ್ಲದಾಯಿತು. ಆಲಸ್ಯವು ಅಡಗಿತು. ಧರ್ಮಬುದ್ಧಿಯು ದೃಢವಾಯಿತು. ವಿದ್ಯೆಯು ಅಭಿವೃದ್ಧಿ ಹೊಂದಿತು. ನೀತಿನಿಷ್ಠೆಯು ಬೆಳೆಯಿತು. ಮೊದಲಿಗೆ ವೇಶ್ಯಾಂಗನೆಯರ ವಾಸಸ್ಥಳವಾಗಿ ಅನೀತಿಮಾರ್ಗದಲ್ಲಿದ್ದ ಬೊಮ್ಮಗೇರಿಯು ಒಕ್ಕಲಿಗರ ಸಹವಾಸದಿಂದ ಅಕ್ಕರತೆ ಪಡೆದಿದ್ದನ್ನು ನೋಡಿದರೆ "ಪ್ರಾಯೇಣಾಧಮ ಮಧ್ಯಮೋತ್ತಮ ಗುಣಾಃ ಸಂಸರ್ಗತೋ ಜಾಯತೆ" ಎಂಬ ಭರ್ತೃಹರಿಯ ಉಕ್ತಿಯು ನೆನಪಾಗದೆ ಇರದು.

ಬ್ರಹ್ಮಪುರಿ-ವರ್ಣನೆಯ ಸ್ವರ್ಗಾರೋಹಣಾಧ್ಯಾಯದಲ್ಲಿ ಗಂಗಾಧರ ದೀಕ್ಷಿತರು 'ಕಲಿಪ್ರವೇಶವಾಯಿತೆಂದು ಕಲಿಮಹಾತ್ಮ್ಯವನ್ನು ವರ್ಣಿಸಿ, ಕಲಿಬಾಧೆಗೆ ಬೆದರಿ, ಪಾಂಡವರು ಸ್ವರ್ಗಾರೋಹಣ ಮಾಡಿದರೆಂದೂ ಹಾಗು ಇನ್ನು ಮುಂದೆ ಕಲಿಪ್ರಾಬಲ್ಯವಾಗುವದೆಂದೂ ಭವಿಷ್ಯವನ್ನು ಹೇಳಿ ತಮ್ಮ ಕಾವ್ಯವನ್ನು ಮುಗಿಸಿ ತಾವು ಕೈಲಾಸವಾಸಿಗಳಾದರು. ಸ್ವತಃ ಕಲಿಪುರುಷನ ಮಾತಂತಿರಲಿ, ಕಲಿಯಂತಹ ಪುರುಷನೊಬ್ಬನ ಪ್ರವೇಶವು ಬೊಮ್ಮಗೇರಿಯಲ್ಲಿ ಹೇಗಾಯಿತೆಂಬುದೇ ಮುಂದಿನ ಪ್ರಕರಣದಲ್ಲಿಯ ಕಥೆಯಾಗಿದೆ.

೨

## ಕಲಿಪ್ರವೇಶ....

ಆಷಾಢಮಾಸ. ಕೃಷ್ಣಪಕ್ಷ. ಮುಗಿಲ ತುಂಬ ಮೋಡ ಮುಸುಕಿದೆ. ಸೂರ್ಯನ ದರ್ಶನವು ಅಪರೂಪವಾಗಿದೆ. ಪಡುವಣದ ಮುಂಜುಗಾಳಿಯು ಭರದಿಂದ ಬೀಸುತ್ತಲಿದೆ. ಚಿಟಿಚಿಟಿ ಮಳೆ ಹತ್ತಿದೆ. ತಾಸೆರಡು ತಾಸಿಗೊಮ್ಮೆ ದೊಡ್ಡ ಸೆಳಕೂ ಬರುತ್ತಲಿದೆ. ಊರೊಳಗಿನ ಮಾರ್ಗಗಳಲ್ಲೆಲ್ಲ ಕೆಸರಾಗಿ ಕಾಲಿಟ್ಟರೆ ಕುಸಿಬೀಳುವಂತಾಗಿದೆ. ಕಾಲುವೆಗಳೆಲ್ಲ ತುಂಬಿ ಹರಿಯುತ್ತಲಿವೆ. ಅಲ್ಲಲ್ಲಿ ಗುಂಡಿಗಳಲ್ಲಿ ನೀರು ತುಂಬಿ ನಿಂತಿವೆ. ಒಕ್ಕಲಿಗರಿಗೆ ಹೊಲದೊಳಗೆ ಯಾವ ಕೆಲಸವನ್ನೂ ಮಾಡಲು ಬರುವಂತಿಲ್ಲ. ಆದ್ದರಿಂದ ಅವರು ಕಮ್ಮಾರ ಸಾಲೆಯಲ್ಲಿ ಒಟ್ಟುಗೂಡಿ ಕಾಸಿಕೊಳ್ಳುತ್ತ ತಮ್ಮ ಕೆಲಸಕ್ಕೆ ಬೇಕಾದ ಕಬ್ಬಿಣದ ಸಾಮಾನುಗಳನ್ನು ಸೆಟ್ಟಗೆಮಾಡಿಸುವ ನೆವದಿಂದ, ಹರಟೆ ಕೊಚ್ಚುತ್ತ ಕುಳಿತಿರುತ್ತಾರೆ. ವ್ಯಾಪಾರಸ್ಥರು ವ್ಯಾಪಾರವಿಲ್ಲದ್ದಕ್ಕಾಗಿ ಅಲ್ಲಲ್ಲಿ ಒಟ್ಟುಗೂಡಿ ಹುಲಿಯ ಮನೆಯನ್ನು ಬರೆದು ಹರಳುಗಳನ್ನು ಸರಿಸುತ್ತ ಕುಳಿತಿರುತ್ತಾರೆ. ಬೊಮ್ಮಗೇರಿಯಲ್ಲಿರತಕ್ಕ ವತನದಾರರೂ, ವೈದಿಕರೂ, ಉಂಡಾಡಿಗರೂ ದೇಸಾಯಿ ಶ್ರೀಪತರಾಯರ ಮನೆಗೆ ಹರಟೆಕೊಚ್ಚಲು ಹೊರಟಿದ್ದಾರೆ.

ದೇಸಾಯರ ಮನೆಯವರು ಅಂಕಣದ ಪಡಸಾಲೆಯ ತುಂಬ ದೊಡ್ಡ ಗುಡಾರವನ್ನು ಹಾಸಿ ಅದರ ಮೇಲೆ ಒಂದು ಪಗಡೆಯ ಮನೆಯಿದ್ದ ಜಮಖಾನೆಯನ್ನು ಹಾಸಿದ್ದಾರೆ. ಗೋಡೆಗೆ ಹೊಂದಿ ಮಧ್ಯದಲ್ಲಿ ಒಂದು ಉದ್ದನ್ನ ದೊಡ್ಡ ಲೋಡನ್ನೂ ಅಲ್ಲಲ್ಲಿ ಐದಾರು ಸಣ್ಣ ಸಣ್ಣ ಲೋಡು ಗಳನ್ನೂ ಇಟ್ಟಿದ್ದಾರೆ. ಜಮಖಾನೆಯ ಮಧ್ಯದಲ್ಲಿ ಎಲೆ, ಅಡಿಕೆ, ತಂಬಾಕು ತುಂಬಿದ ತಟ್ಟೆಯು ಅತಿಥಿಗಳ ಮಾರ್ಗಪ್ರತೀಕ್ಷೆ ಮಾಡುತ್ತ ಗಂಭೀರವಾಗಿ ಕುಳತಿದೆ. ಪಡಸಾಲೆಯ ಒಂದು ಮೂಲೆಯಲ್ಲಿ ಅಗ್ಗಿಷ್ಟಿಗೆಯು "ಹಿಂದಕ್ಕಿದ್ದ ದೇಸಾಯರ ತೇಜವು ಈಗ ಕುಗ್ಗಿ ನನ್ನಿಂದಲೇ ಅವರ ಬೆಳಕೆ"ಂದು ಅಹಂ ಭಾವದಿಂದ ಅಣಕಿಸುವಂತೆ ಅಸ್ತವ್ಯಸ್ತವಾಗಿ ಉರಿಯುತ್ತಲಿದೆ.ಹೊರಗಿನಿಂದ

ಒಬ್ಬೊಬ್ಬರೇ ಬಂದು ಕಾತಿಯ ಚಾಪೆಯಿಂದ ಕಾಲೊರಿಸಿಕೊಂಡು ಅಗಿಷ್ಟಿಗೆಯ ಮುಂದೆ ಕೂತು ಕೈಕಾಲುಗಳನ್ನು ಕಾಸಿಕೊಂಡು ತಮತಮಗೆ ಉಚಿತವಾದ ಸ್ಥಳಗಳಲ್ಲಿ ಕೂತುಕೊಳ್ಳಹತ್ತಿದ್ದಾರೆ. ಅವರಲ್ಲಿ ಕೆಲವರು ಜೋಡುಪದರಿನ ಧೋತರವನ್ನೂ ಕೆಲವರು ಶಾಲು ಕಂಬಳಿಗಳನ್ನೂ ಹೊದ್ದು ಕೊಂಡು, ಚಳಿಗೆ ಹೆದರಿ ಮುದ್ದೆಯಾಗಿ ಕುಳಿತಿದ್ದಾರೆ. ಕೆಲವರು ತಂಬಾಕು ತಿಂದರೆ ಚಳಿಯು ಬಿಟ್ಟುಹೋಗಬಹುದೆಂದು ಎಲೆ, ಅಡಿಕೆ, ತಂಬಾಕು ಹಾಕಿಟ್ಟ ತಟ್ಟೆಯ ಸುತ್ತಲೂ ಒಟ್ಟುಗೂಡಿ ಎಲೆಯಡಕೆಗಳನ್ನು ಮೆಲುಕಾಡಿಸಿ ತಂಬಾಕು ತಿಂದು ಗಲ್ಲವನ್ನುಬ್ಬಿಸಿಕೊಂಡು ಕುಳಿತಿದ್ದಾರೆ. ಅಲ್ಲಿಯೆ ಲೋಡಿಗೆ ಕುಳಿತ ಕೆಲವು ಪ್ರತಿಷ್ಠಿತರು ನಸ್ಯದ ಡಬ್ಬಿಯ ಮೇಲೆ ಬೆರಳು ಚಪ್ಪರಿಸಿ ಪುಡಿಯನ್ನು ಏರಿಸುವ ಸಂಭ್ರಮದಲ್ಲಿದ್ದಾರೆ. ಅಷ್ಟರಲ್ಲಿ ದೇಶಪಾಂಡೆ ಗಿರಿಧರರಾಯರು ಹೊರಗಿನಿಂದ ಬಂದು ಕಾತಿಯ ಚಾಪಿಗೆ ಕಾಲೊರಿಸಿ ಅಗ್ಗಿಷ್ಟಿಗೆ ಕಾಸಿ ಮಧ್ಯದಲ್ಲಿ ಬರಿದಾಗಿದ್ದ ಉದ್ದನ್ನ ದೊಡ್ಡ ಲೋಡಿಗೆ ಬಂದು ಕುಳಿತರು. ಆಗ ದೇಸಾಯಿ ಶ್ರೀಪತಿರಾಯರು "ಯಾಕೊ ದೇಶಪಾಂಡೇರ ಸ್ವಾರಿ ತಡಾ ಆಗಿ ಬಂತಲ್ಲ?" ಎಂದರು.

ಆಗ ಗಿರಿಧರರಾಯರು "ಏನ ಹೇಳಬೇಕ್ರಿ ದೇಸಾಯರ! ಓಣ್ಯಾಗೆಲ್ಲ ಕೆಸರಾಗಿ ಕಾಲಿಡೊ ಹಾಂಗಿಲ್ಲ. ಮೊನ್ನೆ ಮಂಗಳವಾರ ಸಂತೀ ದಿವಸಂತೂ, ಸಂತೀ ಮಂದಿಯ ಗೋಳು, ಹೇಳಲಾಸಲ್ಲ! ಘಟ್ಟದಾಗಿನ ಮೊಳಕಾಲಮುರಿ ಸೊಂಟಮುರಿ ಇಲ್ಲೇ ಬಂದಿದ್ದವು. ಊರಾಗಿನ ರಸ್ತೆ ನೆಟ್ಟಗ ಮಾಡಿಸ ಬೇಕ್ರೆಪಾ. ಗೌಡರನಕಾ ಇದರ ಮ್ಯಾಲ ಕಾಳಜೀನ ತಗೊಂಬೂದಿಲ್ಲ" ಎಂದು ಉತ್ತರ ಕೊಟ್ಟರು.

ಪ್ರಸಂಗವು ತಮ್ಮ ಮೇಲೆ ಬಂದಿತೆಂದು ತಿಳಿದು ಬಸನಗೌಡರು "ಯಾಕ ಕಾಳಜೀ ತಗೊಂಬೂದಿಲ್ಲ? ನಿನ್ನೆ ಊರಾಗೆಲ್ಲಾ ಡಂಗರಾ ಹೊಡ ಸೇವಿ. ಸ್ವಲ್ಪ ಮಳಿ ಹೊರಪಾದಗಳಿಗ್ಗೆ ಎಲ್ಲಾ ಓಣಿಗೂ ಕಾಲವಿ ತಗಿಸಿ ಕಲ್ಲು, ಗೊರಚು ಹಾಕಸತೇವಿ ಅಂತ" ಎಂದು ಆತ್ಮಸಂರಕ್ಷಣೆಗಾಗಿ ಪ್ರಯತ್ನಿಸಿದರು. ತಿಪ್ಪಾಶಾಸ್ತ್ರಿಗಳು ತಂಬಾಕವನ್ನು ಗುಳಿ ಬಾಯಾಡಿಸುತ್ತ ಗೌಡರ ಮೇಲೆ ದೌಡು ಮಾಡಿದರು. "ಹೊ! ಗೌಡ್ರ ಹೌದಲ್ರಿ, ಮಾಡಸ್ತಾರ, ಊರವರ ವ್ಯವಸ್ಥಾ ಮಾಡಸ್ತಾರ! ಇವರು ರಸ್ತೇ ನೆಟ್ಟಗ

ನೂತಸೋದ್ರ್ಯಾಗ ಎಷ್ಟು ಮಂದಿ ಊನಾಗತಾರೊ, ಎಷ್ಟು ಕೊಡಾ ಮುದ್ದಿ ಬಗತಾವೊ! ಒಂದೆರಡು ಪಂಚನಾಮಾ ಆಗಬೇಕ್ರೀ; ಅಂದರ ರಸ್ತೆ ನೆಟ್ಟಗ ಆಗತದ''. ಆಗ ಗಂಭೀರರಾಗಿ ಕುಳಿತ ಅಣ್ಣಾದೀಕ್ಷಿತರು ''ಶಾಸ್ತ್ರಿಗಳಿಗೆ ಹಾದೀ ಅನುಭವ ಚಲೋ ಬಂದ್ಹಾಂಗ ಕಾಣಸ್ತದ'' ಎಂದು ವ್ಯಂಗ್ಯವಾಗಿ ಹೇಳಿದರು. ತಿಪ್ಪಾಶಾಸ್ತ್ರಿಗಳು ''ದೀಕ್ಷಿತರ! ನೀವು ಹೊಂಡದ ಹಾದಿ ನೋಡದ್ಹಾಂಗ ಕಾಣಸೂದಿಲ್ಲ. ಇವತ್ತ ಬಂದಿತ್ರಿ, ನಮಗ ಪಾಳಿ, ಪಾಣೇಗಟ್ಟೀ ಪೂಮುಲೇತಿ ಮಾಡೋದು'' ಎಂದು ವಿಸ್ತರಿಸಿದರು. ಕಲ್ಲಂಭಟ್ಟರು ''ನಿಮ್ಮ ಪಾಳಿ ಯಾಕ ಬಂದಿತ್ರೀ? ಮತ್ತ ನಿಮ್ಮ ನೀಯರೊಳಗ........'' ಎಂದು ಬಾಯಿ ಹಾಕುವಷ್ಟರಲ್ಲಿ ತಿಪ್ಪಾಶಾಸ್ತ್ರಿಗಳು ''ಮುಟ್ಟು ಇಲ್ಲ, ಗಿಟ್ಟು ಇಲ್ಲ. ನಿನ್ನೆ ನಮ್ಮ ಮನಿಯವರು ಹೊಂಡಕ್ಕ ಮಡಿ ನೀರಿಗೆ ಹೋದಾಗ ಕಾಲಜಾರಿ ಸೊಂಟಾ ಮುರಕೊಂಡು ಮುರಿಗೀಕಾವಿಗೆ ಮೂಲಾಗಿ ಮೂಲೀ ಹಿಡಿದು ಬಿದ್ದಾರ! ವ್ಯಾಲ ಅಪೊಹಿಷ್ಠ ಬುಡದಾಗ ಸರ್ವಾರಿಷ್ಟ. ಪಾಪ! ಹೆಣ್ಣುಮಕ್ಕಳ ಗೋಳು ಹೇಳಲಾಸಲ್ಲ!'' ಎಂದು ತಮ್ಮ ಸ್ಥಿತಿಯನ್ನು ವಿಶದ ಪಡಿಸಿದರು.

ಅಷ್ಟರಲ್ಲಿ ಬಗಲಕಸಿಯ ಅಂಗಿಯನ್ನು ಹಾಕಿ ತಲೆಯ ಮೇಲಿನ ಮುಂಡಾಸದ ಮೇಲೆ ಧೋತರ ಹಾಕಿ ಕಟ್ಟಿದ ಕಂಬಳಿಯ ಕುಂಚಿಯನ್ನು ಹೊದ್ದುಕೊಂಡು ಹದಿಮೂರು ಹದಿನಾಲ್ಕು ವರ್ಷದ ಗಿಡ್ಡ ಹುಡುಗನೊಡನೆ ನಲವತ್ತೈದು ವರ್ಷದ ಒಂದು ವ್ಯಕ್ತಿಯು ಶ್ರೀಪತಿರಾಯರ ಮನೆಯ ತಲೆ-ಬಾಗಿಲಿಗೆ ಬಂದಿತು. ಕೂಡಲೆ ಶ್ರೀಪತಿರಾಯರು ಎದ್ದು ಮುಂದಕ್ಕೆ ಹೋಗಿ 'ಬರ್ರಿ ಗೋಪಾಳರಾಯರs! ಎಂಥಾ ಮಳ್ಯಾಗ ಬಂದಿರಿ!' ಎಂದು ಸಾನಂದಾಶ್ಚರ್ಯದಿಂದ ಅತಿಥಿಗಳನ್ನು ಆದರಿಸಿದರು. ದಣಿದ ನಗೆ ನಗುತ್ತ ಗೋಪಾಳರಾಯರು ಒಳಗೆ ಬಂದು ಕಂಬಳಿಯನ್ನು ಜಾಡಿಸಿದರು. ಶ್ರೀಪತಿರಾಯರಲ್ಲಿ ಕಲಿಯಲಿಕ್ಕಿದ್ದ ಹನುಮಂತನೆಂಬ ಹುಡುಗನು ತಂದಿಟ್ಟ ನೀರಿನಿಂದ ಕೈಕಾಲು ತೊಳೆದುಕೊಂಡು ಅವರು ಬರುತ್ತಿರಲು ದೇಶಪಾಂಡೆ ಗಿರಿಧರರಾಯರು ಎದ್ದುಬಂದು ಗೋಪಾಳರಾಯರ ಕೈಹಿಡಿದು ಕರೆದುಕೊಂಡು ಹೋಗಿ ತಾವು ಕುಳಿತ ಉದ್ದನ್ನ ಲೋಡಿಗೆ ಕುಳ್ಳಿರಿಸಿದರು. ಶ್ರೀಪತಿರಾಯರು ಒಳಗೆ ಹೋಗಿ ಒಂದು ಶಾಲು ತೆಗೆದುಕೊಂಡು ಬಂದು ಗೋಪಾಳ

ರಾಯರಿಗೆ ಹೊಚ್ಚಿದರು. ಗೋಪಾಳರಾಯರ ಸಂಗಡ ಬಂದ ಹುಡುಗನು ಅಗ್ಗಿಷ್ಟಿಗೆಯ ಮುಂದೆ ಕಾಸಿಕೊಳ್ಳುತ್ತ ಕುಳಿತನು. ಕುಶಲ ಪ್ರಶ್ನೆಗಳಾದ ನಂತರ ಮಾತು ಮುಗಿಯುವ ಲಕ್ಷಣ ಕಂಡಿತು. ಆಗ ಅಗ್ಗಿಷ್ಟಿಗೆಯ ಮುಂದೆ ಕಾಸುತ್ತ ಕುಳಿತ ಕಲ್ಲಂಭಟ್ಟರು 'ದೇಸಾಯರ! ಇಂಥ ಮಳೀಒಳಗ ಒಂದು ಆಣೂ ಬ್ಯಾರೆ ತಂದೀರಲ್ಲ, ಅಣು!' ಎಂದು ತನ್ನ ಹತ್ತಿರ ಕುಳಿತ ಹುಡುಗನ ಬೆನ್ನು ಚಪ್ಪರಿಸಿ 'ಹುಡುಗ ಬಹಳ ಗಟ್ಟಿ ಕಾಣಸ್ತಾನ. ನಿಮ್ಮ ಪುತ್ರ ಏನ ಇವಾ?' ಎಂದರು. ಆಗ ಗೋಪಾಳರಾಯರು ಹೌದೆಂದು ಗೋಣು ಅಲ್ಲಾಡಿಸಿದರು. ಅಷ್ಟರಲ್ಲಿ ಶಾಲು ಹೊದ್ದುಕೊಂಡು ಲೋಡಿಗೆ ಆತು ಕುಳಿತ ಅಣ್ಣಾದೀಕ್ಷಿತರು ಹುಡುಗನ ಹತ್ತಿರ ಬಂದು ಬೆನ್ನು ಚಪ್ಪರಿಸಿ, 'ತಮ್ಮಾ, ನಿನ್ನ ಹೇಸರೇನು?' ಎಂದರು. ಆಗ ಹುಡುಗನು 'ಒಡಕ್ಯಾನ್ರೀ' ಎಂದು ತಟ್ಟನೆ ಉತ್ತರಕೊಟ್ಟನು. ಅಣ್ಣಾದೀಕ್ಷಿತರೆಂದರು 'ಹಾಂ! ಹುಡುಗ ಹುಷಾರ ಕಾಣಸ್ತಾನ, ಕಲ್ಲಂಭಟ್ಟರ! ಹ್ಯಾಂಗ ತಟ್ಟನ ಉತ್ರಾಕೊಟ್ಟ ನೋಡ್ರಿ! ದೇಸಾಯರ ಮಗ, ಕೇಳೋದದನಽ? ಹುಲೀ ಹೊಟ್ಟೀಲೆ ಇಲೀ ಹುಟ್ಟೋದುಂಟಽ?' 'ಮೂರ್ತೀ ನೋಡಿದರಽ ಕಾಣಸ್ತಽದಲ್ಲ: 'ಕ್ವಚಿದಾ ಪಾಮನೋ ಮಂದಬುದ್ಧಿಃ' ಎಂದು ತಮ್ಮ ಸಂಸ್ಕೃತ ಪಾಂಡಿತ್ಯವನ್ನು ಮೆರೆಸಿ ತಿಪ್ಪಾಶಾಸ್ತ್ರಿಗಳು ನಕ್ಕರು.

ಅಣ್ಣಾದೀಕ್ಷಿತರು 'ಅಲ್ಲ, ದೇಸಾಯರ! ಬಾಕೀದೆಲ್ಲ ನೆಟ್ಟಗದ. ಆದರ ಇಂಥಾ ಹುಡುಗನಿಗೆ ಎಂಥಾ ಕೆಟ್ಟ ಹೆಸರಿಟ್ಟೀರಲ್ಲ? ಹಳ್ಳಿ ಊರಾಗಿನ ಬ್ಯಾಡರ ಹೆಸರಿದು.' ಎಂದು ಇನ್ನೊಂದು ಕೂಟಪ್ರಶ್ನೆಯೆತ್ತಿದರು. ಅದಕ್ಕೆ ಗೋಪಾಳರಾಯರು 'ಒಡಿಕ್ಯಾ ಅಂತ ನಾವೇನು ಹೆಸರಿಟ್ಟಿಲ್ಲ. ಇವಗ ಶ್ರೀವಲ್ಲಭ ಅಂತ ತೊಟ್ಟಿಲದಾಗ ಇಟ್ಟ ಹೆಸರು. ಮುಂದ ಮನೀಮಂದಿ ಅಚ್ಚಾಟಕ್ಕ 'ವಲ್ಯಾ ವಲ್ಯಾ' ಅಂತ ಕರೀಲಿಕ್ಕ ಹತ್ತಿದರು. ಹಳ್ಳೀಊರ ಕೆಲಸ. ಹೆಸರು ಸ್ವಲ್ಪ ಗಡಚ ಆತು. ಅದಕ ಊರಾಗಿನ ಮಂದಿ 'ವಲ್ಯಾ' ಅಂಬೋದು ಬಿಟ್ಟು 'ಒಡಿಕ್ಯಾ' ಅಂದರು. ನಾಕು ಮಂದಿ ಅಂದದ್ದೇ ಹೆಸರಲ್ಲಽ?' ಎಂದು ತಮ್ಮ ಪಕ್ಷವನ್ನು ಸಮರ್ಥಿಸಲು ಪ್ರಯತ್ನಿಸಿದಾಗ ತಿಪ್ಪಾಶಾಸ್ತ್ರಿಗಳು 'ದೇಸಾಯರ! ಅದನ್ನ ಯಾಕ ಇಷ್ಟು ಸಿದ್ಧಮಾಡಲಿಕ್ಕೆ ಹೋಗತೀರಿ! ಒಡಿಕ್ಯಾ ಅಂದರ ಏನು ತಪ್ಪಾತು? ನನ್ನ ಹೆಸರಿಲ್ಲಽ ತಿಪ್ಪ್ಯಾ

ಅಂತ? ಅದಕ್ಕೇನು! ಹಿರೇರು ಇಟ್ಟ ಹೆಸರು. ಆದಲ್ಲದ ಇದು ನಮ್ಮ ಸಂಸ್ಕೃತ ಕೋಶದಾಗಽ ಆದರೀ 'ಮಾನುನೋ ಗಿಡ್ಡೋ ಮುರುಡೋ ಒಡಕಸ್ತ್ರಕಟಃ ಕಿರೀಕಿಟೇ' ಎಂದು ತಮ್ಮ ಹಂಡಬಂಡ ಕೋಶವನ್ನು ಅಂದು ನಕ್ಕುಬಿಟ್ಟರು.

ಕಲ್ಲಂಭಟ್ಟರು 'ಹಳ್ಳೀ ರೈತರೇನು ಮಡ್ಡರಲ್ಲ! ಭರತರಾಜನ ಕೊರಳಾಗ ಘಂಟೀ ಕಟ್ಟಿಸಿದವರು. ಅವರು ಇಟ್ಟ ಹೆಸರಿನ್ಯಾಗ ಏನಾದರೂ ವಿಶೇಷ ಇದ್ದೇ ಇರತದ' ಎಂದು ಕಲ್ಲಂಭಟ್ಟರು ಮಾತನ್ನು ಮುಂಪೆ ಸಾಗಿಸಿದರು.

ಅದೂ ಖರೇ ಅದ. ಈ ಹುಡುಗ ಹುಟ್ಟಿದಾಗ ಮಳೀ ಹೆಚ್ಚಾಗಿ ನಮ್ಮೂರ ದೊಡ್ಡಕೆರಿಯು ಒಂಡಿ ಒಡೆದುಹೋತಂತ! ಕಾಕತಾಲಿನ್ಯಾಯ! ರೈತರಿಗೇನು? ಅಷ್ಟಽ ಸಾಕು. ಈ ನೆವದಿಂದ ಹುಡುಗ್ಗ ಹೀಂಗ ಹೆಸರಿಟ್ಟರು.' ಎಂದು ದೇಸಾಯರು ನಿರ್ವಾಹವಿಲ್ಲದೆ ಒಪ್ಪಿಕೊಂಡರು. 'ಏನೋ, ಎಂತೋ, ಯಾರಿಗೆ ಗೊತ್ತು?' ಎಂದು ಶಾಸ್ತ್ರಿಗಳು ತಮ್ಮ ಆಶೆಯನ್ನು ವ್ಯಕ್ತಪಡಿಸಿದರು.

ಮಾತು ಮಿತಿಮೀರಿ ಬೆಳೆಯಿತೆಂದು ಬಸನಗೌಡರು ತಂಬಾಕವನ್ನು ಉಗುಳುವ ನೆವದಿಂದ ಹೊರಗೆ ಹೋಗಿ ಬಂದು: 'ಹೊತ್ತಾಯಿತು, ದೇಸಾಯರೆ! ಆರು ತಾಸಾಯಿತು! ಹೊರಗ ತೊರವಟಿಗನ ಎಲಿ ಸಮ ಆಗಿಬಿಟ್ಟ್ಯಾವ ನೋಡಿರಿ! ಚಳಕದ ಹೊತ್ತಾತು!' ಎಂದು ಎಲ್ಲರನ್ನು ಎಬ್ಬಿಸಿದರು. ಆಗ ದೇಸಾಯರ ಮನೆಯಲ್ಲಿ ಕೂಡಿದ ಉಂಡಾಡಿಗರ ತಂಡವು ಹೊರಬಿದ್ದಿತು. 'ನಮ್ಮ ಹಿರೇರು ಬ್ರಹ್ಮಪುರಿ-ವರ್ಣನದಲ್ಲಿ ಬಣ್ಣಿಸಿದ ಕಲಿಪ್ರವೇಶ ಇವತ್ತಿನ ದುರ್ದಿವಸದಾಗ ಆದ್ಹಂಗ ಕಾಣತದ, ಕಲ್ಲಂಭಟ್ಟರ!' ಎಂಪು ದೀಕ್ಷಿತರು ದನಿ ತೆಗೆದರು.

'ಕಲಿಪ್ರವೇಶ ಆಗದೆ ಇದ್ದರು ಒಡಿಕ್ಯಾನ ಪ್ರವೇಶ ಆಗೇದ ನಡೀರಿ!' ಎಂದು ಕಲ್ಲಂಭಟ್ಟರು ಎಲ್ಲರನ್ನು ನಗಿಸಿ ಮುಂದೆ ಸಾಗಿದರು.

೩

ಮುಂದಿಯ ಮಕ್ಕಳು............

ಗೋಪಾಳರಾಯರು ಸ್ನಾನಮಾಡಿ ಮಡಿಯನ್ನು ಉಟ್ಟುಕೊಂಡು, ಮಗನನ್ನು ತಮ್ಮ ಹತ್ತಿರ ಹಾಕಿದ ಮಣೆಯ ಮೇಲೆ ಕುಳ್ಳಿರಿಸಿಕೊಂಡು ತಮ್ಮ ಅನುಷ್ಠಾನವನ್ನು ಮಾಡಹತ್ತಿದರು. ಒಡಕನೂ ತಂದೆಯ ಹತ್ತಿರ ಕುಳಿತು ಆಚಮನ ಮಾಡಿ ಅಪೋಹಿಷ್ಟಾ ಮಂತ್ರವನ್ನು ಅರ್ಥಟದಿಂದ ಅನ್ನಹತ್ತಿದನು. ಅಷ್ಟರಲ್ಲಿ ಗೋಪಾಳರಾಯರು ಸಂಧ್ಯಾವಂದನೆ ಬ್ರಹ್ಮಯಜ್ಞಗಳನ್ನು ಮಾಡಿ ಹತ್ತು ಶ್ಲೋಕ ಗುರುಚರಿತ್ರೆಯ ಪಾರಾಯಣವನ್ನು ಮಾಡಿ ತಮ್ಮ ಅನುಷ್ಠಾನವನ್ನು ಮುಗಿಸಿದರು. ಆ ವೇಳೆಗೆ ಶ್ರೀಪತಿರಾಯರ ಆಶ್ರಿತನು ಎಲೆ ಹಾಕಿ ಗಂಧಾಕ್ಷತೆಯ ತಟ್ಟೆಯನ್ನಿಟ್ಟು ತೀರ್ಥವನ್ನು ಕೊಟ್ಟನು.

ಶ್ರೀಪತಿರಾಯರ ಮನೆಯಲ್ಲಿ ಅವರ ಹೆಂಡತಿಯೇ ಅಡಿಗೆ ಮಾಡುತ್ತಿದ್ದಳು. ಅವರಿಗೆ ಮಕ್ಕಳಿದ್ದಿಲ್ಲ. ದೇವರ ಪೂಜೆಗೆ ದಿನಂಪ್ರತಿ ಆಶ್ರಿತ ಬ್ರಾಹ್ಮಣನು ಬಂದು ಪೂಜೆ ಮಾಡಿ ದೇಸಾಯರಲ್ಲಿಯೇ ಊಟ ಮಾಡುತ್ತಿದ್ದನು. ಹನುಮಂತನು ವಿದ್ಯೆ ಕಲಿಯಲಿಕ್ಕೆ ಬೊಮ್ಮಗೇರಿಗೆ ಬಂದ ಬಡ ಹುಡುಗ. ದೇಸಾಯರ ಮನೆಯಲ್ಲಿ ಊಟಮಾಡಿ ಅವರ ಕೈಕೆಳಗಿನ ಕೆಲಸ ಮಾಡಿಕೊಂಡಿದ್ದವನು. ಮನೆಯಲ್ಲಿ ಮೂರು ನಾಲ್ಕು ಜನರಿದ್ದರೂ ಬರುವ ಜನರಿಗೆ ದೇಸಾಯರಲ್ಲಿ ಊಟಕ್ಕೆ ಮುಕ್ತದ್ವಾರವಿದ್ದುದರಿಂದ ದಿನಾಲು ಒಬ್ಬಿಬ್ಬರು ಅತಿಥಿಗಳು ದೇಸಾಯರ ಮನೆಗೆ ಬಂದೇ ಬರುತ್ತಿದ್ದರು. ಹೀಗಿದ್ದುದರಿಂದ ಏಳು ಎಂಟು ಜನರು ಊಟ ಮಾಡುವಷ್ಟು ಅಡಿಗೆಯು ದೇಸಾಯರ ಮನೆಯಲ್ಲಿ ಮಧ್ಯಾಹ್ನಕ್ಕೆ ಸಿದ್ಧವಿರುತ್ತಿತ್ತು.

ಎಲ್ಲರೂ ಊಟಕ್ಕೆ ಕುಳಿತರು. ಸ್ವಲ್ಪ ಹೊತ್ತಾದ ಮೇಲೆ ಊಟವು ಹೆಚ್ಚಾಯಿತೆಂದು ಗೋಪಾಳರಾಯರು ಹೊಟ್ಟೆಯ ಮೇಲೆ ಕೈಯಾಡಿಸಿದಾಗ ಶ್ರೀಪತಿರಾಯರು "ಅದ್ಹೆಂಗ ಆದೀತು! ಹುಣಸೀಹಣ್ಣು ಮುಪ್ಪಾದ್ರ ಹುಳೀ ಕಡಿಮಿ ಆದೀತs? ಏನ ಮಾಡಿದರೂ ನಿಮ್ಮ ಶಕ್ತಿ ನಮಗೆ ಬರೋಣಿಲ್ಲ" ಎಂದು ಅವರನ್ನು ಗೌರವಿಸಿದರು. ಮುಂದೆ ಸಹಜವಾಗಿ ಉಳಿದ

ಮಾತಿಗೆ ಪ್ರಾರಂಭವಾಯಿತು. ಸಾವಕಾಶವಾಗಿ ಗೋಪಾಳರಾಯರು ತಾವು ಬಂದ ಕಾರಣವನ್ನು ಹೇಳಿದರು. ಅವರ ಮಗನು ಹಳ್ಳಿಯಲ್ಲಿ ಬೆಳೆದು ಉಡಾಳನಾಗಿದ್ದ. ಬೊಮ್ಮಗೇರಿಯ ದೊಡ್ಡ ಸಾಲೆಗೆ ಹೋಗಿ ಶ್ರೀಪತಿರಾಯರ ಶಿಸ್ತಿನಲ್ಲಿ ಬೆಳೆದರೆ ಅವನು ಸುಧಾರಿಸಬಹುದಲ್ಲ?

ಆಗ ಶ್ರೀಪತಿರಾಯರ ಮನಸ್ಸಿನಲ್ಲಿ ವಿಲಕ್ಷಣ ಸಂಕಟವಾಯಿತು. ಸಾಲೆಗೆ ಹೋಗುವ ಮಗನೊಬ್ಬನು ತಮಗೆ ಇದ್ದಿದ್ದರೆ......? ಆದರೆ ಅವರ ಸಂಸಾರದಲ್ಲಿ ಉದಾಸೀನತೆಯು ತುಂಬಿಹೋಗಿತ್ತು. ಸಜ್ಜನರಾದುದರಿಂದ ಅವರು ತಮ್ಮ ದುಃಖವನ್ನೆಲ್ಲ ನುಂಗಿಕೊಂಡು "ನಮ್ಮ ಸ್ಥಿತಿ ನಿಮಗ ಗೊತ್ತದ ದೇಸಾಯರ! ಮಕ್ಕಳಿಲ್ಲದವರಿಗೆ ಇದ್ದವರ ಮಕ್ಕಳೇ ಮಕ್ಕಳು. ನಿಮ್ಮ ಹುಡುಗ ನಮ್ಮ ಮನೆಯಲ್ಲಿ ಅವಶ್ಯವಾಗಿ ಇರಲಿ" ಎಂದು ಹೇಳಿದರು. ಇದನ್ನು ಕೇಳುವಾಗ ಅವರ ಹೆಂಡತಿ ಚಂದ್ರಾಬಾಯಿಯರ ಕಣ್ಣಲ್ಲಿ ನೀರು ಬಂದವು. ಅಡಿಗೆಯೊಲೆಯ ಕಡೆಗೆ ಮೋರೆಮಾಡಿ ಕಣ್ಣೊರಿಸಿಕೊಂಡರು.

ಗೋಪಾಳರಾಯರೇನು ಮಾಡಬಲ್ಲರು? "ನಿಮಗೇನು, ಐವತ್ತರ ಮೇಲೆ ವಯಸ್ಸಾಗಿದೆ, ರಾಯರೆ! ಮಂದಿ ಮಕ್ಕಳ ಮೇಲೆ ನಿಮ್ಮಿಬ್ಬರ ಪ್ರೀತಿಯಿರಲಿ. ದೇವರು ದೊಡ್ಡವನಿದ್ದಾನೆ" ಎಂದು ದೊಡ್ಡ ಮನಸ್ಸಿನ ಮಾತಾಡಿದರು. ಊಟವಾದ ಮೇಲೆ ಎಲ್ಲರೂ ಕೈತೊಳೆದುಕೊಂಡು ಪಡಸಾಲೆಗೆ ಬಂದರು. ಅಲ್ಲಿ ತಾಂಬೂಲ ತಟ್ಟೆಯು ಸಿದ್ಧವಾಗಿತ್ತು. ಶ್ರೀಪತಿರಾಯರು ಗೋಪಾಳರಾಯರಿಗೂ ಭಟ್ಟರಿಗೂ ತಾಂಬೂಲ ಕೊಟ್ಟರು. ಎಲ್ಲರೂ ತಾಂಬೂಲ ಹಾಕಿಕೊಳ್ಳುತ್ತ ಕೂಡುವಷ್ಟರಲ್ಲಿ, ಊರೊಳಗಿನ ಉಂಡಾಡಿಗರ ಮಂಡಳವು ಊಟ ತೀರಿಸಿಕೊಂಡು ಶ್ರೀಪತಿರಾಯರ ಮನೆಗೆ ಬರಹತ್ತಿತು. ಅಲ್ಪಾವಧಿಯಲ್ಲಿ ಮತ್ತೆ ದೇಸಾಯರ ಪರಿವಾರವೆಲ್ಲ ಕೂಡಿತು. ಬಂದವರು ತಾಂಬೂಲವನ್ನು ತಿಂದು ತಟ್ಟೆಯನ್ನು ಬರಿದುಮಾಡಿದರು. ಆಗ. ಕಲ್ಲಂಭಟ್ಟರು ಅಲ್ಲಿಯೆ ಬೋದಿನ ಮೇಲಿಟ್ಟ ಇಸ್ಪೇಟಿನ ಪೊಟ್ಟಣವನ್ನು ತೆಗೆದು ಅವುಗಳನ್ನು 'ಟಿಪಾಯಿಸ' ಹತ್ತಿದರು. ಕೂಡಲೆ ಹನ್ನೆರಡು ಜನರು ಮಂಡಲಾಕಾರವಾಗಿ ನೆರೆದರು.

ಆಗ ಶ್ರೀಪತಿರಾಯರು "ಕಲ್ಲಂಭಟ್ಟರ! ಶಾಸ್ತ್ರಿಗಳೂ ದೀಕ್ಷಿತರೂ

ಬಂದಾರ. ತ್ರಿಸುಪರ್ಣ ಪಠಣ ಆಗಬೇಕಿನ್ನ " ಎಂದು ನಕ್ಕರು. ಅದಕ್ಕೆ ಕಲ್ಲಂಭಟ್ಟರು ಮೋರೆ ಮುದುಡಿಸಿ " ತ್ರಿಸುಪರ್ಣದ ಮಂದಿ ಯಾರೂ ಇಲ್ಲ ಇಲ್ಲೆ. ಆ ಟೋಳಿ ಬ್ಯಾರೆ ಆದ ರಾಯರ! ಇಲ್ಲಿ ಹೊತ್ತು ಹೋಗಲಿಕ್ಕೆ ಪಟ್ಟೆನ ಆಟ ಆಡೋ ಮಂದಿ ಕೂಡತಾವ " ಎಲೆಗಳನ್ನು ಚಪ್ಪರಿಸಿ ಒಬ್ಬೊಬ್ಬ ರಿಗೆ ಮೂರು ಮೂರು ಎಲೆಗಳನ್ನು ಒಗೆಯಹತ್ತಿದರು.

ದಣಿದು ಬಂದಿದ್ದ ದೇಸಾಯರು ಒಳಗಿನ ಕೋಣೆಯಲ್ಲಿ ಸುಖಿಸಿದ್ರೆ, ಗೆಂಡು 'ಪಾಮುಕುಕ್ಷಿ' ಯಾದರೂ ನಿದ್ರಾಭಿಲಾಷೆಯಾಗಿ ಒಡಕಪ್ಪನು ಸಹ ಅವರನ್ನು ಹಿಂಬಾಲಿಸಿದನು. ಗೋಪಾಳರಾಯರು ಸಿದ್ಧೆ ತೀರಿದೇಟು ವಷ್ಟರಲ್ಲಿ ಶ್ರೀಪತಿರಾಯರ ಮಾವಂದಿರಾದ ವಿರೂಪಾಕ್ಷ ಜೋಯಿಸರು ಬಂದು ಪಡಸಾಲೆಯಲ್ಲಿ ಕುಳಿತಿದ್ದರು ಮತ್ತೆ ರಾಯರು ಅವರ ಮುಂದೆ ಒಡಕಪ್ಪನ ಪುರಾಣವನ್ನು ಬಿಚ್ಚಿದರು. 'ಅವನು ಹಳ್ಳಿಯಲ್ಲಿಯ ಅಯ್ಯನವರ ಶಾಲೆಯಲ್ಲಿ ಮೂರು ಇಯತ್ತೆಗಳನ್ನು ಕಲಿತಿದ್ದ; ಅಲ್ಲಿ ಹೆಚ್ಚಿಗೆ ಕಲಿಯಲು ಅನುಕೂಲವಿಲ್ಲದ್ದರಿಂದ ಬೊಮ್ಮಗೇರಿಯಲ್ಲಿ ಬಂದು ದೇಸಾಯರ ಮನೆಯಲ್ಲಿ ಅವನು ಇರಬೇಕೆಂದು ನಮ್ಮ ಅಭಿಪ್ರಾಯವಿದೆ; ಎಂದರು. ವಿರೂಪಾಕ್ಷ ಜೋಯಿಸರು ಇದನ್ನು ಕೇಳಿ, ಶ್ರೀಪತಿರಾಯರ ಮನೆಯಲ್ಲಿ ಒಂದು 'ಸ್ವಾರಿ' ಹೆಚ್ಚಾಯಿತೆಂದು ಸಂಕೋಚಪಟ್ಟುಕೊಂಡರೂ, ಗೋಪಾಳರಾಯರ ವಿಚಾರವು ಸ್ತುತ್ಯವೆಂದು ತಲೆಯಲ್ಲಾಡಿಸಿದರು. ಆಮೇಲೆ ಬದಲಿಸಿದ ಕಾಲವನ್ನು ಕುರಿತು, ಧರ್ಮಾಂತರಾದ ಹೊಸ ಹುಡುಗರನ್ನು ಕುರಿತು, ಉಂಡಮನೆಯ ಗಳವನ್ನೆಣಿಸುವವರನ್ನು ಸಂಬಂಧಿಸಿ ಒಂದು ಉಪನ್ಯಾಸವನ್ನು ಕೆಟ್ಟರು. ಸುಮ್ಮನೆ ಕುಳಿತು ಗೋಪಾಳ ರಾಯರು ಅದನ್ನೆಲ್ಲ ಕೇಳಿಕೊಂಡರು. ಒಡಕಪ್ಪನು ಶ್ರೀಪತಿರಾಯರ ಮನೆ ಯಲ್ಲಿರುವದು ಶಕ್ಯವಾದರೆ ಸಾಕು. ಮಂದಿ ಆಡಿದ ಮಾತು ಏನಿದ್ದರೇನು?

ಇಸ್ಪೇಟಿನ ಆಟವು ಸಾಯಂಕಾಲದವರೆಗೆ ಒಳ್ಳೆ ಆವೇಶದಿಂದ ನಡೆ ಯಿತು. ಹೊತ್ತುಮುಳುಗಿ ಕತ್ತಲಾಗಹತ್ತಿದ್ದರಿಂದ ದೇಸಾಯರ ಮನೆ ಯಲ್ಲಿ ನೆರೆದ ಜನಸ್ತೋಮವು ಬಯಲಾಯಿತು. ಶ್ರೀಪತಿರಾಯರು ಗೋಪಾಳರಾಯರೊಡನೆ ಸಾಯಂಕಾಲದ ಭೋಜನ ತೀರಿಸಿಕೊಂಡು

ಪಡಸಾಲೆಯ ಕೋಣೆಯಲ್ಲಿ ಗೋಪಾಳರಾಯರಿಗೂ ಅವರ ಮಗನಿಗೂ ಮಲಗಲಿಕ್ಕೆ ಹೇಳಿ ತಾವು ನಡುಮನೆಯ ಕೋಣೆಯಲ್ಲಿ ಶಯನಮಾಡಿದರು.

---

೪

## ಹೆಸರು ಹಚ್ಚಿದರು........

ಮರುದಿನ ಬೆಳಗಾದೊಡನೆ ಶ್ರೀಪತಿರಾಯರು ಎದ್ದು ಸ್ನಾನಮಾಡಿ ಗೋಪಾಳರಾಯರನ್ನು ಎಬ್ಬಿಸಿದರು. ಈ ಮುಂಜಾವನ್ನು ವರ್ಣಿಸಬೇಕೆ! ಅದನ್ನು ವರ್ಣಿಸುವ ಶಕ್ತಿ ನಮಗಿಲ್ಲ. 'ಬ್ರಹ್ಮಪುರ-ವರ್ಣನೆ'ಯಲ್ಲಿದ್ದ ಇಂಥದೊಂದು ನಸುಕಿನ ವರ್ಣನೆಯನ್ನು ಇಲ್ಲಿ ಕನ್ನಡಿಸಿ ಕೊಡುತ್ತೇವೆ....

"ಆಷಾಢ ವದ್ಯ ಏಕಾದಶಿಯು. ಉದಯ ಕಾಲಕ್ಕೆ ಸೂರ್ಯನಾರಾಯಣನು ಕರ್ಕರಾಶಿಯನ್ನು ಪ್ರವೇಶಿಸಿ, ಇನ್ನು ಮೇಲೆ ಜನರು ವಾಮಮಾರ್ಗಪ್ರವೃತ್ತರಾಗುವರೆಂದು ತಾನೂ ದಕ್ಷಿಣಾಯನವನ್ನು ಹಿಡಿದಿದ್ದಾನೆ. ಬ್ರಾಹ್ಮಣರು ಭಾಗೀರಥೀದೇವಿ ಬಂದಳೆಂದು ಬೆಚ್ಚನ್ನ ಕುಚ್ಚುಕಡುಬನ್ನು ಹೊಡೆಯಬೇಕೆಂದು ಹಿಗ್ಗುವಷ್ಟರಲ್ಲಿ ಏಕಾದಶಿಯು ಬಂತೆಂದು ಭಗ್ನಮನೋರಥರಾಗಿದ್ದರು. ಸಂಕ್ರಮಣಕಾಲವು ಪುಣ್ಯಕರವೆಂದೂ ಸೂರ್ಯೋದಯಕ್ಕೆ ಮೊದಲು ಸ್ನಾನಮಾಡಬೇಕೆಂದೂ ತಾಸು ರಾತ್ರಿ ಇರುತ್ತಲೆ ಭಾವಿಕರಾದ ಸ್ತ್ರೀಪುರುಷರು ಎದ್ದು ಲಗುಬಗೆಯಿಂದ ಸ್ನಾನಮಾಡಲಿಕ್ಕೆ ಹತ್ತಿದ್ದರು. ಕರ್ಕಸಂಕ್ರಮಣವು ಕಾರ್ಗಾಲದ ಕ್ರೂರ ದಿನವೆಂದು ಕಪ್ಪೆಗಳು ಕರ್ಕಶ ಧ್ವನಿಯಿಂದ ಒದರುತ್ತಲಿದ್ದವು. ಇಂದು ಸೂರ್ಯೋದಯವಾದರೂ ಸೂರ್ಯನಾರಾಯಣನು ಅಪಸವ್ಯ ಮಾರ್ಗವನ್ನು ಹಿಡಿದಿರುವದರಿಂದ ಸ್ವರ್ಗದ ಮಹಾದ್ವಾರವು ಇನ್ನು ಆರು ತಿಂಗಳವರೆಗೆ ಮುಚ್ಚುವದೆಂದು ಪುರಾಣಿಕರು ತಮ್ಮ ಪುರಾಣವನ್ನು ಪಠಿಸುತ್ತ ಇದ್ದರು."

ಇಂಥದೊಂದು ಬೆಳಗಿನಲ್ಲಿ ಒಡಕನನ್ನು ಸಾಲೆಗೆ ಕಳಿಸುವ ತಯಾರಿಯು ನಡೆಯಿತು. ಒಡಕನು ಒಳಗೆ ಹೋಗಿ ಮೋರೆ ತೊಳೆದುಕೊಂಡು ಬಂದು ಅಂಚಿನ ಧೋತರವನ್ನುಟ್ಟುಕೊಂಡು ಬಗಲಕಸಿಯಂಗಿಯನ್ನು ತೊಟ್ಟನು. ತಲೆಯ ಮೇಲೆ ರುಮಾಲನ್ನು ಸುತ್ತಿದನು. ಬಳಿಕ ಊರಿಂದ ತಂದ ತನ್ನ ಓದುವ ಪುಸ್ತಕದ ಗಂಟನ್ನೂ, ಪಾಟಿಯನ್ನೂ ಬಗಲಲ್ಲಿರಿಸಿಕೊಂಡು ಸಾಲೆಗೆ ಹೋಗಲಿಕ್ಕೆ ಸಿದ್ಧನಾಗಿ ನಿಂತನು. ಅವನಿಗೆ ಬೆಂಬಲವಾಗಿ ಗೋಪಾಳರಾಯರೂ ಶ್ರೀಪತಿರಾಯರೂ ಕೂಡಿ ನಡೆದರು. ಉಣ್ಣೆಯ ಬಗಲಕಸಿ ಅಂಗಿಯನ್ನು ಹಾಕಿ, ಅಂಚಿನ ಧೋತರವನ್ನು ಹೊದ್ದು ತಲೆಯ ಮೇಲೆ ಪಾಗೋಟಿಯನ್ನಿಟ್ಟು ನಡೆದ ಶ್ರೀಪತಿರಾಯರೆದುರಿಗೆ, ಭವ್ಯವಾಗಿ ವಿಭೂತಿಯನ್ನು ಹಚ್ಚಿಕೊಂಡು ಪಂಜೆಯನ್ನುಟ್ಟು, ಶಾಲನ್ನು ಹೊದ್ದುಕೊಂಡು ಒಕ್ಕತಲೆಯಿಂದ ಬರುತ್ತಿದ್ದ ತಿಪ್ಪಾಶಾಸ್ತ್ರಿಗಳು "ಯಾಕೋ ದೇಸಾಯರ ಸ್ವಾರೀ ಬೆಳಗ್ಗೇ ಹೊರಟಿತಲ್ಲ?" ಎಂದು ಅಪಶಕುನ ನುಡಿದರು.

ಬೊಮ್ಮಗೇರಿಯು ಎರಡು ಸಾವಿರಕ್ಕಿಂತ ಹೆಚ್ಚು ಜನ ವಸತಿಯುಳ್ಳ ಗ್ರಾಮವಾಗಿದ್ದರಿಂದ ಅಲ್ಲಿ ಕಂಪನೀ ಸರಕಾರದ ಆಳಿಕೆಯಲ್ಲಿಯೇ ಒಂದು ಸರಕಾರೀ ಸಾಲೆಯುಂಟಾಗಿತ್ತು. ಆ ಸಾಲೆಯಲ್ಲಿ ಈಗ ತೊಂಬತ್ತು ತೊಂಬತ್ತೈದು ವಿದ್ಯಾರ್ಥಿಗಳಿದ್ದು ಕನ್ನಡ ಮುಲ್ಕೀ ಪರೀಕ್ಷೆಯ ವರೆಗೆ ಇಯತ್ತೆಗಳಿದ್ದವು. ಅಲ್ಲಿ ಒಂದನೆಯ ವರ್ಷ ಟ್ರೇನಿಂಗ ಕಾಲೇಜ ಪಾಸಾಗಿದ್ದ ಒಬ್ಬ ಹೆಡ್ ಮಾಸ್ತರರೂ, ಮುಲ್ಕೀ ಪರೀಕ್ಷೆ ಪಾಸಾದ ೧ನೆಯ ಅಸಿಸ್ಟಂಟ ಮಾಸ್ತರರೂ, ಪರೀಕ್ಷೆ ಪಾಸಾಗದೆ ಬಹಳ ದಿವಸಗಳಿಂದ ಕಲಿಸುತ್ತ ಬಂದ ಅಯ್ಯನವರೆಂಬ ೨ನೆಯ ಅಸಿಸ್ಟಂಟ ಮಾಸ್ತರರೂ ಹೀಗೆ ಮೂವರು ಗುರುಗಳಿದ್ದರು. ಹೆಡ್ ಮಾಸ್ತರರಿಗೆ ಮಾಸ್ತರರೆಂದೂ, ಒಂದನೆಯ ಅಸಿಸ್ಟಂಟ ಮಾಸ್ತರರಿಗೆ ಪಂತರೆಂದೂ, ಎರಡನೆಯ ಅಸಿಸ್ಟಂಟ ಮಾಸ್ತರರಿಗೆ ಅಯ್ಯನವರೆಂದೂ ವಿದ್ಯಾರ್ಥಿಗಳು ಕರೆಯುತ್ತಿದ್ದರು. ಕಾಲಕ್ರಮದಿಂದ ಗುರು ಶಬ್ದವು ಗೂಡನ್ನು ಸೇರಿ 'ಮಾಸ್ತರ' ಎಂಬ ಶಬ್ದವು ಮುಂದುವರಿಯಹತ್ತಿತು. ಈ ವಿಷಯವನ್ನು ಗಂಗಾಧರದೀಕ್ಷಿತರು ತಮ್ಮ 'ಬ್ರಹ್ಮಪುರಿ-ವರ್ಣನೆ'ಯ ೧೧ನೆಯ ಅಧ್ಯಾಯದಲ್ಲಿ ಹೀಗೆ ವರ್ಣಿಸಿರುವರು–

ಶ್ರೀಮದ್ವೇಂಕಟ ನಾಮಧಾಮಕಮಹಾ ಧಾರಾಧರಾದ್ಯೇಯುಗೆ ।
ಭೀಮಶ್ಚಂಡ ವೃಷಾದ್ರಿರಿತ್ಯಭಿಹಿತಸ್ತ್ರೇತಾಯುಗೇ ತದ್ಗಿರಿಃ ॥
ವಾಯೋಃ ಪ್ರೀತಿತಮೋಂಜನಾಚಲ ಇತಿಖ್ಯಾತಸ್ತು ತ ದ್ವಾಪರೇ ।
ಧೀಮಾನ್ ಶೇಷಗಿರೀರಿತಿರ್ನಿಗದಿತಸ್ತದ್ವಗ್ಗುರುರ್ಮಾಸ್ತರಃ ॥

ಪ್ರಾಚೀನಕಾಲದಲ್ಲಿ ವಿದ್ಯೆ ಕಲಿಯತಕ್ಕವರು ನಿರ್ಜನವಾದ ಪ್ರದೇಶದಲ್ಲಿ ಆಶ್ರಮ ಕಟ್ಟಿಕೊಂಡಿದ್ದು ತಮ್ಮ ಗುರುಕುಲಕ್ಕೆ ವಿದ್ಯಾರ್ಥಿಗಳಾಗಿ ಬಂದ ಶಿಷ್ಯರಿಗೆ ತಾರತಮ್ಯ ಭಿನ್ನಭೇದಗಳಿಲ್ಲದೆ ನಿಷ್ಕಾಮುಕರಾಗಿ, ವಿದ್ಯಾದಾನವು ಪರಮಪುಣ್ಯಕರವೆಂದು ತಿಳಿದು ವಿದ್ಯೆ ಕಲಿಸುತ್ತಿದ್ದರು. ಆಗಿನ ಕಾಲದ ರಾಜರು ಇಂಥ ಗುರುಕುಲಗಳಲ್ಲಿರುವ ಗುರುಶಿಷ್ಯರ ಹೊಟ್ಟೆಬಟ್ಟೆಗಳಿಗೆ ಸಹಾಯಮಾಡುತ್ತಿದ್ದರು. ಆದರೆ ಗುರುಗಳು ರಾಜರಿಗೆ ಅಂಕಿತರಾಗಿರದೆ ಸ್ವತಂತ್ರರೂ, ನಿಸ್ಪೃಹರೂ ಆಗಿದ್ದರು. ಹೀಗಿದ್ದುದರಿಂದ ಅವರ ಪ್ರತಿಷ್ಠೆಯು ಬೆಳೆದು ರಾಜಮಾನ್ಯರಾಗಿ ಗುರು (ದೊಡ್ಡ) ಶಬ್ದಕ್ಕೆ ಯೋಗ್ಯರಾಗಿದ್ದರು. ರಾಜಾಧಿರಾಜರು ಸಹ ತಮ್ಮ ದೊಡ್ಡಿಸ್ತನವನ್ನೂ ಅಹಂಭಾವವನ್ನೂ ಬಿಟ್ಟು ಇಂಥ ಗುರುಕುಲಗಳಲ್ಲಿರಲಿಕ್ಕೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದರು. ಗುರುಗಳ ಅನುಗ್ರಹಕ್ಕೆ ಪಾತ್ರರಾದವರೇ ಶ್ರೇಷ್ಠರೆಂದು ಆಗಿನ ಕಾಲದ ಪರಿಪಾಠ ವಿತ್ತು. ಹೀಗಿದ್ದುದರಿಂದ ಆಗಿನ ಕಾಲದ ಗುರುಗಳು ಗೌರವವುಳ್ಳವರೂ ಶ್ರೇಷ್ಠರೂ ಆಗಿದ್ದರು.

ಕಾಲಕ್ರಮದಿಂದ ಜನಸಂದಣಿಯು ಹೆಚ್ಚಾಗಿ ಗ್ರಾಮಗಳ ಸಂಖ್ಯೆಗಳು ಬೆಳೆದವು. ಆಗ ನಿರ್ಜನ ಪ್ರದೇಶದಲ್ಲಿ ಆಶ್ರಮ ಕಟ್ಟಿಕೊಂಡಿದ್ದ ಗುರುಕುಲಗಳು ಬರಬರುತ್ತ ಕಡಿಮೆಯಾಗಿ ಪ್ರತಿಯೊಂದು ಗ್ರಾಮದಲ್ಲಿ ವಿದ್ಯಾಭಿಮಾನಿಗಳು ಬಂದು ಇರಹತ್ತಿದರು. ಇವರು ಹಿಂದಿನ ಕಾಲದ ಗುರುಗಳಂತೆ ನಿರಿಚ್ಛರಾಗಿರದಿದ್ದರೂ ಊರವರಿಂದ ತಮ್ಮ ಉಪಜೀವನದ ಮಟ್ಟಿಗೆ ಸಹಾಯ ಪಡೆದು ವಿದ್ಯಾದಾನವು ಪುಣ್ಯಕರವೆಂಬ ಭಾವನೆಯಿಂದ ವಿದ್ಯೆ ಕಲಿಸಹತ್ತಿದ್ದರಿಂದ

“ ಅನ್ನದಾತಾ ಭಯಾತ್ರಾತಾ ಯಸ್ತು ವಿದ್ಯಾಂ ಪ್ರದಾಸ್ಯತಿ ।
ಜನಿತಾ ಚೋಪನೀತಾಚ ಪಂಚೈತೇ ಪಿತರಃ ಸ್ಮೃತಾಃ ।

ಎಂಬ ಉಕ್ತಿಯಂತೆ ಆಗಿನ ಕಾಲದಲ್ಲಿ ವಿದ್ಯೆ ಕಲಿಸತಕ್ಕವರು ತಂದೆಯಂತೆ

ಪ್ರತಿಷ್ಠೆ ಪಡೆದರು. ಆಗಿನ ಕಾಲಕ್ಕೆ ಕರ್ನಾಟಕ ಸಾಮ್ರಾಜ್ಯವು ವೈಭವ ವನ್ನು ಹೊಂದಿದ್ದರಿಂದ ಆಗ ವಿದ್ಯೆ ಕಲಿಸತಕ್ಕವರಿಗೆ ಅಯ್ಯನವರು (ಅಪ್ಪ ನವರು) ಎಂಬ ಕನ್ನಡ ಹೆಸರು ಸ್ವಾಭಾವಿಕವಾಗಿ ಬಂದಿತು.

ಕರ್ನಾಟಕದ ಸಾಮ್ರಾಜ್ಯ ವೈಭವವು ಕಳೆಗುಂದಿ ಮರಾಠಿಗರ ಉದಯವಾಗಿ ಮಹಾರಾಷ್ಟ್ರಕ್ಕೆ ಸಾಮ್ರಾಜ್ಯವಾದ ಬಳಿಕ ಆಗಿನ ಕಾಲದ ಸಾಮ್ರಾಜ್ಯದ ಪರಿಸ್ಥಿತಿಗನುಸರಿಸಿ ಕರ್ನಾಟಕದಲ್ಲಿ ಮಹಾರಾಷ್ಟ್ರ ಭಾಷೆಯು ಕಾಲು ಚಾಚಿತು. ಆಗಿನ ಕಾಲಕ್ಕೆ ಪ್ರತಿಷ್ಠಿತರಾದ ಜನರು ತಮ್ಮ ಮಕ್ಕಳಿಗೆ ಮಹಾರಾಷ್ಟ್ರಭಾಷೆಯಿಂದ ಶಿಕ್ಷಣ ಕೊಡಿಸಹತ್ತಿದರು. ಇವರ ಶಿಕ್ಷಕರು ಪರಪ್ರಾಂತದಿಂದ ಬಂದಿದ್ದುದರಿಂದ ಇವರಿಗೆ ಪಂತರೆಂಬ ಹೆಸರು ಬಂತು. ಬರಬರುತ್ತ ಪಂತರ ಪ್ರಾಬಲ್ಯವು ಹೆಚ್ಚಾಗಿ ಅಯ್ಯನವರು ಅರಣ್ಯವಾಸಿಗಳಾದರು.

ಮಹಾರಾಷ್ಟ್ರ ಸಾಮ್ರಾಜ್ಯವು ಅಳಿದು ಆಂಗ್ಲ ಸಾಮ್ರಾಜ್ಯವು ಸ್ಥಿರವಾದ ಬಳಿಕ **ಮಾಸ್ತರ** (ಮಾ-ಲಕ್ಷ್ಮಿ, ಅಸ್ತ-ನಾಶವಾದ) ಎಂಬ ಯಥಾರ್ಥನಾಮವು ಬಂದಿತು. ಇದು, ಆಗಿನ ಕಾಲದಲ್ಲಿ ಪ್ರಚಾರ ಪಡೆದ "ಭಿಕ್ಷೆ ಹುಟ್ಟದವನು ಶಿಕ್ಷಕನಾಗಬೇಕು" ಎಂಬ ನಾಣ್ಣುಡಿ ಯಿಂದ ಗೊತ್ತಾಗುವದು. ಇಂಥ ಪರಿಸ್ಥಿತಿಯಲ್ಲಿಯೇ ಗಂಗಾಧರದೀಕ್ಷಿತ ರಿದ್ದು ತಮ್ಮ 'ಬ್ರಹ್ಮಪುರಿ-ವರ್ಣನೆ' ಕಾವ್ಯವನ್ನು ಬರೆದಿರಬಹುದೆಂಬುದು ಅವರ ಕಾವ್ಯದಲ್ಲಿರುವ ಮೇಲಿನ ಶ್ಲೋಕದಿಂದ ಕಂಡುಬರುವದು.

ನಮ್ಮ ದೇಸಾಯರು ಸಾಲೆಯನ್ನು ಪ್ರವೇಶಿಸಿದ ಕಾಲಕ್ಕೆ ದೊಡ್ಡ ಮಾಸ್ತರರು ಸಾಲೆ ತಪ್ಪಿಸಿದ ಹುಡುಗರಿಗಾಗಿ ಶಿಕ್ಷಾಸತ್ರವನ್ನು ಸುರುವು ಮಾಡಿದ್ದರು. ಮೇಲಿಂದ ಮೇಲೆ ಸಾಲೆ ತಪ್ಪಿಸುವ ಉಡಾಳ ಹುಡುಗರನ್ನು ಮೂಲದಂಡಿಗೆಗೆ (ತೊಲೆಗೆ ಸಾಲಾಗಿ ಕಾತಿಯ ಹಗ್ಗವನ್ನು ಕಟ್ಟಿ ಅದಕ್ಕೆ ಕೈಚಪ್ಪಾಳೆ ಹಾಕಿಸಿ ತೂಗುಹಾಕುವದು) ಏರಿಸಿ ಚಬಕದ ಪೆಟ್ಟುಗಳನ್ನು ಕೊಡುತ್ತಿದ್ದರು. ನಾಲ್ಕಾರು ದಿವಸಗಳಿಂದ ರಜೆ ಪಡಕೊಳ್ಳದೆ ಸಾಲೆ ತಪ್ಪಿಸಿದ ವಿದ್ಯಾರ್ಥಿಗಳನ್ನು ಗೋಡೆಗೆ ಕುರ್ಚೆಯಂತೆ ಕೂಡಿಸಿ ಬೆನ್ನುಬಗ್ಗಿಸಿ ಅವರ ಮೇಲೆ ತಪ್ಪದೆ ಶಾಲೆಗೆ ಬರುವ ಹುಡುಗರನ್ನು ಕೂಡಿಸಿದ್ದರು. ಎರಡು ದಿವಸ ಸಾಲೆ ತಪ್ಪಿಸಿದ ಹುಡುಗರನ್ನು ಮೊಳಕಾಲಲ್ಲಿ ಕೈಗಳನ್ನು

ಹಾಕಿಸಿ ಕಿವಿ ಹಿಡಿಸಿ ನಿಲ್ಲಿಸಿದ್ದರು. ಒಪ್ಪತ್ತು ಶಾಲೆ ತಪ್ಪಿಸಿದವರಿಗೆ ಇಪ್ಪತ್ತು ಚಬಕದ ಪೆಟ್ಟುಗಳ ಶಿಕ್ಷೆಯನ್ನು ಕೊಟ್ಟಿದ್ದರು. ಒಟ್ಟಿನ ಮೇಲೆ ಆಗ ಮಾಸ್ತರರು ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡತಕ್ಕ ಶಿಕ್ಷಕರಾಗಿದ್ದರು.

ದೇಸಾಯರು ಶಾಲೆಯ ಪಂಚರಿದ್ದು ಅವರು ಶಾಲೆಯೊಳಗೆ ಬಂದ ಕೂಡಲೆ ಅವರ ಆಗಮನದಿಂದ ಎಲ್ಲ ವಿದ್ಯಾರ್ಥಿಗಳು ಶಿಕ್ಷೆಯಿಂದ ಮುಕ್ತರಾದರು. ಎಲ್ಲ ವಿದ್ಯಾರ್ಥಿಗಳಿಗೆ ಅನಾಧ್ಯಾಯವಾಯಿತು. ಮಾಸ್ತರರು ಮುಂದೆ ಹೋಗಿ ಶ್ರೀಪತಿರಾಯರನ್ನೂ ಗೋಪಾಳರಾಯರನ್ನೂ ಕೈಹಿಡಿದು ಕರೆದುಕೊಂಡು ಬಂದು ಕುರ್ಚೆಯ ಮೇಲೆ ಕುಳ್ಳಿರಿಸಿ ತಾವು ಅಲ್ಲಿಯೇ ಮೇಜಿನ ಬದಿಯಲ್ಲಿ ಎದ್ದುನಿಂತರು. ಆಗ ಶ್ರೀಪತಿರಾಯರು "ಏನು, ಮಾಸ್ತರ್! ಹೊಡಿಯೋ ಚಟ ಬಹಳ ಕಾಣತದ ನಿಮಗ?" ಎಂದು ಮೋರೆ ಗಂಟುಹಾಕಿದರು. "ಇಲ್ಲ, ರಾಯರೆ! ಒಂದು ತತ್ವದ ಪ್ರಕಾರ ಇದೆಲ್ಲ ನಡೆದಿದೆ. ಹೇಳೆಂದರೆ ಅದನ್ನು ಹೇಳುತ್ತೇನೆ" ಎಂದು ಕೈಜೋಡಿಸಿದರು. ಶ್ರೀಪತಿರಾಯರು ಅಭಯವಿತ್ತೊಡನೆ ಧೋತರವನ್ನು ಸರಿಪಡಿಸಿಕೊಂಡು ಹುಡುಗರ ಕಡೆಗೆ ದರ್ಪದಿಂದ ನೋಡುತ್ತ ಶ್ರೀಪತಿರಾಯರ 'ಅಧ್ಯಕ್ಷತೆ' ಯಲ್ಲಿ ಮಾಸ್ತರು ಒಂದು ಭಾಷಣವನ್ನು ಸುರುವು ಮಾಡಿದರು. "ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್" ಎಂಬುದು ಅಕ್ಷರಶಃ ನಿಜವಿದೆ. ನಮ್ಮ ಮಾಸ್ತರ ವಿನಾಯಕ ಪಂತರು ಹೇಳುತ್ತಿದ್ದ 'ಛಡೀ ವಾಜೆ ಛಮ್ ಛಮ್, ವಿದ್ಯಾಯೇಯೀ ಘಮ್ ಘಮ್' ಎಂಬ ಸುಭಾಷಿತವೇನು ಸುಳ್ಳೆ? ಚಿಕ್ಕಂದಿನಿಂದ ಮೈಮುತ್ತಗೆ ಮಾಡಿದರೆ ಹುಡುಗರು ಪುಕ್ಕರಾಗುತ್ತಾರೆ ಹೀಗೆ ಮೇಲಿಂದ ಮೇಲೆ ಬಡತ ಬೀಳಬೇಕು. ಇದಲ್ಲದೆ ಸಂಜೆಯ ಕಡೆಗೆ ಆನೀಕಿಚ್, ಲಗ್ಗೀ ಚಂಡು, ಹುಡ್‌ತುತೂ, ತಿಳ್ಳಿ ಮುಂತಾದ ಆಟವಾಡಿಸಿ ಹುಡುಗರ ಮೈ ಕಲ್ಲುಮಾಡಿ ಬಿಡಬೇಕು. ಓದಿ ಮರುಳಾದ ಕೂಸಭಟ್ಟನಂತೆ ಬರೇ ಓದಿ ಓದಿ ಮೂಲಿ ಹಿಡಿದು ಕೂಡುವ ಮುಗ್ಗಲಗೇಡಿಗಳಿಂದ ದೇಶಕ್ಕೆ ಏನು ಉಪಯೋಗ? ಈಗ 'ಹುಡುಗರನ್ನು ಹೊಡೆಯಬಾರದು ಮೈ ಕೈ ಮುಟ್ಟಬಾರದು' ಎಂದು ಕಾಯಿದೆಗಳಾಗಿರುತ್ತವೆ. ಹೀಗಾಗಿ ಪ್ರಶ್ನೆಗೆ ಉತ್ತರ ಕೊಡುವ ಉತ್ತರಕುಮಾರರು ನಾಡಿನಲ್ಲಿ

ಹೆಚ್ಚಾಗುತ್ತಾರೆ. ಇದೂ ಒಂದು ಶಾರೀರಿಕ ಶಿಕ್ಷಣವೆಂದು ಶಿಕ್ಷೆ ಕೊಡಬೇಕಾಗುತ್ತದೆ" ಎಂದು ತಮ್ಮ ನಡತೆಯನ್ನು ಸಮರ್ಥಿಸಿದರು.

"ಅದಕಂತೆ ಹುಡುಗರು ನಿಮಗೆ ಹೆದರಿ ದಾರಿಯಲ್ಲಿ ಕಂಡಕೂಡಲೆ ಅಡಗಿಮನೆಯಲ್ಲಿ ಅಡಗಿಕೊಂಡು ಕೂಡುತ್ತಾರೆ" ಎಂದು ಶ್ರೀಪತಿರಾಯರು ನಕ್ಕರು. "ಹೌದು ರಾಯರೆ! ಹಾವಿನ ಅಂಜಿಕೆ ಹಲ್ಲಿಸಲ್ಲಿರದಿದ್ದರೆ ಜನರು ಅದನ್ನು ಹಗ್ಗವನ್ನಾಗಿ ಮಾಡಿಬಿಡಬಹುದಲ್ಲ?" ಎಂದು ಮಾಸ್ತರರು ಉತ್ತರವಿತ್ತರು. "ನಿಜ, ನಿಜ, ಹುಡುಗರಿಗೆ ಹೆದರಿಕೆ ಹಾಕುವದು ಒಳ್ಳೆಯದು" ಎಂದು ಗೋಪಾಳರಾಯರು ತಲೆಯಲ್ಲಾಡಿಸಿದರು. ಇಲ್ಲಿಯವರೆಗೆ ಮಾಸ್ತರರು ಹೇಳಿದುದನ್ನು ಅವರು ಸುಮ್ಮನೆ ನಿಂತು ಕೇಳಿದ್ದರು. ಆ ಮೇಲೆ ಒಡಕಣ್ಣನ ಮಾತು ಹೊರಟು ಮಾಸ್ತರು ಎಲ್ಲವನ್ನೂ ಕೇಳಿಕೊಂಡರು. "ಹುಡುಗನ ಪರೀಕ್ಷೆ ತೆಗೆದುಕೊಂಡು ನಾಲ್ಕನೆಯ ಇಯತ್ತೆಗೆ ಹಾಕಿಬಿಡಿರಿ" ತಮ್ಮ ಪ್ರಸಾದವಾಣಿಯಿಂದ ಶ್ರೀಪತಿರಾಯರು ಹೇಳಿದರು. ಬಳಿಕ ಹುಡುಗನನ್ನು ಸಾಲೆಯಲ್ಲಿ ಕೂಡಿಸಿ ರಾಯರಿಬ್ಬರೂ ಮನೆಗೆ ನಡೆದರು. ಆಗ ಮಾಸ್ತರು ಮತ್ತೆ ಸರ್ವಾಧಿಕಾರಿಗಳಾಗಿ ಒಡಕಣ್ಣನ ಕಡೆಗೆ ತಿರುಗಿ ಹುಬ್ಬುಗಂಟಿಕ್ಕಿ "ನಿನ್ನ ಹೆಸರೇನು?" ಎಂದು ಕೇಳಿದರು. ಹುಡುಗನು ಒಮ್ಮೆಲೆ ಅಲ್ಲಿಯೇ ಕುರ್ಚಿಯ ಹತ್ತಿರ ಕುಳಿತು 'ಒಡಕ್ಯಾಸ್ರಿ' ಎಂದನು. ಆಗ ಮಾಸ್ತರು ಗದ್ದರಿಸಿ "ಏ! ಹಾಂಗ ಕೂತಗೊಂಡು ಉತ್ತರ ಕೊಡಬಾರದು. ಎದ್ದು ನಿಂತು ಕೈಕಟ್ಟಿಕೊಂಡು ಉತ್ತರ ಕೊಡಬೇಕು. ಇದು ಹಳ್ಳಿ ಊರ ಐನೋರ ಸಾಲೆ ಅಲ್ಲ. ಶಿಸ್ತು ಬೇಕು, ಶಿಸ್ತು; ಏಳು" ಎಂದರು. ಹುಡುಗನು ಎದ್ದು ಕೈಕಟ್ಟಿಕೊಂಡು ನಿಂತನು. ಆಗ ಮಾಸ್ತರು ಮತ್ತೆ "ನೋಡು, ಹಿರೇರು ಏನು ಹೇಳಿದರು, ನೀನು ಏನು ಹೇಳತೀದಿ! ಯಾರರ ಹೆಸರು ಕೇಳಿದರ ತೊಟ್ಟಿಲದಾಗ ಇಟ್ಟ ಹೆಸರು ಹೇಳಬೇಕು. ಪ್ಯಾಟೀ ಹುಡುಗರು ಬಲು ಬಿರ್ಕಿ, ಮಿತ್ರಗಿನ ಕಳ್ಳರು, ಹ್ಯಾಂಗ ಲಾಲಿಸಿ ಕೇಳತಾರ ನೋಡು! ಇನ್ನು ಇವರು ನಿನಗೆ 'ಒಡಿಕ್ಯಾ' ಅಂತ ಕರೀತಾರ, ಆತು! ನಿನಗೆ ಕೋಷ್ಟಕು ಬರತಾವೇನು?" ಎಂದು ಪ್ರಶ್ನೆ ಮಾಡಿದರು.

"ಬರತಾವರಿ."

"ಹಾಂಗಾದರ ವಿಲಾಯತಿ ನಾಣ್ಯಗಳ ಕೋಷ್ಟಕು ಅನ್ನು?"

"ಅವನ್ನ ನಮ್ಮ ಐನೋರು ಕಲಿಸಿಲ್ಲರಿ. ಕನ್ನಡ ಕೋಷ್ಟಕ ಬರತಾವರಿ."

"ಈಗ ಇಂಗ್ಲೀಷರ ರಾಜ್ಯ ಅದ, ಗೊತ್ತದನೋ ಇಲ್ಲೊ ಇಂಗ್ಲೀಷ ಕೋಷ್ಟಕ ಬರಲೇಬೇಕು. ಮಹಾರಾಷ್ಟ್ರರ ರಾಜ್ಯ ಇದ್ದಾಗ ಮರಾಠಿ ಕೋಷ್ಟಕ ಇತ್ತು. ಕನ್ನಡ ರಾಜ್ಯ ಇದ್ದಾಗ ಕನ್ನಡ ಕೋಷ್ಟಕ ಇತ್ತು. ಕನ್ನಡ ರಾಜ್ಯ ಹೋಗಿ ಬಹಳ ದಿವಸ ಆದರೂ ನಿಮ್ಮ ಐನೋರು ಇನ್ನೂ ಕನ್ನಡs ತೀಡತಾರ ಕಾಣತದ! ಆತು ಮಗ್ಗ್ಯಾರ ಬರತಾವ್ರೋ ಇಲ್ಲೋ?"

"ಬರತಾವರಿ."

"ಒಂಬತ್ತ ಏಳಲೆ?"

"ಕನ್ನಡ ಮಗ್ಗಿ ಒರೋದಿಲ್ಲರಿ. ಮರಾಠಿ ಮಗ್ಗಿ ಬರತಾವರಿ."

"ಇದೇನು! ಹಂಡಬಂಡ ಆತಲ್ಲ. ಸವ್ವಾಸತ್ತೆ? ಹೇಳು!"

"ತ್ರಿಸಷ್ಟರಿ!"

"ಆತು, ಇದ್ದೀತು, ತಟ್ಟನ ಉತ್ತರಾ ಅನಕಾ ಕೊಡತೀದಿ; ಮೂರನೆ ಇಯತ್ತೆಯ ಕವಿತಾ ಬರತಾವೇನು?"

"ಬರತಾವರಿ."

"ನಿನಗೆ ನೆಟ್ಟಗ ಬರುವ ಒಂದು ಕವಿತಾ ಅನ್ನು?"

"ಸುಳ್ಳನಾಡಲು **ಬೇಕು** ಜನರೊಳು।
ಕಳ್ಳನೆನಿಸಲು **ಬೇಕು** ನೀ ಮೈ-।
ಗಳ್ಳನಾಗಲು **ಬೇಕು** ಗುರುತಾಯ್ತಂದೆಗಳ ನುಡಿಗೇ॥
ಒಳ್ಳಿತನ ಬಿಡಬೇಕು ಪ್ರಾಣಿಗ-।
ಳಲ್ಲಿ ನಿರ್ದಯನಾಗ**ಬೇಕೈ**।
ಕ್ಷುಲ್ಲಕರ ಸಂಗದಲಿ ಮುಳುಗಲು **ಬೇಕು ಕೆಡಬೇಕು**॥"

"ಶಹಬ್ಬಾಶ್! ಕವಿತಾ ಪಸಂದ ತಿದ್ದಿ ಅಂತೀದಿ!"

" ಇನ್ನೊಂದು ಕವಿತಾ ಅದನರಿ. ಅದನ್ನೂ ಅನ್ನಲೇನರಿ? " ಎಂದು ಉಬ್ಬಿಕೆ ೕಳಿದನು.

' ಹುಂ; ಅದೂ ಆಗಲಿ. ಆದರ ಗತಿ ಏನೇನು ಆಗೇದೋ ನೋಡೋಣ ? '

" ಬಡವರನು ಬಳಲಿಸಲು **ಬೇಕೊಡ** ।
ನುಡಿದ ಭಾಷೆಗೆ ತಪ್ಪ**ಬೇಕ್ಕೆ** ।
ನಡತೆ ಹೀಸರ ಮಾತು ನಂಬಲು **ಬೇಕು** ಕಡೆತನಕಾ ।
ಕೆಡಕು ಹಾದಿಯು ಹಿಡಿಯ**ಬೇಕಾ** ।
ರೊಡವೆ ಗಾಸೆಯ ಮಾಡಬೇಕಡಿ ।
ಗಡಿಗೆ ಸದ್ಗುಣಗಳನು ಬಿಟ್ಟಿರ**ಬೇಕು ಕೆಡಬೇಕು** " ॥

" ಅಲ್ಲಪಾ, ಈ ಕವಿತಾ ಏನು ನಿಮ್ಮ ಏನೋರs ಹೇಳ್ಯಾರೋ ಸೀನs ಕಲತೀಯೋ ? "

" ಇಲ್ಲರಿ. ಏನೋರು ಹೇಳಿಲ್ಲ. ನಾನs ಒರಕೊಂಡು ಕಲತೇನರಿ. "

" ಹುಡುಗ ಹುಷಾರಿದ್ದೀಯಪಾ. ಕವಿತಾ ಪಸಂದ ತಿದ್ದೀದಿ. ಆತು, ಪುಸ್ತಕ ಓದಲಿಕ್ಕೆ ಬರತದೋ ಇಲ್ಲೋ ? "

" ಬರತದರಿ. "

" ಪುಸ್ತಕ ತಗದು ಒಂದು ಪಾಠ ಓದು. "

ಹುಡುಗನು ಗಂಟುಬಿಚ್ಚಿ ಪುಸ್ತಕ ತೆಗೆದು " ೩೨ನೆಯ ಪಾಠ. ' **ಉಡಾಳ ಹುಡುಗ** ' ಆ ಸಂಗನು ಬಹಳ ದಿಟ್ಟ ಹುಡುಗನು. ಅವನು ಮಾತು ಮಾತಿಗೆ ಹಟ ಮಾಡುತ್ತಾನೆ. ಅವನ ಬಾಯೊಳಗೆ ಕೆಟ್ಟ ಬೈಗಳು ಕಟ್ಟಿರುತ್ತವೆ. ಸಾಲೆಗೆ ಹೋಗುತ್ತೇನೆಂದು ಮನೆಯೊಳಗೆ ಹೇಳಿ ಓಣಿ ಓಣಿ ತಿರುಗಾಡುತ್ತಾನೆ. "

" ಸಾಕು, ಬಿಡು. ಚಲೋ ಪಾಠ ತೆಗೆದು ಓದಿದಿ. ಎಲ್ಲಾ ಯದ್ವಾ-ತದ್ವಾಸs ಅದ. ಇದನೇನು ಪುಸ್ತಕ ನೋಡಿಕೋತ ಓದಿದೋ, ಏನು ಹಾಂಗs ಓದಿದೊ ? "

" ಈ ಪಾಠ ನನಗ ಬಾಯಿಲೇನs ಬರತದರಿ. "

ಹುಡುಗನ ಪರಮಪಾಂಡಿತ್ಯದ ಸಾಕ್ಷಾತ್ಕಾರವು ಮಾಸ್ತರಿಗಾಯಿತು. ಆದರೆ ಅವರ ಕೈಯ್ಯಲೇನಿದೆ? ದೇಸಾಯರ ಹುಡುಗ; ಮೇಲಾಗಿ ಶ್ರೀಪತಿ ರಾಯರ ಮನೆಯಲ್ಲಿದ್ದಾನೆ. ಆ ದಿನ ಸಂಜೆಗೆ ಗೋಪಾಳರಾಯರನ್ನು ಭೆಟ್ಟಿಯಾಗಿ ಮಾಸ್ತರು ಹುಡುಗನ ಹೆಸರು ಹಚ್ಚುವದಾಗಿ ಹೇಳಿದರು.

ಮರುದಿವಸ ಗೋಪಾಳರಾಯರು ಸಾಲೆಗೆ ಹೋಗಿ ಒಡಕಣ್ಣನ ವಯಸ್ಸಿನ ದಾಖಲೆ ಹಚ್ಚಿ ಪೊಡಿಯಲ್ಲಿ ಸಹಿ ಮಾಡಿದರು. ಅವರ ಹತ್ತಿರವಿದ್ದ ಒಡಕಣ್ಣನ ಜನ್ಮಟಿಪ್ಪಣಿಯು ಅವನಿಗೆ ಹದಿನಾಲ್ಕು ವರುಷಗಳ ಮೇಲೆ ಎಂಟು ತಿಂಗಳು ಹಾಗು ಹದಿನೇಳು ದಿವಸಗಳಾದವೆಂದು ಹೇಳುತ್ತಿತ್ತು. " ಹುಡುಗ ಹೇಗಿದ್ದಾನೆ? " ಎಂಬ ಗೋಪಾಳರಾಯರ ಪ್ರಶ್ನೆಗೆ ಮಾಸ್ತರು ನಗನಗುತ್ತ " ಧಿಟ್ಟ ಇದ್ದಾನ; ಥಟ್ಟನ ಉತ್ತರಾ ಕೊಡತಾನ; ಬಿಜಕ್ಕ ಬಿಟ್ಟಕಾಯಿ ಹಿಚಿನಾಗ ನೋಡಿದ್ಹಾಂಗ ಅದ ಈಗ! ಇವನ ಉಲಕೋಚಿತನ ತಪ್ಪು ಹಾದಿ ಮಾತ್ರ ಹಿಡಿಯಬಾರದು, ದೇಸಾಯರ! " ಎಂದು ಹೇಳಿ ಸಮಾಧಾನಮಾಡಿ ಕಳಿಸಿದರು.

---

೫

## ವರ್ಗಕ್ಕೆ ಮೂಲ ಒಡಕಣ್ಣ........

ದೇಸಾಯರು ಸಾಲೆಯಿಂದ ಹೊರಬಿದ್ದಕೂಡಲೆ ಮಾಸ್ತರು ಸಾಲೆಯ ಪದ್ಯವನ್ನು ಹೇಳಿರೆಂದು ಆಜ್ಞಾಪಿಸಿದರು. ಕೂಡಲೆ ಮೂರು ವಿದ್ಯಾರ್ಥಿಗಳು ಮಧ್ಯದಲ್ಲಿ ನಿಂತು

" **ಪೊಡವಿಯೊಳು ಸಡಗರವ ಪಡೆದ ಲಂದನವು |**
**ಕಡುದಯದ ರಾಣಿಯರ ಸಿಂಗದಾಸನವು ||೧||**
**ವ್ಹಿಕ್ಟೋರಿಯಾಯೆಂಬ ಮಹರಾಣಿಯವರು |**
**ಯುಕ್ತಿಯಿಂದಲಿ ನಮ್ಮ ಕಾಪಾಡುವವರು || ೨ ||**

ಎಂಬ ಪದ್ಯವನ್ನು ಹೇಳಲಿಕ್ಕೆ ಹತ್ತಿದರು. ಅವರಂದಂತೆ ಎಲ್ಲ ಹುಡುಗರು ದನಿಗೂಡಿಸಿ ಪದ್ಯವನ್ನು ಹೇಳಿದರು. ಇಂದಿನ ' ವಂದೇಮಾತರಮ್ '

ಎತ್ತ ! ಆಂದಿನ ವಿಕ್ಟೋರಿಯಾ ಸ್ಮೃತಿ ಎತ್ತ ! ಹೀಗೆ ಹತ್ತು ಮಿನಿಟುಗಳ ವರೆಗೆ ಸಾಮೂಹಿಕ ಪ್ರಾರ್ಥನೆಯಾದ ಬಳಿಕ ನಂಬರುಗಳನ್ನು ಎಣಿಸಿ ಎಲ್ಲ ಹುಡುಗರೂ ತಮ್ಮ ತಮ್ಮ ಇಯತ್ತೆಗಳಿಗೆ ಹೋಗಿ ಕುಳಿತರು. ಬಳಿಕ ಹಿಂದಿನ ದಿವಸ ಓದಿಕೊಂಡುಬರಲಿಕ್ಕೆ ತಿಳಿಸಿದ ವಿಷಯಗಳನ್ನು ಮಾಸ್ತರ., ಒಪ್ಪಿಸಿಕೊಳ್ಳಲಿಕ್ಕೆಹತ್ತಿದರು. ಅಭ್ಯಾಸವನ್ನೊಪ್ಪಿಸದಿದ್ದ ವಿದ್ಯಾರ್ಥಿಗಳಿಗೆ ಚೆನ್ನಾಗಿ ಚಬಕದ ಏಟುಗಳು ಬಿದ್ದವು. ಒಡಕನು ಮಾತ್ರ ಹಿಂದೇ ಬಂದಿದ್ದುದರಿಂದ ಪೆಟ್ಟುಗಳು ಬೀಳಲಿಲ್ಲ. ಹತ್ತುಒಡಿದು, ಬಿಡುವಿನ ಗಂಟೆಯು ಬಾರಿಸಿದ ಕೂಡಲೆ ಎಲ್ಲ ಹುಡುಗರು ಎದ್ದು ಕೈಮುಗಿದು ತಮ್ಮ ತಮ್ಮ ಗಂಟುಪಾಟಿಗಳನ್ನು ತೆಗೆದುಕೊಂಡು ನಂಬರುಗಳನ್ನು ಎಣಿಸುತ್ತ ಸಾಲಾಗಿ ಸಾಲೆಯಿಂದ ಹೊರಟುಹೋದರು.

ಗೋಪಾಳರಾಯರು ಏಕಾದಶಿಯ ದಿವಸ ನಿರಾಹಾರಮಾಡಿದ್ದರಿಂದ ದ್ವಾದಶಿಯ ಪ್ರಾತಃಕಾಲದಲ್ಲಿ ಪಾರಣೆಯನ್ನು ತೀರಿಸಿಕೊಂಡು ಒಡಕನಿಗೆ ಚೆನ್ನಾಗಿ ಅಭ್ಯಾಸಮಾಡಲಿಕ್ಕೆ ಹೇಳಿ ತಮ್ಮ ಹಳ್ಳಿಗೆ ಹೊರಟು ಹೋದರು. ಒಡಕನು ಗುಟ್ಟನ್ನು ಹೊರಗೆಡಹುವವನಲ್ಲ; ಅಲ್ಲದೆ ಹೆಣ್ಣುಮಕ್ಕಳಜೊತೆಗೆ ಹರಟೆ ಕೊಚ್ಚುತ್ತ ಅವರು ಮಾಡತಕ್ಕ ಕೆಲಸಗಳಿಗೆ ಸಹಾಯಮಾಡತಕ್ಕ ಸ್ವಭಾವದವನು. ಹೀಗಾಗಿ ಸ್ವಲ್ಪ ದಿವಸಗಳಲ್ಲಿಯೆ ಆ ಮನೆಯಲ್ಲಿ ದೇಸಾಯರ ಪತ್ನಿಯ ಪ್ರೇಮಾದರಗಳಿಗೆ ಒಡಕಣ್ಣನು ಪಾತ್ರನಾದನು. ಅವನು ಸಾಲೆಗೆ ತಪ್ಪದೆ ಹೋಗುತ್ತಿದ್ದನು. ಮನೆಯೊಳಗೆ ಮಾಡಿಕೊಂಡು ಒರಲಿಕ್ಕೆ ಹೇಳಿದ ವಿಷಯಗಳನ್ನು ಮನಸ್ಸುಗೊಟ್ಟು ಓದಿ ಸಾಲೆಯಲ್ಲಿ ಒಪ್ಪಿಸುತ್ತಿದ್ದನು. ಮೇಲಾಗಿ ದೇಸಾಯರ ಮಗನಾಗಿದ್ದನು. ಹೀಗಾಗಿ ಆತನು ಮಾಸ್ತರಿಂದ ಮನ್ನಣೆ ಪಡೆದನು. ತನ್ನ ಬಣ್ಣದ ಮಾತುಗಳಿಂದ, ಹಣ್ಣು-ಹಂಪಲ ಮೊದಲಾದ ತಿನಸುಗಳ ಕಾಣಿಕೆಯಿಂದ ಗುರುಪ್ರೇಮ ಸಂಪಾದಿಸಿ ಒಡಕಣ್ಣನು ಸಾಲೆಯೊಳಗಿನ ವಿದ್ಯಾರ್ಥಿಗಳಿಗೆಲ್ಲ ಮಾನ್ಯನಾದನು.

ಒಮ್ಮೆ ಮಾಸ್ತರು ತಮ್ಮ ಮನೆತನದ ಕೆಲಸದ ನಿಮಿತ್ತ ಒಂದು ವಾರದ ರಜೆಯ ಮೇಲೆ ಹೋದರು. ತಾವು ಬರುವ ವರೆಗೆ ನಾಲ್ಕನೆ ಇಯತ್ತೆಯ ಹುಡುಗರ ಅಭ್ಯಾಸವನ್ನು ಒಪ್ಪಿಸಿಕೊಳ್ಳಲಿಕ್ಕೆ ಒಡಕನನ್ನೆ ನಿಯಮಿಸಿದರು. ಮಾಸ್ತರು ರಜೆಯ ಮೇಲೆ ಹೋದರೆ ಹುಡುಗರಿಗೆಲ್ಲ

ಹುರುಪು ಬಹಳ. ಆಗ ಉಡಾಳ ಹುಡುಗರು ಸಹ ತಪ್ಪದೆ ಸಾಲೆಗೆ ಬಂದು , ಮಾಸ್ತ ರ(ಸಾ)ಸಾಲಿ-ಸು—!' ಎಂದು ಕುಣಿದಾಡಿ ಗೊಂದಲ ಹಾಕುವರು. ಒಡಕಣ್ಣನು ನಾಲ್ಕನೆ ಇಯತ್ತೆಯ ಎಲ್ಲ ಹುಡುಗರನ್ನು ಎಬ್ಬಿಸಿ ಅಭ್ಯಾಸ ಒಪ್ಪಿಸಿಕೊಳ್ಳಲಿಕ್ಕೆ ಸಾಲೆಯ ಹೊರಗೆ ಕರೆದೊಯ್ದನು. ಅಲ್ಲಿ ನಂಬರುಗಳ ಅನುಕ್ರಮದಂತೆ ಹುಡುಗರನ್ನು ನಿಲ್ಲಿಸಿ ಕವಿತೆಯನ್ನು ಒಪ್ಪಿಸಿಕೊಳ್ಳಲಿಕ್ಕೆ ಹತ್ತಿದನು. ದಿನಾಲು ತಪ್ಪದೆ ಸಾಲೆಗೆ ಬರುವ ಮೇಲಿನ ನಂಬರಿನ ಹುಡುಗರೆಲ್ಲ ಕವಿತೆಯನ್ನು ಹೇಳಿದರು. ಸಾಲೆ ತಪ್ಪಿಸುವ ಉಡಾಳ ಹುಡುಗರಿಗೆ ಯಾವ ಕವಿತೆಯನ್ನೂ ಸರಿಯಾಗಿ ಹೇಳಲು ಬರಲಿಲ್ಲ. ಆಗ ಒಡಕನು ಕವಿತೆಯನ್ನು ಒಪ್ಪಿಸಿದ ಹುಡುಗರಿಗೆ ಸಾಲೆಯೊಳಗೆ ಹೋಗಿ ಕೂಡಲಿಕ್ಕೆ ಕಳಿಸಿ ಉಡಾಳ ಹುಡುಗರಿಗೆ ಕವಿತೆಯನ್ನು ತಾನು ಕಲಿಸಲು, ಅವರೆಲ್ಲ ದೊಡ್ಡ ಧ್ವನಿಯಿಂದ ಕವಿತೆ ಹೇಳಿದರು. ಹೀಗೆ ನಾಲ್ಕಾರು ಕವಿತೆಗಳನ್ನು ಹೇಳಿದ ಬಳಿಕ ಒಡಕನು ಅವರೆಲ್ಲರನ್ನು ದುಂಡಗೆ ಕೂಡಿಸಿ ತಾನು ಅವರ ಮಧ್ಯದಲ್ಲಿ ಕುಳಿತು 'ಇವೊತ್ತು ಮಾಸ್ತರ ಇದ್ದರ, ನಿಮ್ಮನ್ನ ಮೂಲಿ ದಂಡಿಗೆ ಹಾಕಿ ಬೆತ್ತದಿಂದ ಜಗ್ಗಿ ಬಡೀತಿದ್ದರಲ್ಲ!' ಎಂದನು. ಆಗ ಹುಡುಗರ ಉಲಕೋಚಿತನಕ್ಕೆ ಪುಟಸಿಕ್ಕಂತಾಯಿತು. ಸೆಟ್ಟರ ಬಸಟ್ಟಿಯು ತನ್ನ ಪಿತ್ತವನ್ನೆಲ್ಲ ಕಾರಿಕೊಂಡನು. 'ಬಡಿಯೋದನಕ ಸೈಯ್ಯೇ ಸೈ; ಮ್ಯಾಲ ಮೈತುಂಬ ಮುಳ್ಳು ಚುಚ್ಚತಿದ್ದರು! ಬಿಡಲೆ ಆ ಮಾಸ್ತರ ಜಾಳ ಕಟಕ ಆದಾನ. ಇವತ್ತ ಅವ ಇಲ್ಲಂತಽಽ ಸಾಲಿಗೆ ಬಂದೇನಿ. ಅವ ಅತ್ಲಾಗಽ ಹೋದರ ಪಾಡ ನೋಡು.'

ಕಂಬಾರ ಕಲ್ಲನು ಅದಕ್ಕೆ ದನಿಗೂಡಿಸಿದನು. 'ಹಿಂದಕ ನಾ ಒಂದು ವಾರ ಸಾಲೀತಪ್ಪಿಸಿ ತಿರಗಿದ್ದೆ. ಆಗ ನನ್ನ ಹೊರಿಸಿಗೊಂಡು ಸಾಲಿಗೆ ತಂದು ಗುದ್ದಿಗ್ಗಾಲು ಸರಿಸಿ ಗುದ್ದಿಗುದ್ದಿ ಹಣ್ಣುಮಾಡಿಬಿಟ್ಟಿದ್ದ. ಅವತ್ತಿನಿಂದ ನಾನೂ ಸಾಲಿಗೆ ಬಂದಿದ್ದೇ ಇಲ್ಲ. ಅವನ್ನ ಹ್ಯಾಂಗರ ಮಾಡಿ ಈ ಊರಿಂದ ಹೊರಬೀಳಲೆ?'

ಮಡಿವಾಳ ಮಲ್ಲನು ಸರಾಗವಾಗಿ ಅದನ್ನೇ ಹೇಳಿದನು. 'ಹೌದೋ ಎಪ್ಪ; ನನಗೂ ಬಲ ಬಡಿತಾನ ಆ ಮಾಸ್ತರ, ಲಬಲಬ ಹೊಯ್ಕೊಂಬೋತನಕ. ಗಡೀ ದುರ್ಗವ್ವನ್ನು ಕಳಿಸಿದ್ದಾಂಗ ಅವನ್ನ ಈ ಗಡೀ ಬಿಟ್ಟು

ಕಳಿಸಬೇಕಲೆ! ನಮ್ಮ ದೇಸಾಯರ ಒಡಕಣ್ಣಾ ಬಾಳ ಯುಕ್ತಿವಂತ ಆದಾನ. ಅವನ ಏನಾದರೂ ಹಂಚಿಕಿ ತಗದರ ಅದರಂತ ಮಾಡಲಿಕ್ಕೆ ನಾ ಸಿದ್ಧ ಆದೇನಿ ನೋಡು.' ತನ್ನ ಯುಕ್ತಿಯು ಇಷ್ಟು ಚೆನ್ನಾಗಿ ಸಾಧಿಸಿದ್ದನ್ನು ಕಂಡು ಒಡಕಣ್ಣನಿಗೆ ಬಹಳ ಆನಂದವಾಯಿತು. 'ನಾ ಹೇಳಿದ ಹಾಂಗ ನೀವೆಲ್ಲರೂ ಕೇಳಿದರ ಆರ ತಿಂಗಳದಾಗ ಅವ ಈ ಊರ ಬಿಟ್ಟು ಓಡಿ ಹೋಗುವ ಹಾಂಗ ಮಾಡತೇನಿ.' ಎಂದು ಅವನು ಗಂಭೀರವಾಗಿ ನುಡಿದನು. ಆಗ ಬಸೆಟ್ಟಿ ಮೊದಲಾದವರೆಲ್ಲ 'ಒಹೊ! ನೀ ಬೇಕಾದ್ದ ಹೇಳು, ನೀ ಹೇಳಿದ್ಹಾಂಗ ಮಾಡಾಕ ನಾವು ತಯಾರ ಇದ್ದೇವಿ.' ಎಂದು ಎದೆತಟ್ಟಿ ಹೇಳಿದರು.

ಒಡಕಣ್ಣನೆಂದನು 'ಈಗ ಸಾಲಿ ಒಳಗ ಹೋಗಿ ಓದಿಕೋತ ಕೂತಾರ ನೋಡು, ಅವರೆಲ್ಲ ಹೆಣಗರು. ಮಾಸ್ತರನ ಕಂಡು ಗದಗದ ನಡಗತಾರ. ಅವಗ್ಯಾಕ ಹೆದರಬೇಕಣಾ? ಅವ ಏನು ಹುಲಿನಽ ಹೊಸಗ್ಯಾನಽ? ಅದಕಂತ ಆ ಪುಕ್ಕ ಹುಡುಗರ್ನೆಲ್ಲ ಒಳಗ ಕಳಿಸಿಕೊಟ್ಟೇನಿ. ನೀವಽ ನೋಡ್ರಿ ಎದಿಗಾರರು! ಆತಽ ನಿಮ್ಮನ್ನೆಲ್ಲ ಬ್ಯಾರೆ ಕರದು ಕೂಡಿಸೇನಿ.. ಹಂಗಾದರ ನಾ ಹೇಳಿದ್ಹಾಂಗ ನೀವೆಲ್ಲಾರೂ ಮಾಡಲಿಕ್ಕೆ ಸಿದ್ಧರಿದ್ದೀರ್ಯಾ?'

ಆಗ ಹುಡುಗರು 'ಒಹೋ! ಬೇಕಾದ್ದೇಳು ಅದರಂತ ಮಾಡೇ ತೀರತೇವಿ.' ಎಂದು ಹೂಂ ಕೊಟ್ಟರು. ಒಡಕಣ್ಣನಿಗೆ ವಿಲಕ್ಷಣ ಆನಂದ ವಾಯಿತು. ಈ ಹುಡುಗರೆಲ್ಲ ನಾಯಕನಿಲ್ಲದೆ ಬಳಲುತ್ತಿದ್ದರಲ್ಲ! ಇವರಿಗೆಲ್ಲ ತಾನು ನಾಯಕನಾಗಬಹುದಲ್ಲವೇ? ಹೊಂಚುಹಾಕುವ ಪ್ರತಿಭೆಯು ತನ್ನ ದೆಂದು ಒಡಕಣ್ಣನು ನಿರ್ಧರಿಸಿದನು. ನಿರ್ಧರಿಸಿ ಮುಂದುವರಿಯುವದಕ್ಕೆ ಮೊದಲು ಒಂದು ವಚನವನ್ನು ಬೇಡಿದನು. 'ನನ್ನ ಮ್ಯಾಲ ಮಾಸ್ತರ ಬಹಳ ವಿಶ್ವಾಸ ಇಟ್ಟ್ಯಾನ. ನಾ ನಿಮ್ಮ ಮ್ಯಾಳದಾಗ ಕೂಡಿದ್ದು ಆ ಮಾಸ್ತರಗ ನೀವು ಸತ್ತರೂ ಹೇಳಬಾರದು. ನಾನು ಮಾಸ್ತರ ಸಂಗತೀಲೆ ಒಳ್ಳೇತನದಿಂದನಽ ಇದ್ದು ಕಡೀಕೆ ಅವಗ ಕಾಲಾ ತರತೀನಿ. ನಿಮ್ಮ ಗುಟ್ಟು ನೀವು ಯಾರಿಗೂ ಹೇಳೂದಿಲ್ಲ ಅಂತ ಆಣೀ ಮಾಡಿದರ ನಿಮಗ ಒಂದು ಹಂಚಿಕಿ ಹೇಳತೇನಿ ನೋಡ್ರಿ ಮತ್ತ.' ಅದಕ್ಕೆ 'ನಿನ್ನ ಎಂದಿಗೂ ಬೈಲಿಗೆ ತರೂದಿಲ್ಲ ಬಿಡು. ಏನು ಮಾಡೋದು ಅವ ನಮಗ ಮಾಡ್ಲಿ. ಆದರ, ಬಡಿಗೆ ತಗೊಂಡು ಬಡಿದಾನು; ಗುದ್ದಿಗ್ಗಾಲು ಸರಿಸ್ಯಾನು. ಅವೆಲ್ಲ ನಮಗ

ದರದ ಇಲ್ಲ; ಆ ಮಾಸ್ತರನ್ನ ಮಾತ್ರ ಫಜೀತಿ ಮಾಡಿಬಿಡಬೇಕು ನೋಡು.' ಎಂದು ಉಡಾಳ ಹುಡುಗರೆಲ್ಲ ಭರವಸೆಯಿತ್ತರು.

ಬಳಿಕ ತನ್ನ ಹಸ್ತಗತರೊಡನೆ ಒಡಕಣ್ಣಾನ ಆಪ್ತಾಲೋಚನೆಯು ನಡೆಯಿತು. ಮಾಸ್ತರು ಕೂಡುವ ಕುರ್ಚಿಯ ಮೇಲೆ ಏಳೆಂಟು ಡಬಗಳ್ಳಿಯ ಮುಳ್ಳನ್ನು ತಂದಿಡಬೇಕು; ಮಾಸ್ತರು ಗಕ್ಕನೆ ಕೂತಾಗ ಯಾರೂ ನಗಬಾರದು; ಅಂದರೆ ಮಾಸ್ತರು ನೆಟ್ಟಗ ಆಸ್ಪತ್ರಿಗೆ ಹೋಗುವರು; ಹುಡುಗರು ಮನೆಗೆ ಹೋಗುವರು; ಎಂದು ಮುಂತಾಗಿ ಅವರ ಗುಪ್ತಸಭೆಯಲ್ಲಿ ಗೊತ್ತಾಯಿತು. ಒಡಕಣ್ಣಾನ ಹಂಚಿಕೆಯಿಂದ ಉಡಾಳ ಹುಡುಗರೆಲ್ಲ ಉಬ್ಬಿದರು. ಅಂದಿನಿಂದ ಎಲ್ಲರೂ ತಪ್ಪದೆ ಸಾಲೆಗೆ ಬಂದು ಗೊಂದಲಹಾಕಹತ್ತಿದರು. ಅವರು ಎಂದೂ ಅಭ್ಯಾಸವನ್ನು ಮಾಡುತ್ತಿದ್ದಿಲ್ಲ. ಓದುತ್ತ ಕುಳಿತ ಹುಡುಗರಿಗೆ ಓದಗೊಡದೆ ಚೇಷ್ಟೆಮಾಡಿ ಅವರನ್ನು ಅಳಿಸುತ್ತಿದ್ದರು. ಒಡಕಣ್ಣಾನೇ ತಮ್ಮ ಇಯತ್ತೆಯ ಮುಖ್ಯಸ್ಥನಾದ್ದರಿಂದ ಅವರಿಗೆ ಯಾರ ಅಂಜಿಕೆಯೂ ಇದ್ದಿಲ್ಲ. ಒಂದು ವಾರದ ವರೆಗೆ ನಾಲ್ಕನೆ ಇಯತ್ತೆಯು ಉಡಾಳ ಹುಡುಗರ ಬಿಡಾರವಾಯಿತು. ಹೀಗಿರಲು ಮಾಸ್ತರು ಒಂದು ವಾರದ ರಜೆಯನ್ನು ಅನುಭವಿಸಿ ಸೋಮವಾರ ಬೆಳಿಗ್ಗೆ ಸಾಲೆಗೆ ಬಂದರು. ಅಂದು ನಾಲ್ಕನೆ ಇಯತ್ತೆಯಲ್ಲಿ ಎಲ್ಲ ವಿದ್ಯಾರ್ಥಿಗಳೂ ಸಾಲೆಗೆ ಬಂದಿದ್ದರು. ಆಗ ಮಾಸ್ತರು ಆಶ್ಚರ್ಯದಿಂದ 'ಒಡಕಣ್ಣಾ! ಈ ರನ್ನರೆಲ್ಲ ಎಂದಿನಿಂದ ಸಾಲಿಗೆ ಬರಲು ಸುರು ಮಾಡ್ಯಾರ?' ಎಂದರು. ತನ್ನ ಗುರುಗಳು ಬರುವವರೆಗೆ ಕ್ಲಾಸಿನ ಮಾಸ್ತರನಾಗಿದ್ದ ಒಡಕಣ್ಣಾನು, ಸುಳ್ಳುವಿನಯದಿಂದ ನಾಚಿ ತಲೆ ಬಾಗಿಸಿದನು. ಸಾಲೆ ತಪ್ಪಿಸುವ ಹುಡುಗರೂ ತಪ್ಪದೆ ಸಾಲೆಗೆ ಬರಹತ್ತಿದ್ದು ಅವನ ಶ್ರಮದಿಂದಲ್ಲವೇ?

ಪ್ರಾತಃಕಾಲದ ಪ್ರಾರ್ಥನೆಯನ್ನು ಮಾಡಿಸಿ ಮಾಸ್ತರು ರಭಸದಿಂದ ಬಂದು ಕುರ್ಚಿಯ ಮೇಲೆ ಕುಳಿತರು. ಕುಳಿತವರೆ ಕೆಟ್ಟ ಧ್ವನಿಯಿಂದ ಚೀರಹತ್ತಿದರು. ಚುಚ್ಚಿದ ಮುಳ್ಳುಗಳು ಒಳಗೆ ಮುರಿಯಬಹುದೆಂಬ ಅಂಜಿಕೆಯಿಂದ ಮಾಸ್ತರು ಏಳಲಾರದೆ ಅಲ್ಲಿಯೆ ಒದ್ದಾಡಹತ್ತಿದರು. ಕಡೆಗೆ ಅಸಿಸ್ಟಂಟ ಮಾಸ್ತರರು ಓಡಿಬಂದು, ಚಿಮ್ಮಟಿಗೆಯನ್ನು ತಂದು ಆ ಮುಳ್ಳುಗಳನ್ನು ಕಿತ್ತೊಗೆಯಲು, ರಕ್ತವು ಸೋರಹತ್ತಿ ಮಾಸ್ತರಿಗೆ ಬವಳಿಯು

ಬಂದಿತು. ಒಡಕಣ್ಣನು ಅಳುತ್ತ ಮಾಸ್ತರಿಗೆ ಗಾಳಿ ಹಾಕಹತ್ತಿದನು. ಮಾಸ್ತರು ಒಡಕಣ್ಣನನ್ನು ಅಪರಾಧಿಗಳ ಶೋಧಕ್ಕೆಂದೂ, ಪಂತರನ್ನು ಅವರನ್ನು ಶಿಕ್ಷಿಸಲೆಂದೂ ನಿಯಮಿಸಿ ತಮಗಾದ ನೋವಿನ ತಾಪವನ್ನು ತಾಳಲಾರದೆ ಮನೆಯ ಮಾರ್ಗ ಹಿಡಿದರು.

ಪಂತರು ಇಪ್ಪತ್ತೈದು ವರ್ಷಗಳ ವರೆಗೆ ಶಿಕ್ಷಕರಾಗಿದ್ದರೂ ಶಾಲೆಯಲ್ಲಿ ಇಂಥ ದುರ್ಘಟ ಪ್ರಸಂಗಗಳೊದಗಿದ್ದನ್ನು ಅವರು ಎಂಗೂ ನೋಡಿದ್ದಿಲ್ಲ. ಅವರು ಸ್ವಲ್ಪ ಹೊತ್ತು ವಿಚಾರ ಮಾಡಿ ನಾಲ್ಕನೆ ಇಯತ್ತೆಯ ಹುಡುಗರೇ ಈ ಕೆಲಸವನ್ನು ಮಾಡಿರಬೇಕೆಂದು ನಿರ್ಧರಿಸಿದರು; ಅವರಲ್ಲಿಯ ಮುಖ್ಯನಾದ ಒಡಕಣ್ಣನನ್ನು ಕೋಣೆಯೊಳಗೆ ಕರೆದು ತಪ್ಪು ಮಾಡಿದವರನ್ನು ಶೋಧಿಸದಿದ್ದರೆ ನಿಮ್ಮೆಲ್ಲರನ್ನು ಬಡಿಯುವೆವೆಂದು ಬೆದರಿಸಿದರು. ಆಗ ಒಡಕನು ಸಣ್ಣಮೋರೆ ಮಾಡಿ ಬಿಕ್ಕಿಬಿಕ್ಕಿ ಅಳಹತ್ತಿದನು. ಅದನ್ನು ನೋಡಿ ಪಂತರು ಅವನ ಬೆನ್ನಮೇಲೆ ಕೈಯಾಡಿಸಿ "ತಮ್ಮಾ ಬೆದರಬೇಡ, ನೀನು ಅಪರಾಧಿಯೆಂದು ನಾನು ಹೇಳುವದಿಲ್ಲ; ಆದರೂ ಮುಳ್ಳು ಚುಚ್ಚಿದವರನ್ನು ಗೊತ್ತುಹಚ್ಚಿಕೊಡುವ ಭಾರವು ನಿನ್ನ ಮೇಲೆಯೇ ಇರುವದು" ಎಂದರು. ಆಗ ಒಡಕನು ಅಪರಾಧಿಗಳನ್ನು ಗೊತ್ತುಹಚ್ಚುವೆನೆಂದು ಪಂತರಿಗೆ ಹೇಳಿ ಹೊರಗೆ ಬಂದನು. ನಾಲ್ಕನೆ ಇಯತ್ತೆಯ ನಿರಪರಾಧಿ ಹುಡುಗರನ್ನು ನೀವೇ ಅಪರಾಧಿಗಳೆಂದು ಬೆದರಿಸಿದನು. ಕಂಬಾರ ಕಲ್ಲನಿಗೆ ಗುಪ್ತವಾಗಿ ಮುದ್ದನ ಬಕ್ಕಣದಲ್ಲಿ ಮುಳ್ಳುಗಳನ್ನು ಇರಿಸೆಂದು ಹೇಳಿದನು. ಅವನು ಅದರಂತೆ ಮಾಡಲು, ಒಡಕಣ್ಣನು ಹುಡುಗರ ಬಕ್ಕಣಗಳನ್ನು ಕ್ರಮದಿಂದ ಶೋಧಿಸಿ, ಮುದ್ದನೇ ಅಪರಾಧಿಯೆಂದು ಪಂತರಿಗೆ ಹೇಳಿದನು. ಸೆಟ್ಟರ ಬಸೆಟ್ಟಿಯೂ, ಕಂಬಾರ ಕಲ್ಲನೂ, ಅವನ ಮೇಳವಾಗಿ ಅದಕ್ಕೆ ಬೆಂಬಲ ಪಿತ್ತರು. ಆಗ ಪಂತರು ಮುದ್ದನನ್ನು ಕರೆದು ಬೆದರಿಸಿ ಬಡಿಯಹತ್ತಿದರು; ಪೆದ್ದ ಮುದ್ದನು ಗಾಬರಿಯಾಗಿ ಅಳುತ್ತ ನಿಂತನಲ್ಲದೆ ಅವನ ಬಾಯಿಂದ ಶಬ್ದಗಳೇ ಹೊರಡಲಿಲ್ಲ. ಮುದ್ದನು ಅಳುವದನ್ನು ನೋಡಿ ಕಂಬಾರ ಕಲ್ಲನು ನಗಹತ್ತಿದನು. ಇದನ್ನು ಪಂತರು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿ ಕಲ್ಲನೇ ಅಪರಾಧಿಯೆಂದು ನಿರ್ಧರಿಸಿ, ಅವನನ್ನೂ ಚೆನ್ನಾಗಿ ಥಳಿಸಿದರು; ಕಲ್ಲನು ಪೆಟ್ಟು ತಾಳಲಾರದೆ ತನ್ನ ಅಪರಾಧವನ್ನು ಒಪ್ಪಿಕೊಂಡು ಬಂಧಮುಕ್ತ

ನಾದನು. ಆದರೂ ಅವನು ಒಡಕನ ಹೆಸರನ್ನೂ ತನ್ನ ತಂಡದವರ ಹೆಸರನ್ನೂ ಬೈಲಿಗೆಳೆಯಲಿಲ್ಲ.

ಹೆಡ್‌ಮಾಸ್ತರು ಆಸ್ಪತ್ರಿಗೆ ಹೋದರು; ಇತ್ತ ಪಂತರು ಅಪರಾಧಿಗಳನ್ನು ಗೊತ್ತುಹಚ್ಚಿ, ತಮ್ಮ ಜಾಣತನದಲ್ಲಿಯೂ, ಧೂರ್ತತೆಯಲ್ಲಿಯೂ ನಂಬಿ ಉಬ್ಬಿದ್ದರು. ಆದರೆ ಸಾಲೆಯಲ್ಲಿಯ ಉಡಾಳರ ತಂಡದವರು ಇವರಿಗಿಂತಲೂ ಜಾಣರಾಗಿದ್ದರು. ಈ ಸಂಗತಿ ಆಗಿ ಎರಡು ದಿನಗಳು ಕೂಡ ದಾಟಿರಲಿಲ್ಲ. ಪಂತರಿಗೆ ನಸುಗುನ್ನಿಯ ಸುಂಕದ ಪ್ರಸಾದವಾಯಿತು. ಆಗ ಮೈಮೇಲಿನ ಅರಿವೆಯ ಪರಿವೆಯಿಲ್ಲದೆ ಮೈ ಕೆರಕೊಂಡ ಪಂತರು ಈ ಉಡಾಳರ ಗೋಜಿಗೆ ಹೋಗುವದು ಸರಿಯಲ್ಲೆಂದು ನಿಶ್ಚಯಿಸಿದರು. ಹೆಡ್‌ಮಾಸ್ತರು ಗುಣಹೊಂದಿ ಬಂದ ಬಳಿಕ ಪಂತರು ತಮಗಾದ ಬವಣಿಯನ್ನು ತಿಳಿಸಿದರು. ಅವರು ಯುಕ್ತಿಯಿಂದ ಉಡಾಳ ಹುಡುಗರನ್ನು ಸಾಲೆಯಿಂದ ಹೊರಗೆ ಹಾಕಹತ್ತಿದರು. ದಿನದಿನಕ್ಕೆ ತನ್ನ ಗೆಳೆಯರ ಗುಂಪು ಕರಗುವದನ್ನು ಕಂಡು ಒಡಕನಿಗೆ ಬಲು ವ್ಯಸನವಾಯಿತು. ಒಡಕನ ಹೇಳಿಕೆಯ ಮೇರೆಗೆ ಹುಡುಗರ ಪಾಲಕರು ಪಂತರನ್ನೂ ಹೆಡ್‌ಮಾಸ್ತರರನ್ನೂ ವರ್ಗಮಾಡಬೇಕೆಂದು ಸಾಲೆಯ ಅಧಿಕಾರಿಗಳಿಗೆ ಮೂಕರ್ಜಿಯನ್ನು ಕಳಿಸಿದರು. ಆಗ ಸಾಲೆಯ ಪರೀಕ್ಷೆಯೂ ಸಮೀಪಿಸಿತ್ತು. ಒಡಕನು ಮಾಸ್ತರು ತನ್ನ ಗೆಳೆಯರಿಗೆ ಮಾಡಿದ ಅಪಕಾರದ ಸೇಡನ್ನು ಒಮ್ಮೆಲೇ ತೀರಿಸಿಕೊಳ್ಳುವದೆಂದು ವಿಚಾರ ಮಾಡಿದನು. ಸಾಹೇಬರು ನಾಲ್ಕನೆ ಇಯತ್ತೆಯ ಪರೀಕ್ಷೆ ತೆಗೆದುಕೊಳ್ಳುವಾಗ, ಒಡಕನೂ ಅವನ ಗೆಳೆಯರೂ ಮಾಸ್ತರರು ತಮಗೆ ಇತಿಹಾಸ ಕಲಿಸಿಲ್ಲವೆಂದು ಹೇಳಿದರು. ಪರೀಕ್ಷಕರು ಮಾಸ್ತರ ಮೇಲೆ ರೇಗಿದರು; ಹೀಗಾಗಿ ಪರೀಕ್ಷೆಯ ಪರಿಣಾಮವು ನೆಟ್ಟಗಾಗಲಿಲ್ಲ. ಮರುದಿನ ಸಾಹೇಬರು ಐದನೆಯ ಇಯತ್ತೆಯ ಪರೀಕ್ಷೆ ತಕ್ಕೊಳ್ಳುವಾಗ, ಕುರ್ಚಿಯ ಕಾಲುಗಳನ್ನು ಕರಗಸದಿಂದ ಕೊರೆದಿಟ್ಟಿದ್ದರೆಂದು ಕಂಡುಬಂತು. ಮಾಸ್ತರರೇ ತಮಗೆ ಅಪಮಾನ ಮಾಡಬೇಕೆಂದು ಈ ಕೃತ್ಯ ಮಾಡಿಸಿರುವರೆಂದು ಸಾಹೇಬರು ನಂಬಿದರು. ಮಾಸ್ತರರನ್ನು ಕೆಲಸದಿಂದ ತೆಗೆದುಹಾಕುವೆವೆಂದು ಬೆದರಿಸಿದರು. ಮಾಸ್ತರರಿಗೆ ಇದೆಲ್ಲ ಒಡಕನ ಕಾರಸ್ಥಾನದ ಪರಿಣಾಮವೆಂದು ಹೊಳೆಯದೆ ಇರಲಿಲ್ಲ. ಆದರೆ ಮಾತು

ಕೈಮೀರಿ ಹೋಗಿತ್ತು. ದೇಸಾಯಿ ಶ್ರೀಪತಿರಾಯರು ಅಲ್ಲಿಯೇ ಇದ್ದುದರಿಂದ, ಉಡಾಳ ಹುಡುಗರಿಂದ ಸಾಲೆಯಲ್ಲಿ ಘಟಿಸಿದ ಅನರ್ಥಗಳನ್ನೂ, ಅದರಿಂದ ಮಾಸ್ತರಿಗಾದ ಬವಣೆಯನ್ನೂ, ವರ್ಣಿಸಿ ಸಾಹೇಬರನ್ನು ಸ್ವಲ್ಪ ಮಟ್ಟಿಗೆ ಶಾಂತಗೊಳಿಸಿದರು. ಆದರೂ ಸಾಹೇಬರು ಮೂಕರ್ಜಿಯ ನೆವ ಮಾಡಿ ಹೆಡ್‌ಮಾಸ್ತರಿಗೆ ವರ್ಗವನ್ನೂ ಪಂತರಿಗೆ ಒಂದು ರೂಪಾಯಿಯ "ಹಿಂಬಡತಿ"ಯನ್ನೂ ಮಾಡಿದರು. ಅಂತೂ ಸಾಲೆಯಲ್ಲಿರುವಾಗಲೇ ಒಡಕನು ತನ್ನ ಪ್ರಭಾವವನ್ನು ತೋರಿಬಿಟ್ಟನು. ಊರಲ್ಲೆಲ್ಲ ಇದೇ ಸುದ್ದಿ. ಆದರೂ ದೇಸಾಯರೆದುರು ನಿಚ್ಚಳವಾಗಿ ನುಡಿಯುವರಾರು?

---

## ೬

### ಮಕ್ಕಳ ಮೋಹ........

ಒಂದು ದಿನ ಬೆಳಗಿನಲ್ಲಿ ಬೊಮ್ಮಗೇರಿಯ ಮಧ್ಯದಲ್ಲಿರುವ ಹನುಮಸಾಗರ ಪುಷ್ಕರಿಣಿಯ ತೀರದಲ್ಲಿ ಮಹಾವೃಕ್ಷವೆಂದು ಹೆಸರುವೆತ್ತ ಅಶ್ವತ್ಥ ವೃಕ್ಷದ ಬುಡದಲ್ಲಿ ಓರ್ವ ತರುಣಿಯು ಪೂಜಾಸಾಮಗ್ರಿಯ ತಟ್ಟೆಯನ್ನು ಮುಂದೆ ಇಟ್ಟುಕೊಂಡು ಅಶ್ವತ್ಥಪೂಜೆಯನ್ನು ಮಾಡುತ್ತಲಿದ್ದಳು. ಆ ತರುಣಿಯು ತೆನೆ ತಿರುವಿದ ಟೋಪು ಸೆರಗಿನ ಕರಿಯ ಸೀರೆಯನ್ನುಟ್ಟು, ಜರದ ಕುಪ್ಪುಸವನ್ನು ತೊಟ್ಟಿದ್ದಳು. ಅವಳು ಗೌರಕಾಯದವಳಿದ್ದುದರಿಂದ ಆ ಕಪ್ಪು ಸೀರೆಯು ಅವಳ ಅಂಗಕ್ಕೆ ಬಲು ಒಪ್ಪುತ್ತಿತ್ತು. ಅವಳು ಮೊಂಡ ಮೂಗಿನವಳೂ, ಆನೆಯ ಕಿವಿಯವಳೂ, ಕಾಸಿನ ಕಣ್ಣಿನವಳೂ, ಒಂಟೆಯ ಕಂಠದವಳೂ, ಸೊಂಟದವಳೂ, ಆನೆಯ ಹಲ್ಲು ಹಾದವಳೂ ಇದ್ದರೂ ಅವಳ ಗೌರವರ್ಣದಲ್ಲಿ ಆ ಡೊಂಕುಗಳೆಲ್ಲ ಅಡಗಿ ಹೋಗಿದ್ದವು. ಅವಳ ಕೂದಲುಗಳಲ್ಲಿ ಕುಟಿಲತೆಯೂ, ಕಟಾಕ್ಷದಲ್ಲಿ ಕಾಪಟ್ಯವೂ, ಹೆರಳಿನಲ್ಲಿ ಬಿಗುವೂ ಒಡಮೂಡಿದ್ದವು. ಅವಳ ಮುಖದಲ್ಲಿ ಚಿಂತಾಕ್ರಾಂತಳಾಗಿರುವಳೆಂಬ ಚಿನ್ಹಗಳು ಸ್ಪಷ್ಟವಾಗಿ ತೋರುತ್ತಿದ್ದವು. ಅಂದು ಸೋಮವಾರವಿದ್ದು ಅಮಾವಾಸ್ಯೆಯು

ಬಂದದ್ದರಿಂದ ಸೋಮವತೀ ಪೂಜೆಗೆ ಇಲ್ಲಿ ಬಹುಜನ ಸ್ತ್ರೀಯರು ಬರಬಹುದೆಂದು ಆ ತರುಣಿಯು ಲಗುಬಗೆಯಿಂದ ಅಶ್ವತ್ಥಪೂಜೆಯನ್ನು ಮುಗಿಸಿ, ಪ್ರದಕ್ಷಿಣೆಯನ್ನು ಹಾಕತೊಡಗಿದಳು. ಒಂದುನೂರಾ ಎಂಟು ಪ್ರದಕ್ಷಿಣೆಗಳನ್ನು ಮುಗಿಸಿ ಅಶ್ವತ್ಥನಾರಾಯಣನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಹೊಕ್ಕಳ ಮೇಲೆ ಬೆರಳನ್ನಿಟ್ಟುಕೊಂಡು ಉಶ್ಶೆಂದು ಆ ತರುಣಿಯು ಮೈಮುರಿತು ಕುಳಿತಳು. ಅಷ್ಟರಲ್ಲಿ ಎಡಗೈಯ್ಯಲ್ಲಿ ಪೂಜಾಸಾಮಗ್ರಿಗಳ ತಟ್ಟೆಯನ್ನೂ ಬಲಗೈಯಲ್ಲಿ ತಂಬಿಗೆ-ಘಾಲಿಗಳನ್ನೂ ಹಿಡಿದುಕೊಂಡು ಒಂದು ನೂರಾಎಂಟು ಮಾವಿನ ಹಣ್ಣುಗಳನ್ನೂ ತೆಂಗಿನಕಾಯಿಗಳನ್ನೂ ಹಿಡಿದುಕೊಂಡು ಬರುವ ಮೊಮ್ಮಕ್ಕಳನ್ನು ಮುಂದೆ ಮಾಡಿಕೊಂಡು ದೇಶಪಾಂಡೆ ಪಾರ್ವತಿಬಾಯಿಯವರು ಆ ಅಶ್ವತ್ಥವೃಕ್ಷದ ಕಟ್ಟೆಗೆ ಬಂದರು. ಆಗ ಮೈಮುರಿತು ಕುಳಿತ ತರುಣಿಯು ಮೆಟ್ಟಿಬಿದ್ದು ಪೂಜಾಸಾಮಗ್ರಿಯ ತಟ್ಟೆಯನ್ನು ತಕ್ಕೊಂಡು ಮನೆಗೆ ಹೋಗುವ ಹವಣಿಕೆಯಲ್ಲಿದ್ದಳು. ಆಗ ಪಾರ್ವತಿಬಾಯಿಯವರು "ಯಾಕ ಚಂದ್ರಾವತಿಬಾಯ್ರು! ನಾ ಬಂದ ಕೂಡಲೆ ಎದ್ರೆಲ್ಲಾ? ಎಷ್ಟು ಲಗೂ ಬಂದೀರಿ! ನೀವೂ ಸೋಮೋತಿವ್ರತಾ ಹಿಡಿದಿರೇನು? ಸ್ವಲ್ಪ ಕೂಡ್ರೆಲ್ಲಾ....ಇನ್ನೂ ಸೂರ್ಯೋದಯಾನಽ ಆಗಿಲ್ಲ!" ಎನ್ನುತ್ತ ಬಣ್ಣಬಣ್ಣಗಳಿಂದ ತುಂಬುತ್ತಿದ್ದ ಮೂಡಣ ದಿಕ್ಕನ್ನು ನಿರೀಕ್ಷಿಸುತ್ತಿದ್ದ ಅವರು, ಚಂದ್ರಾವತಿಬಾಯಿಯವರ ಕಡೆಗೆ ನೋಡಿದರು. "ನಾಯೇನ ವ್ರತ ಹಿಡದಿಲ್ಲಾ. ಎನೋ ಲಗೂ ಎಚ್ಚರಾತು. ಅನಾಯಾಸಾ ಸೋಮವಾರ ಅಮಾಸ್ಯದ, ಅಶ್ವತ್ಥನಾರಾಯಣನ ಪೂಜಿ ಮಾಡಿಕೊಂಡು ಬರೋಣ ಅಂತ ಮೈ ತೊಳಕೊಂಡು ಬಂದಿದ್ದೆ" ಎಂದು ನಿರಾಶಾಯುಕ್ತ ಧ್ವನಿಯಲ್ಲಿ ಚಂದ್ರಾವತಿಬಾಯರು ಉತ್ತರವನ್ನಿತ್ತರು. "ಅಷ್ಟ್ಯಾಕ ಹಾರಿಸಿ ಮಾತಾಡತೀರೆ? ಮುದಿಕ್ಯಾಗೇನ್ಸಿ, ನಿಮ್ಮ ಗುಟ್ಟೆಲ್ಲಾ ಬಲ್ಲೆ. ಅಶ್ವತ್ಥನಾರಾಯಣನ ಸೇವಾ ಮಾಡಿದರೇನು ಕಾಡಲ್ಲ. ಏನಾರ ಕಂಟಕ ಇರತಾವಽ, ಅವೆಲ್ಲಾ ಸೇವಾದಿಂದ ಪರಿಹಾರ ಆಗತಾವ" ಎಂದು ನಗುತ್ತ ಪಾರ್ವತಿಬಾಯರು ನುಡಿದರು. "ನಾ ಏನ ಮಕ್ಕಳನ್ನ ಕಾಣತೇನ್ರೆವಾ! ನನ್ನ ಪುಣ್ಯಾ ಕಂಡದ್ದಽ ಆದ. ನಿಮ್ಮಂಥ ಹಿರೇಮುತ್ತೈದೆಯರ ಆಶೀರ್ವಾದದಿಂದ ಮಕ್ಕಳಾದ್ರು ಆಗಬೇಕು" ಎನ್ನುತ್ತ ಚಂದ್ರಾವತಿಬಾಯರು

ಸಿಟ್ಟುಸಿರುಬಿಟ್ಟರು. ಹೆಣ್ಣುಗರುಳು ಕೋಮಲವಾದುದು. ಹೆಂಗಳೆಯರಿಗೆ ಇನ್ನೊಬ್ಬರ ದುಃಖ ಸಹಸವಾಗದು. ದುಃಖಿಸುವವರ ಸಂಗಡವೂ ಅತ್ತುಬಿಡುವರು; ಕಷ್ಟಪಡುವವರಿಗೆ ಪೂರ್ಣ ಸಮಾಧಾನವಾಗುವ ವರೆಗೆ ಅವರು ಸುಮ್ಮನಿರರು. ಅವರ ಮಾತು ಶುಷ್ಕ ಹರಟೆಗುಚಿತವಾದ ಜೊಳ್ಳು ಮಾತಲ್ಲ; ಅವು ಒರೆ ಕೊಟ್ಟ ಆತ್ಮಕ್ಕೆ ಶಾಂತಿಯನ್ನುಂಟುಮಾಡುವವು. ಇದೇ ರೀತಿಯಲ್ಲಿ ಪಾರ್ವತಿಬಾಯಿಯರು ಪುನಃ ಮಾತಿಗೆ ಮೊದಲು ಮಾಡಿದರು. "ನಿಮ್ಮ ಯಜಮಾನರೂ ಭಾಳ ಧಾರ್ಮಿಕರು; ಅವರೂ ಮಕ್ಕಳ ದಶಿಂದಾ ಅನುಷ್ಠಾನ-ಗಿನುಷ್ಠಾನ ಮಾಡಿಸಿದ್ದಾರಾದೀತಲ್ಲ?" ಮತ್ತೆ ಚಂದ್ರಾವತಿ ಬಾಯಿಯರು ಅದೇ ರಾಗವಾಗಿ ಉತ್ತರವನ್ನಿತ್ತರು: "ಒಂದ ಅನುಷ್ಠಾನ್ನs; ಒಂದ ಪುರಾಣsss. ಏsಲ್ಲಾ ಆಗ್ಯಾವ್ರ. ಗಂಗೀ ಭಾವಿಯೊಳಗ ನಾಗಬಲೀ ನಾರಾಯಣಬಲೀ ಮಾಡಿಸಿದ್ರು. ಮೊನ್ನಿನ ಚಾತುರ್ಮಾಸೀ ಒಳಗ ಹರಿವಂಶಪುರಾಣ ಹೇಳಿಸಿದ್ರು. ವರ್ಷಾ ಗುರುಚರಿತ್ರ ಸಪ್ತಾ ಮಾಡಸ್ತಾರ. ದೇವ್ರು ಅಂತಾರ; ಧರ್ಮಾ ಅಂತಾರ; ದಾನಾ ಅಂತಾರ; ಆದ್ರೇನ್ರವಾ ನಮ್ಮ ಹಣೇಬರಹ ಆದ ಅಲ್ಲ. ಪೂರ್ವಜನ್ಮದಾಗ ನಾವು ಮಕ್ಕಳಮರೀಗೆ ಮಾಡಿ ಬಂದಿಲ್ಲ. ಯಾರ ಮಕ್ಕಳ ಗೋಣು ಮುರಿದೇವೋ ಏನೋ? ಈಗ ಹ್ಯಾಂಗ ಮಕ್ಕಳನ ಕಂಡೇವ್ರ?" ಎಂದು ಕಣ್ಣೀರು ಸುರಿಸಿ ಬಿಕ್ಕಿ ಬಿಕ್ಕಿ ಅಳಹತ್ತಿದರು. "ಯಾಕ ಅಳತೀದಿ ಬಿಡs ತಂಗೀ. ಮುಂಜಾನೆದ್ದು ಮುತ್ತೈದೇರು ಕಣ್ಣೀರು ಸುರಿಸಬಾರದವಾ" ಎನ್ನುತ್ತ ಅವಳ ಸನಿಯಕ್ಕೆ ಬಂದು ಕುಳಿತು ಪಾರ್ವತಿಬಾಯಿಯರು ಕೇಳಿದರು: "ಇದಕ್ಕೂ ಮುಂಚೆ ಮತ್ತೇನಾರ ವ್ರತಾ ಮಾಡಿದೇನು?" "ಎಲ್ಲಾನೂ ಮಾಡಿದ್ದಾಯಿತು. ಚಾತುರ್ಮಾಸೀ ಒಳಗ ಮಕ್ಕಳಿಗೆಲ್ಲಾ ಹಾಲ ಕುಡಿಸಿದೆ; ಅಂಗೀ ಟೊಪ್ಪಿಗಿ ಹೊಲಿಸಿ ಕೊಟ್ಟೆ; ಶುಕ್ರವಾರಕ್ಕೊಮ್ಮೆ ಮಕ್ಕಳಿದ್ದ ಮುತ್ತೈದೆಯರಿಗೆ ಊಟ ಮಾಡಸ್ತೇನಿ; ಬನ್ನೀಗಿಡದವ್ವಗ ನಡಕೊಂಡೆ; ಭರಮದೇವರಿಗೆ ನಡಕೊಂಡೆ; ದ್ಯಾಮವ್ವಗ ನಡಕೊಂಡೆ; ಚಕ್ಕಣೀ ಮಾಡಿದೆ; ಯಂತ್ರಾತು; ಮಂತ್ರಾತು. ಅಶ್ವತ್ಥನಾರಾಯಣನ ಸೇವಾ ಒಂದು ಉಳಿದಿತ್ತು. ಆದನ್ನೂ ಮಾಡಿಬಿಡೋಣ ಅಂತ ಸುರುವು ಮಾಡೇನಿ" ಎಂದರು ಚಂದ್ರಾವತಿ ಬಾಯಿಯರು. ಪಾರ್ವತಿಬಾಯಿಯರು "ಇದರ ಫಲ ಸಿಗಲಿಕ್ಕೇ ಬೇಕು ನಿಮಗ.

ಆಸ್ರು ಇಷ್ಟಮಾತ್ರ ಎಂದಿಗೂ ಮಾಡಬೇಡ್ರಿ, ಎಷ್ಟೋಮಂದಿ ಮಕ್ಕಳಿಲ್ಲದ ಹುಚ್ಚ ಸೆಟಿಸೇರು, ಸಣ್ಣ ಮಕ್ಕಳ ಬೆನ್ನ ಹುರಿಮ್ಯಾಲ ಕೇರಬಟ್ಟು ಇಡೋದು, ಕಪ್ಪು ಹಾಕುವದು ಮಾಡತಾರ. ಮಕ್ಕಳಿಲ್ಲದ ಮಂಗಗಳು ಸಣ್ಣಮಕ್ಕಳನ್ನ ಕಂಡ್ರ ಕಣ್ಣಾಗಕಣ್ಣಿಟ್ಟು ಹೀರಿಬಿಡತಾವ. ಅವರ ದೃಷ್ಟಿ ಆಗಿ ಹುಡುಗರು ಒದ್ದಾಡತಾವ. ಸೇರ ಮೆಣಸಿನಕಾಯಿ ಕೆಂಡದಾಗ ಹಾಕಿ ದೃಷ್ಟಿ ತಗದರೂ ಖಾಟ ಆಗೋದಿಲ್ಲ. ಏನ ಹೇಳ್ರಿವಾಽಽ ? ಮಕ್ಕಳದಸಿಂದಾ ಚೇಳಿನ ಸಣ್ಣಮರಿ ಬೆಲ್ಲದಾಗ ಇಟ್ಟು ಮುದ್ದಿಮಾಡಿ ಗಪ್ಪಸ ನುಂಗತಾರಂತ್ರೆ! ಆದ್ಹ್ಯಾಂಗ ನುಂಗತಾರೋ ಏನೋ? ' ಎಂದು ಪಾರ್ವತಿಬಾಯಿಯು ಇನ್ನೂ ಮುಂದೆ ಮಾತಾಡುವವರೆ; ಆದರೆ ಚಂದ್ರಾವತಿಬಾಯಿಯರ ಮೋರೆ ಸಪ್ಪಗಾದದ್ದು ಕಂಡು ಅವರ ಹುರುಪಿಗೆ ತಡೆಯುಂಟಾಯಿತು. ಇನ್ನು ಅಷ್ಟಕ್ಕೇ ಬಿಡುವದು ಒಳಿತಲ್ಲವೆಂದು ತಮ್ಮ ಕೊನೆಯ ಉಪದೇಶದ ಮಾತು ಹೇಳತೊಡಗಿದರು. ' ಔಷಧಾ ಅಂತ, ಪಥ್ಯಾ ಅಂತ, ಏನೇನೋ ಮಾಡತಾರಂತ. ಹಾಂಗ ಮಾತ್ರ ಮಾಡಬಾರದು ನೋಡ್ರಿ. ಅಂಥವರು ಎಂದಿಗೂ ಮಕ್ಕಳುಮರಿ ಕಾಣೋದಿಲ್ಲ..... ಅಲ್ರೀ ಮತ್ತ, ನೀವು ಮುಟ್ಟಾಗಿ ಎಷ್ಟು ದಿವಸ ಆತು ? "

" ಮೊನ್ನಿನ ದ್ವಾದಶೀಗೆ ತಿಂಗಳಾಗಿ ಹೋತು. ನಾನು ಕೂತ ತಿಂಗಳಿಗೇ ಮುಟ್ಟಾಗತಿದ್ದೆ. ಯಾಕೋ ಮೂರು ದಿವಸ ಮುಂದ ಹೋಗೇದ."

" ಆದಕಂತಽ ಕೇಳಿದೆನೇ ನಮ್ಮವ್ವಾ! ಎಲ್ಲೀ ನೋಡೋಣು.... ಗಂಡಸ ಮಗನ್ನಽ ಹಡೀತೀದಿ; ಹೆಸರು ನಾನಽ ಇಡೋಕಿ ನೋಡು ಮತ್ತಽ. ನನ್ನ ಮರ್ತಗಿರ್ತಿ!"

" ಆಷ್ಟಾದರ ಸಾಕ್ರಿವಾ. ನಿಮಗ ಸೀರಿ ಉಡಸ್ತೇನಿ."

" ನಿಮ್ಮ ಮದ್ದೂರ ದುರಗವ್ವ ಭಾಳ ಸತ್ಯುಳ್ಳಾಕೆಂತ. ಪೂಜಾರ ಮೈಮ್ಯಾಲ ಬಂದು ಹೇಳತಾಳಂತ. ನೀ ಏನಾರ ಹೋಗಿದ್ದೇನು ? "

" ಇನ್ನೂ ಏನು ಹೋಗಿಲ್ರಿವಾ. ಮನಿಯೊಳಗಿನ ಕೆಲಸಾನ ನನಗ ಮಸ್ತ ಆಗತಽದ. ಹ್ಯಾಂಗಾರ ಮಾಡಿ ನಾಳಿನ ಮಂಗಳವಾರ ನಮ್ಮ ಒಡಕಣ್ಣನ್ನ ಕರಕೊಂಡು ಹೋಗಿ ಬರತೇನಿ ' ಎನ್ನುತ್ತ ಚಂದ್ರಾವತಿಬಾಯಿಯವರು ತಮ್ಮ ಮನೆಗೆ ಹೊರಟರು. ಅಂದು ತಾವು ಗರ್ಭಿಣಿ

ಯಾಗಿರಬಹುದೆಂಬ ಆನಂದವು ಚಂದ್ರಾವತಿಬಾಯಿಯವರನ್ನು ಸಾಯಂಕಾಲದ ವರೆಗೆ ಆವರಿಸಿಕೊಂಡಿತ್ತು. ಆದರೆ ಮೂರೂಸಂಜೆಗೇ ಅವರು ಮುಟ್ಟಾದ್ದರಿಂದ ಭಗ್ನಮನೋರಥರಾಗಿ ಮೂಲೆಯಲ್ಲಿ ಕುಳಿತುಕೊಂಡರು. ಅಶ್ವತ್ಥನಾರಾಯಣನ ಸೇವೆಯಿಂದ ಏನೂ ಪ್ರಯೋಜನವಾಗದೆಂದು ಮನಸ್ಸಿನಲ್ಲಿ ಕಾಯಾಸ ಮಾಡಿದರು. ಅಡಿಗೆಯದೇನು ಚಿಂತೆ ಇರಲಿಲ್ಲ. ನಾಲ್ಕು ದಿವಸ ಒಡಕಣ್ಣನು ಅಡಿಗೆ ಮೊದಲಾದ ಎಲ್ಲ ಮನೆಗೆಲಸವನ್ನು ದಕ್ಷತೆಯಿಂದ ಮಾಡಿದನು.

ಒಡಕಣ್ಣನ ಪ್ರತಾಪದಿಂದ ಶಾಲೆಯ ಮಾಸ್ತರು ವರ್ಗವಾಗಿ ಹೋಗಿದ್ದರು. ಅವರ ಜಾಗೆಗೆ ಬಂದವರು ಬೇಗ ಬುದ್ಧಿ ಕಲಿತು, ಒಡಕಣ್ಣನಂಥ ಎಲ್ಲ ಹುಡುಗರನ್ನು ಮನೆಗೆ ಕಳಿಸಿ, ಆರನೆ ಇಯತ್ತೆಯನ್ನು ತೆಗೆದುಹಾಕಿದರು. ಅದಕ್ಕಾಗಿ ಒಡಕಣ್ಣನು ಸಾಲೆ ಬಿಟ್ಟು ಮನೆಯೊಳಗೇ ಕೂಡಬೇಕಾಯಿತು. ದೇಸಾಯರು ಅವನನ್ನು ಊರಿಗೆ ಕಳುಹಿಸುವವರೇ. ಆದರೆ ಚಂದ್ರಾವತಿಬಾಯರ ವಶೀಲಿಯಿಂದ ಅವನ ವಾಸ ತೊಂದರೆಯದಾಗಲಿಲ್ಲ. ದೇಸಾಯರಲ್ಲಿ ಬರುಹೋಗುವ ಜನ ಬಹಳ. ದಿನದ ಕೆಲಸವೆಂದರೆ ಬಾಯಿಯವರಿಗೆ ಜಡವಾಗುತ್ತಿತ್ತು. ಅಲ್ಲದೆ ಅವರಿಗೆ ತಿಂಗಳಿಗೆ ನಾಲ್ಕು ದಿನಗಳ ಬಿಡುವಾದಾಗ ಕೆಲಸ ಮಾಡುವವರಾರು? ಒಡಕನು ಮನೆಗೆಲಸವನ್ನು ಮಾಡುವದರಲ್ಲಿ ತತ್ಪರನಾಗಿರುತ್ತಿದ್ದನು. ಅದರಲ್ಲೂ ಚಂದ್ರಾವತಿಬಾಯಿಯವರ ಉಪಚಾರವನ್ನಂತೂ ಅವನು ಕೈಕಟ್ಟಿಕೊಂಡು ಮಾಡುತ್ತಿದ್ದನು. ಬಂದ ಮೇಲೆ ಕೇಳುವದೇನು? ಒಡಕನ ತಂದೆಯವರಾದರೊ ಅವನನ್ನು ವಿದ್ಯೆ ಕಲಿಯದೆ ಮಂದಿಯ ಮನೆಯಲ್ಲಿ ಕೈಗೆಲಸ ಮಾಡುತ್ತ ಇರುವದನ್ನು ಬಯಸುವವರಲ್ಲ. ಆದರೇನು? ಅವರಿಗೆ ಇವನಿಗಿಂತ ಒಬ್ಬ ಹಿರಿಯನು, ಮತ್ತೊಬ್ಬ ಚಿಕ್ಕವನು, ಹೀಗೆ ಮಕ್ಕಳಿದ್ದರು. ಆದ್ದರಿಂದ ಈ ಮಧ್ಯಮನ ಮೇಲೆ ಅವರ ಪ್ರೇಮ ಕಡಿಮೆ. ಹೀಗಾಗಿ ಒಡಕಣ್ಣನು ದೇಸಾಯರಿಗೆ ಅಂಟಿಕೊಂಡಿದ್ದನು.

ಐದನೆ ದಿವಸ ಮಂಗಲಸ್ನಾನ ಮಾಡಿದ ಮೇಲೆ ಚಂದ್ರಾವತಿಬಾಯಿಯವರು ಖಿನ್ನಮನಸ್ಕರಾಗಿ ಅಶ್ವತ್ಥನಾರಾಯಣನ ಸೇವೆಗೆ ಹೋಗಲಿಲ್ಲ. ಮೂರನೆ ದಿವಸಕ್ಕೇ ಅವರ ಅಶ್ವತ್ಥನ ಸೇವೆಯು ಮುಕ್ತಾಯವಾಯಿತು.

ಶನಿವಾರ ದಿವಸ ಚಂದ್ರಾವತಿಬಾಯಿಯವರು ಒಡಕಣ್ಣನನ್ನು ಗುಪ್ತ ವಾಗಿ ಕರೆದು ತಮ್ಮ ಇಂಗಿತವನ್ನು ಹೇಳಿದರು: 'ತಮ್ಮಾ, ನಾನು ನಾಳಿನ ಮಂಗಳವಾರ ಮುದ್ದೂರ ದುರಗವ್ವನ ಹೇಳಿಕೆಯನ್ನು ಕೇಳಿ ಬರಬೇಕೆಂದು ಮಾಡಿರುವೆನು. ನೀನೇ ಏನಾದರೂ ಯುಕ್ತೀ ಮಾಡಿ, ನನ್ನನ್ನು ಮುದ್ದೂರಿಗೆ ಕರಕೊಂಡು ಹೋಗಬೇಕು.' ಕೂಡಲೆ ಒಡಕಣ್ಣನು ಶ್ರೀಪತಿರಾಯರ ಬಳಿಗೆ ಬಂದು, 'ನನ್ನ ತಂದೆಯವರು ನನಗೆ ಊರಿಗೆ ಬರಬೇಕೆಂದು ಹೇಳಿ ಕಳಿಸಿರುವದರಿಂದ ನಾನು ಮುದ್ದೂರಿಗೆ ಹೋಗಿಬರುವೆನೆ'ಂದು ತಿಳಿಸಿ ಮುದ್ದೂರಿಗೆ ಹೊರಟುಹೋದನು. ಅಲ್ಲಿ ತಮ್ಮ ತಂದೆಯವರಿಗೆ ಚಂದ್ರಾವತಿ ಬಾಯಿಯವರು ಮನೆಗೆಲಸ ಮಾಡಿ ಬಹಳ ಬೇಸತ್ತಿರುವರೆಂದೂ, ಅವರು ಈ ಊರಿಗೆ ಬಂದು ಒಂದೆರಡು ದಿವಸವಿದ್ದು ವಿಶ್ರಾಂತಿ ಪಡೆಯಬೇಕೆಂದು ಇಚ್ಛಿಸುತ್ತಿರುವರೆಂದೂ ತಿಳಿಸಿದನು. ಆಗ ಗೋಪಾಳರಾಯರು "ನಾಳಿನ ಸೋಮವಾರ ಚಕ್ಕಡಿಯನ್ನು ಕಳಿಸುವೆನು. ನೀನೇ ಹೋಗಿ ಚಂದ್ರಾವತಿ ಬಾಯಿಯವರನ್ನು ಕರೆದುಕೊಂಡು ಬಾ' ಎಂದು ತಿಳಿಸಿದರು. ಸೋಮವಾರ ಬೆಳಿಗ್ಗೆ ಎದ್ದು ಚಕ್ಕಡಿಯನ್ನು ಹೂಡಿಸಿಕೊಂಡು ಒಡಕಣ್ಣನು ಬೊಮ್ಮಗೇರಿಗೆ ಹೊರಟು ನಾಲ್ಕು ತಾಸು ಏರುವದರೊಳಗಾಗಿ ಶ್ರೀಪತಿರಾಯರ ಮನೆಗೆ ಬಂದನು. ಅವನು ಬರುವ ಮುಂದೆ ಒಂದು ಪತ್ರವನ್ನು ತಂದಿದ್ದನು. ಅದನ್ನು ಶ್ರೀಪತಿರಾಯರ ಕೈಯಲ್ಲಿ ಕೊಟ್ಟು ಮನೆಯಲ್ಲಿ 'ಹುಟ್ಟಿಗೆ' ಮಾಡುವದರಿಂದ ತಮ್ಮೆಲ್ಲರನ್ನು ಕರೆದುಕೊಂಡು ಬರಬೇಕೆಂದು ಹಿರಿಯರು ಕಳಿಸಿಕೊಟ್ಟಿರುವರೆಂದು ಹೇಳಿದನು. ಆಗ ಶ್ರೀಪತಿರಾಯರು 'ಮನೆಯನ್ನು ಬಿಟ್ಟು ಇಬ್ಬರೂ ಹೋದರೆ ಹೇಗೆ? ಆಕೆಯು ಬರುತ್ತಿದ್ದರೆ ಕರೆದುಕೊಂಡು ಹೋಗು' ಎಂದು ಒಡಕಣ್ಣನಿಗೆ ಹೇಳಿದರು. ಒಡಕಣ್ಣನು ತನ್ನ ಯುಕ್ತಿಯು ಸಫಲವಾಯಿತೆಂದು ಹಿಗ್ಗಿ ಅಡಗಿಯ ಮನೆಗೆ ಬಂದು ಚಂದ್ರಾವತಿಬಾಯಿಯವರಿಗೆ ತಾನು ಮಾಡಿದ ಯುಕ್ತಿಗಳನ್ನೆಲ್ಲ ತಿಳಿಸಿದನು. ಆಗ ಚಂದ್ರಾವತಿ ಬಾಯಿಯವರು ಹಿಗ್ಗಿ ಲಗುಬಗೆಯಿಂದ ಅಡಿಗೆ ಮಾಡಿ, ಊಟವಾದ ನಂತರ ಪತಿಯ ಆಜ್ಞೆಯನ್ನು ಪಡೆದು, ಒಡಕಣ್ಣನೊಡನೆ ಸೋಮವಾರ ಸಾಯಂಕಾಲಕ್ಕೆ ಮುದ್ದೂರಿಗೆ ಬಂದು ಮುಟ್ಟಿದರು.

## ೭

### ಮಕ್ಕಳ ಮೋಹ ಮತಿಗೆಡಿಸಿತು....

ಹಳ್ಳಿಯಲ್ಲಿ ನಿರುದ್ಯೋಗಿಗಳಾದ ಎಳೆಂಟು ಉಡಾಳ ಹುಡುಗರು ಒಕ್ಕಟ್ಟಾಗಿ ದೇವರ ಹೇಳಿಕೆಯ ಯುಕ್ತಿಯಿಂದ ಮರುಳು ಜನರ ದುಡ್ಡನ್ನು ಹರಣಮಾಡಿ ಹೊಟ್ಟೆತುಂಬಿಕೊಳ್ಳುವರು. ಮೊದಲಿಗೆ ಅವರು ತಮ್ಮ ಹಿಂಡಿನೊಳಗಿದ್ದ ಒಬ್ಬ ದೇವರ ಪೂಜಾರಿಯನ್ನಾಗಲಿ ಠಕ್ಕ ಭಕ್ತನನ್ನಾಗಲಿ ಮುಂದೆ ತಂದು ಅವನಿಂದ ದೇವರ ಹೇಳಿಕೆಯನ್ನು ಹೇಳಿಸುವರು. ತಮ್ಮಲ್ಲಿ ಒಬ್ಬೊಬ್ಬರೇ ದೇವರ ಹೇಳಿಕೆಯನ್ನು ಕೇಳಹತ್ತಿ ಆ ಪ್ರಕಾರ ಫಲಹೊಂದಿದೆ ವೆಂದು ಸುತ್ತಲೂ ಸುದ್ದಿಯನ್ನು ಹಬ್ಬಿಸುವರು. ಅವರು ಹಳ್ಳಿಹಳ್ಳಿಗೆ ತಿರುಗಾಡಿ ದುಃಖದಿಂದ ಹೊರಳಾಡುವ ಮರುಳು ಜನರ ಮನವೊಲಿಸಿ ತಮ್ಮ ಬಲೆಯೊಳಗೆ ಅವರನ್ನು ಎಳೆಯುವರು. ಹೀಗಾದ್ದರಿಂದ ದೇವರ ಹೇಳಿಕೆಯನ್ನು ಕೇಳಲಿಕ್ಕೆ ದೂರದೂರದಿಂದ ಜನರು ಬರಹತ್ತುವರು. ಆಗ ದೇವರ ಹೇಳಿ ಕೆಯ ಪಂಗಡಗವರು ಬಂದ ಜನರ ಆದರೋಪಚಾರಮಾಡಿ ಅವರ ಹೊಟ್ಟೆ ಯೊಳಗಿನ ಗುಟ್ಟನ್ನೆಲ್ಲಾ ಹೊರಗೆಳವಿ ತಿಳಕೊಂಡು 'ದೇವರ'ನ್ನು ಹೇಳ-ತಕ್ಕವನಿಗೆ ಗುಪ್ತವಾಗಿ ಎಲ್ಲ ಸಂಗತಿಗಳನ್ನು ತಿಳಿಸುವರು. ಬಳಿಕ ದೇವರ ಹೇಳಿಕೆ ಹೇಳುವವನು ಆವೇಶಗೊಂಡು ಆರ್ಭಟಿಸುವನು. ಆಗ ದೇವರ ಹೇಳಿಕೆಯ ತಂಡದವರು ತಾವೇ ಮುಂದೆ ಬಂದು ಭಯಭಕ್ತಿಯಿಂದ ಕೈ-ಮುಗಿದುಕೊಂಡು ನಿಂತು ತಾವು ದೇವರ ಹೇಳಿಕೆಯನ್ನು ಕೇಳಿ, ಹೊರಗಿನ ಜನರಿಗೆ ಕೇಳಿರೆಂದು ಹೇಳುವರು. ಆಗ ಒಬ್ಬೊಬ್ಬರೇ ಮುಂದೆ ಬರಲು ದೇವರ ಹೇಳಿಕೆ ಹೇಳುವವನು ಅವರವರ ಹೆಸರುಗೊಂಡು ಮುಂದೆ ಕರೆದು ಅವರವರಿಗೆ ಬಂದ ವಿಪತ್ತುಗಳನ್ನೆಲ್ಲ ತಾನೇ ಹೇಳಿ ಆ ಸಂಕಟಗಳು ಪರಿಹಾರ ವಾಗಲಿಕ್ಕೆ ಮಾಡತಕ್ಕ ಉಪಾಯುಗಳನ್ನೂ ಹೇಳುವನು. ಆಗ ದೇವರ ಹೇಳಿಕೆಯನ್ನು ಕೇಳಲಿಕ್ಕೆ ಬಂದವರು ತಮ್ಮ ಮನೋಗತವನ್ನೆಲ್ಲ ಬಿಚ್ಚಿ ಹೇಳಿದನೆಂದು ಮರುಳಾಗಿ ಭಯಭಕ್ತಿಯಿಂದ ಕೈಜೋಡಿಸಿಕೊಂಡು ನಿಂತು

ತಮ್ಮ ಮೇಲೆ ಅನುಗ್ರಹಮಾಡಬೇಕೆಂದು ದೇವರಿಗೆ ಬೇಡಿಕೊಳ್ಳುವರು. ಆಗ ದೇವರ ಹೇಳಿಕೆ ಹೇಳುವವನು ಏನಾದರೂ ದುಡ್ಡು ಸೆಳೆಯುವ ಉಪಾಯಗಳನ್ನು ಹೇಳುವನು. ಹೀಗಾಗಿ ಬಂದ ದುಡ್ಡನ್ನೆಲ್ಲ ಆ ವಂಚಕರು ಹಂಚಿಕೊಳ್ಳುವರು. ಇದೊಂದು ಹಳ್ಳಿಯ ನಿರುದ್ಯೋಗಿಗಳು ದುಡ್ಡು ಎಳೆಯುವ ಯುಕ್ತಿಯಾಗಿದೆ. ಈ ಯುಕ್ತಿಯಿಂದ ಏಳೆಂಟು ಕುಟುಂಬದ ಜನರು ಸಹಜವಾಗಿ ಹೊಟ್ಟೆತುಂಬಿಕೊಳ್ಳುವರು.

ನಮ್ಮ ಮುದ್ದೂರಿನ ದುರಗವ್ವನ ಹೇಳಿಕೆಯೂ ಇದರಂತೆಯೇ ಇದ್ದಿತು. ಮಂಗಳವಾರಕ್ಕೊಮ್ಮೆ ಮರುಳ ಜನರ ತಂಡವೇ ಅಲ್ಲಿ ಕೂಡುತ್ತಲಿತ್ತು. ನಮ್ಮ ಒಡಕಣ್ಣನಿಗೆ ಈ ಸಂಗಡದ ಯುಕ್ತಿಗಳೆಲ್ಲ ಗೊತ್ತು. ಅವನೇನು ಕಡಿಮೆ ಕಾರಸ್ಥಾನಿಯೆ! ಇಷ್ಟು ದಿನ ದೇಸಾಯರ ಆಸ್ತಿಯ ಮೇಲೆ ಹೊಂಚುಹಾಕಿ ಕುಳಿತಿದ್ದ ಅವನು ಈ ಸುಸಂಧಿಯನ್ನು ಸಾಧಿಸಿದನು. ಆ ಕೆಲಸದಲ್ಲಿ ಮರುಳು ಚಂದ್ರಾವತಿಬಾಯಿಯನ್ನು ಕೈವಶಮಾಡಿಕೊಳ್ಳುವದೇ ಒಳ್ಳೆ ಉಪಾಯವೆಂದು ಅವನು ಎಂದೋ ಅರಿತಿದ್ದನು. ಆದರೆ ಸಂಧಿ ಮಾತ್ರ ಸಾಧಿಸಿದ್ದಿಲ್ಲ. ಇಂದು ಅವನು ದುರಗವ್ವನ ಪೂಜಾರಿಯ ಮನೆಗೆ ಹೋಗಿ ಚಂದ್ರಾವತಿಬಾಯಿಯವರ ವರ್ತಮಾನವನ್ನೆಲ್ಲ ಸಂಗಡವಾಗಿ ತಿಳಿಸಿದನು. ಒಂದು ತಾಸು ಹೊತ್ತು ಇರುತ್ತಲೇ ಚಂದ್ರಾವತಿಬಾಯಿಯವರು ಒಡಕಣ್ಣನನ್ನು ಕರೆದುಕೊಂಡು ಊರ ಹೊರಗಿರುವ ದುರಗವ್ವನ ಗುಡಿಗೆ ಬಂದರು. ಆಗ ಅಲ್ಲಿ ಬಹಳ ಜನರು ನೆರೆದಿದ್ದು ಎಲ್ಲ ಜನರಿಗೆ ದೇವರ 'ಹೇಳಿಕೆ'ಯಾಗಿತ್ತು. ಚಂದ್ರಾವತಿಬಾಯಿಯವರು ಬಂದು ದುರಗವ್ವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಒಂದು ಮೂಲೆಯಲ್ಲಿ ಹೋಗಿ ಕುಳಿತರು. ಆಗ ದೇವರ ಹೇಳಿಕೆ ಹೇಳುವವನು ಆರ್ಭಟಿಸಿ 'ಬೊಮ್ಮಗೇರಿಯ ದೇಸಾಯರ ಕುಟುಂಬದವರು ಬಂದಾರಲ್ಲs! ಅವರೊಬ್ಬರು ಬರ್ಲಿ.' ಎಂದು ಕೂಗಿದನು. ಆಗ ಚಂದ್ರಾವತಿಬಾಯಿಯವರು ಭಯಭಕ್ತಿಯಿಂದ ಕೈಮುಗಿದುಕೊಂಡು ದೇವರ ಎದುರಿಗೆ ಬಂದು ಕುಳಿತರು. ಆಗ ದೇವರ ಹೇಳಿಕೆ ಹೇಳುವವನು 'ಅಹಹಹಹಾ! ನನ್ನ ಸತ್ತೇವು ನಿನಗ ಗೊತ್ತಿಲ್ಲ! ನನ್ನ ಮ್ಯಾಗ ನಿನ್ನ ಭಕ್ತಿ ಇಲ್ಲ! ನನ್ನ ಹಂತೇಲೆ ಬರಬೇಕಂತ ಮಾಡಿ ತಿಂಗಳಾದರೂ ನಿನಗ ಬರಾಕ ಕೊಡಲಿಲ್ಲ! ಇಲ್ಲೆ ಹೊಟ್ಯಾಗ ಇಟಗೊಂಡ ಕೂತರ ನಡ್ಯಾಕಿಲ್ಲ!

ಹೌದಾಪ್ರ ಹೌದಸ್ನು; ಇಲ್ಲಾದ್ರು ಇಲ್ಲಸ್ನು! ಏನದು ಹೇಳು? ಎಂದು ಗುಡುಗುಹಾಕಿದನು.

ಆಗ ಚಂದ್ರಾವತಿಬಾಯಿಯವರು, ಗಾಬರಿಯಾಗಿ 'ಹೌದ ನಮ್ಮವ್ವಾ! ನಿನ್ನ ದರ್ಶನಕ್ಕೆ ಬರಬೇಕೆಂದು ಮನಸ್ಸಿನಾಗ ಮಾಡಿ ತಿಂಗಳಾತು. ಮನೀ ಕೆಲಸದಾಗ ಬರೋದಾಗಲಿಲ್ಲ! ನಾ ಪರಾಧೀನದಾಕಿ. ನಿನ್ನ ಮುಗಳಿದ್ನೇನಿ. ದಯಮಾಡಿ ನನ್ನ ತಪ್ಪು ಹೊಟ್ಟ್ಯಾಗ ಹಾಕ್ಕೊಳ್ಳಬೇಕು ನಮ್ಮವ್ವಾ! ನೀ ಬಹಳ ಸತ್ತ್ಯಾಳ್ಯಾಕಿದ್ದೀದಿ. ನನ್ನ ಚಿಂತೀ ದೂರ ಮಾಡು ದುರಗವ್ವ.' ಎಂದು ದೈನ್ಯದಿಂದ ನಮಸ್ಕಾರ ಮಾಡಿದರು. ಮುಂದೆ ದೇವರ ಹೇಳಿಕೆ ಹೇಳುವವನು 'ನಿನಗೇನು ಕಡಿಮ್ಯಾಗೈತಿ? ಬೇಕಾದ್ದು ಕೊಟ್ಟೇನಿ. ಮಕ್ಕಳಿಲ್ಲಾ ಅಂಬೋದೊಂದs ನಿನಗ ದೊಡ್ಡ ಚಿಂತೈತಿ. ಆದರೇನು ಮಾಡಬೇಕು? ನೀ ಎಲ್ಲಾ ಫಲದಾನ ಮಾಡಿ ಬಂದೀದಿ. ನಿನ್ನ ಗಂಡ ಮಾಡಿಲ್ಲ. ನೀ ಏನ ಬಂಜೆಲ್ಲ. ನಿನ್ನ ಗಂಡ ಸಂಥ ಆದಾನ. ನನ್ನ ಭಕ್ತಾನ್ನ ನಿನ್ನ ಮನ್ಯಾಗ ಇಟ್ಟೇನಿ. ಅವನಿಂದಾನs ನಿನಗ ಹಿತಾ ಆಕ್ಕೈತಿ. ಅವನ್ನ ಬಿಟ್ಟೀ ಅಂದ್ರು ಕೆಟ್ಟಿ. ನನ್ನ ನಂಬು. ಇಲ್ಲದ ದೊಡ್ಡಿಸ್ತನ ಇಲ್ಲಿ ನಡಿಯಾಕಿಲ್ಲ. ಗುಡ್ಡದಂಥ ತಪ್ಪು ಮಾಡೀದಿ. ಬೆಳ್ಳೀ ತೊಟ್ಟಲಾ ನನ್ನ ಗುಡ್ಯಾಗ ಕಟ್ಟಿಸು. ನಾ ಹೇಳಿದ್ಹಾಂಗs ನಡಿ. ನಿನಗ ಮಕ್ಕಳಾಗತಾನ. ನೀ ಏನ ಚಿಂತಿ ಮಾಡಬ್ಯಾಡ, ನಡಿ.' ಎಂದನು.

ಕೂಡಿದ ಮರುಳು ಮಂದಿ 'ದುರಗವ್ವ ಏನ ಸತ್ತ್ಯಾಳ್ಯಾಕೆಪಾ! ಒಳಗಿನ ಗುಟ್ಟೆಲ್ಲಾ ಒಂದೂ ಬಿಡದ ಹೇಳಿಬಿಡತಾಳ! ದೇವತಿ ದೊಡ್ಡಾಕಿ ಅಂತs ಇಷ್ಟೆಲ್ಲಾ ನಡದೈತಿ!' ಎಂದರು. ಚಂದ್ರಾವತಿಬಾಯಿಯವರು 'ನಮ್ಮವ್ವಾ! ನೀ ಹೇಳಿದ್ಹಂಗ ನಡೀತೇನಿ. ನನ್ನ ಬಂಜೆತನ ಕಳಿ. ಇಷ್ಟ ದಿನ ನಿನ್ನ ಹತ್ತರ ಬರದ್ದು ತಪ್ಪಾಯಿತು. ಇಕಾ ಗಲ್ಲ ಗಲ್ಲ ಬಡಕೋತೇನಿ.' ಎಂದು ಗಲ್ಲ ಗಲ್ಲ ಬಡಕೊಂಡರು.

ಮುಂದೆ ಸ್ವಲ್ಪಹೊತ್ತಿನಲ್ಲಿಯೆ ದೇವರ ಹೇಳಿಕೆ ಹೇಳುವವನು ಗದ ಗದ ನಡುಗಹತ್ತಿ ಎಚ್ಚರದಪ್ಪಿದವನಂತೆ ನಿಶ್ಚೇಷ್ಟಿತನಾಗಿ ಬಿದ್ದನು. ಹತ್ತರ ಇದ್ದವರು ಓಡಿಬಂದು ಬೀಸಣಿಕೆಯಿಂದ ಬೀಸುತ್ತಾ, ನೆತ್ತಿಗೆ ನೀರನ್ನು

ಬಡಿದರು. ಸುಮಾರು ಹದಿನೈದು ನಿಮಿಷಗಳ ವರೆಗೆ ಹಾಗೆಯೇ ಬಿದ್ದು-ಕೊಂಡು, ಆಮೇಲೆ ಉಸುರ್ಗರೆದು ಕುಳಿತುಕೊಂಡನು. ಆಗ ಅವನ ಮುಖದ ಮೇಲಿದ್ದ ಭಯಂಕರ ಸ್ವರೂಪವು ಬಯಲಾಗಿ ಜ್ಯೋಲುಮೋರೆ ಯುವನಾಗಿದ್ದನು. ಬಂದ ಭಕ್ತರೆಲ್ಲ ಹಣ್ಣು ಕಾಯಿಗಳನ್ನು ಕೊಟ್ಟು ಕಾಣಿಕೆಯನ್ನು ನೀಡಿದರು. ಚಂದ್ರಾವತಿಬಾಯಿಯವರು ಸಹ ಹಣ್ಣು ಕಾಯಿಗಳನ್ನು ಮುಂದಿಟ್ಟು ಒಂದು ರೂಪಾಯಿ ಕಾಣಿಕೆ ಕೊಟ್ಟು, ಊರಿಗೆ ಹೋಗಿ ಬೆಳ್ಳಿಯ ತೊಟ್ಟಿಲ ಮಾಡಿಸಿ ಕೊಟ್ಟುಕಳಿಸುವೆನೆಂದು ವಚನ ಕೊಟ್ಟರು. ಆಮೇಲೆ ಪೂಜಾರಿಯು ಹಣ್ಣು ಕಾಯಿಗಳನ್ನೆಲ್ಲ ಗುಡಿಯೊಳಗೆ ಒಯ್ದನು. ಆಗ ಗುಡಿಯಲ್ಲಿದ್ದವರು ಅರ್ಧ ತೆಂಗಿನಕಾಯಿಗಳನ್ನು ಅಡಗಿಸಿದರು. ಪೂಜಾರಿಯು ಉಳಿದ ತೆಂಗಿನಕಾಯಿಗಳನ್ನು ಒಡೆದು ದೇವತೆಗೆ ಎಡೆಮಾಡಿ ಮಂಗಳಾರುತಿಯನ್ನು ಹಚ್ಚಿದನು. ಆಮೇಲೆ ನೆರೆದವರೆಲ್ಲರೂ ಮಂಗಳಾರತಿ ಪದವನ್ನು ಅನ್ನಹತ್ತಿದರು. ಪದಗಳಾದ ಬಳಿಕ ಪೂಜಾರಿಯು ಬಂದ ಭಕ್ತರಿಗೆಲ್ಲ ಪ್ರಸಾದವನ್ನು ಹಂಚಿದನು. ಅಷ್ಟರಲ್ಲಿ ಹೊತ್ತು ಮುಳುಗಲಾಗಿ ಒಬ್ಬೊಬ್ಬರೇ ಎದ್ದು ದುರಗವ್ವನಿಗೆ ಕೈಮುಗಿದು ಬೇಡಿಕೊಂಡು ಹೊರಡಹತ್ತಿದರು. ಚಂದ್ರಾವತಿಬಾಯಿಯವರು ಎದ್ದುನಿಲ್ಲಲಾಗಿ ಪೂಜಾರಿಯು ಒಡೆಯದಿದ್ದ ಒಂದು ತೆಂಗಿನಕಾಯಿಯನ್ನು ಹಾಗೂ ಅಕ್ಕೀಕಾಳುಗಳನ್ನು ತಕ್ಕೊಂಡು ಬಂದು ಅವರ ಉಡಿಯಲ್ಲಿ ಹಾಕಿ ಅದನ್ನು ದೇವರ ಜಗಲಿಯ ಮೇಲಿಟ್ಟು ದಿನಾಲು ಪೂಜಿಸಬೇಕೆಂದು ಹೇಳಿದನು. ಮತ್ತೆ ಒಳಗೆ ಹೋಗಿ ದೇವರಿಗೆ ಏರಿಸಿದ ಕುಂಕುಮವನ್ನು ಚೀಟುಕಟ್ಟಿ ತಂದುಕೊಟ್ಟನು. ಆಮೇಲೆ ಚಂದ್ರಾವತಿಬಾಯಿಯವರು ತಮ್ಮ ಮೇಲೆ ದೇವಿಯ ಪೂರ್ಣ ಅನುಗ್ರಹವಾಯಿತೆಂದು ಹಿಗ್ಗಿ ಒಡಕಣ್ಣಾನೊಡನೆ ಮನೆಯ ಮಾರ್ಗಹಿಡಿದರು.

ಸಾಯಂಕಾಲದ ಊಟವಾದ ಬಳಿಕ ಚಂದ್ರಾವತಿಬಾಯಿಯವರು ಒಂದು ಕೋಣೆಯಲ್ಲಿ ಮಲಗಿದರು. ಅಂದು ಅವರಿಗೆ ಬಹಳ ರಾತ್ರಿಯಾದರೂ ನಿದ್ರೆಹತ್ತಲಿಲ್ಲ. ದುರಗವ್ವನು ಹೇಳಿದ ಒಂದೊಂದೇ ವಾಕ್ಯವನ್ನು ಅವರು ನೆನಪಿಗೆ ತಂದು ಆಲೋಚಿಸಹತ್ತಿದರು. ಕೆಲಹೊತ್ತು ವಿಚಾರಮಾಡಿ ತಮ್ಮ ಮನದಲ್ಲಿ ಏನೋ ನಿರ್ಧರಿಸಿದರು. ಬೆಳಗುಮುಂಜಾನೆ ಅವರಿಗೆ ಗಾಢನಿದ್ರೆ

ಹತ್ತಿತು. ನಿದ್ರೆಯಲ್ಲಿ ಒಂದು ಕನಸನ್ನು ಕಂಡರು: ಅವರೊಬ್ಬರೆ ಎಲ್ಲಿಯೋ ಒಂದು ವನದಲ್ಲಿ ವಿಹರಿಸುತ್ತಿದ್ದರು. ಕತ್ತಲಾಗುತ್ತಲಿದ್ದದರಿಂದ ಸನಿಯಕ್ಕೆ ಗಂಡಸರಾರೂ ಇಲ್ಲವಲ್ಲ, ಎಂಬ ಭಯವು ಉತ್ಪನ್ನವಾಯಿತು. ಕೂಡಲೆ ಅವರೆದುರು ಒಡಕನ ಮೂರ್ತಿ ಕಟ್ಟಿದಂತಾಯಿತು. ಒಡಕನು ಯೌವನದ ಮದದಿಂದ ಗಹಗಹಿಸಿ ನಗುತ್ತಿದ್ದನು. ಇದನ್ನು ಕಂಡು ಬಾಯಿಯವರ ಭಯವು ಬಯಲಾದರೂ, ಆ ನಗೆಯಲ್ಲಿ ಎದ್ದು ಕಾಣುವ ಕಾಮವಾಸನೆಯಲ್ಲಿ ಸ್ವಲ್ಪ ಸಂಶಯ, ಮತ್ತೆ ಅದರ ಭೀಕರತೆ ಇವು ಅವರನ್ನಾವರಿಸಿದವು. ಅವನನ್ನು ಹಿಂದೆ ಬಿಟ್ಟು ಓಡಹತ್ತಿದರು. ಅಲ್ಲಿಯೂ ಒಡಕನೇ! ಹಿಂದೆ, ಮುಂದೆ, ಎಡಕ್ಕೆ, ಬಲಕ್ಕೆ, ಜಗವೆಲ್ಲ ಒಡಕನಿಂದ ತುಂಬಿದಂತೆ ಕಂಡಿತು. ಆಗ ಅವರು ಒಮ್ಮೆಲೆ ಗಾಬರಿಯಾಗಿ ಎಚ್ಚತ್ತರು. ಬೆಳ್ಳಗೆ ಬೆಳಗಾಗಿತ್ತು. ಸ್ವಪ್ನದ ವಿಚಾರ ಅವರ ಮನಸ್ಸನ್ನು ಒಂದು ನಿರ್ಧಾರಕ್ಕೆ ಮುಟ್ಟಿಸಿದಂತೆ ತೋರಿತು. ಹಾಸಿಗೆಯಿಂದೆದ್ದು ಮೋರೆ ತೊಳಕೊಂಡು ಒಡಕಣ್ಣನನ್ನು ಕರೆದು ಅಂದೇ ತಮ್ಮ ಊರಿಗೆ ಹೋಗಬೇಕೆಂದು ಚಂದ್ರಾವತಿಬಾಯಿಯವರು ತಿಳಿಸಿದರು. ಈ ವರ್ತಮಾನವನ್ನು ಒಡಕಣ್ಣನು ತಮ್ಮ ತಂದೆಗೆ ಹೇಳಿದನು. ಮಧ್ಯಾಹ್ನಕ್ಕೆ ಚಂದ್ರಾವತಿಬಾಯಿಯವರಿಗೆ ಮೋಜವಾನಿಯಾಯಿತು; ಆಮೇಲೆ ಬಾಯಿಯವರು ಒಡಕಣ್ಣನನ್ನು ಸಂಗಡ ಕರೆದುಕೊಂಡು ತಮ್ಮ ಊರಿಗೆ ತೆರಳಿದರು.

ದುರಗಪ್ಪನ ಹೇಳಿಕೆಯನ್ನು ಕೇಳಿಬಂದ ಬಳಿಕ ಚಂದ್ರಾವತಿಬಾಯಿಯವರ ಮನಸ್ಸಿನಲ್ಲಿ ಬಹಳ ಸ್ಥಿತ್ಯಂತರವಾಯಿತು. ಅವರು ಮನೆಗೆಲಸವನ್ನು ದಕ್ಷತೆಯಿಂದ ಮಾಡದಾದರು. ಮನೆಗೆ ಬಂದವರ ಮೇಲೆ ಸಿಟ್ಟು ಸೆಡಕುಗಳನ್ನು ಮಾಡಹತ್ತಿದರು. ಒಡಕನೇ ಅವರ ಜೀವಾಳವಾದನು. ಅವನನ್ನು ಬಿಟ್ಟರೆ ಒಂದು ಕ್ಷಣಕ್ಕೂ ಅವರಿಗೆ ಸಮಾಧಾನವಿಲ್ಲ. ಒಡಕನ ದೈವ ತೆರೆದಂತಾಯಿತು. ಅವನ ತಿನಸು, ಊಟ, ಶುಶ್ರೂಷೆಗಳಲ್ಲಿಯೇ ಚಂದ್ರಾವತಿಬಾಯಿಯವರು ತಮ್ಮ ಕಾಲಕಳೆಯಹತ್ತಿದರು. ಶ್ರೀಪತಿರಾಯರಿಗೆ ಹೊತ್ತಿಗೆ ಊಟ ಕೂಡ ಸಿಗದಂತಾಯಿತು. ಶ್ರೀಪತಿರಾಯರ ಸಿಟ್ಟುಸೆಡವು ನಡೆಯದಂತಾಯಿತು. ಆದರೂ ಅವರಿಗೆ ಮೊದಮೊದಲು ತಮ್ಮ ಹೆಂಡತಿಯ ಬಗ್ಗೆ ಯಾವ ಬಗೆಯ ಸಂಶಯವೂ ಬರಲಿಲ್ಲ. ತಮ್ಮ ಹೆಂಡತಿಯು ಮಕ್ಕ

ಳಾಗದ್ದರಿಂದ ಉದಾಸೀನಳಾಗಿ ಹೀಗೆ ಮಾಡುತ್ತಿರಬಹುದೆಂದು ತಿಳಿದು, ಒಂದ ಸಂಕಟಗಳನ್ನೆಲ್ಲ ಸಹಿಸಿಕೊಂಡು ಸುಮ್ಮನಿರಹತ್ತಿದರು. ಆದರೆ ಆ ತರುಣಿಯ ಮನಸವೆಂಬ ಮರ್ಕಟವು ಮಕ್ಕಳ ಮೋಹವೆಂಬ ಸುರೆಯನ್ನು ಕುಡಿದು ಕುಣಿಯುತ್ತಿರುವಾಗ, ಅದಕ್ಕೆ ಕುಟಿಲತಂತ್ರದ ಚೇಳುಕೊಂಡೆಯು ಚುಚ್ಚಿ ಸ್ವಾತಂತ್ರ್ಯವೆಂಬ ಭೂತವು ಗಂಟುಬಿದ್ದುದರಿಂದ ಅದು ಹುಚ್ಚೆದ್ದು ಕುಣಿಯಹತ್ತಿದ್ದು ಆಶ್ಚರ್ಯವಲ್ಲ. ಮಕ್ಕಳ ಮೋಹವು ಚಂದ್ರಾವತಿಬಾಯಿ ಯವರನ್ನು ಮತಿಗೆಡಿಸಿಬಿಟ್ಟಿತು.

---

## ೮

### ಮನೆಯಲ್ಲಿಯ ಮೂಲ ಮಂತ್ರ........

ಬೊಮ್ಮಗೇರಿಯಲ್ಲಿ ಈಗ ಚಳಿಗಾಲ. ಅದನ್ನು ವರ್ಣಿಸುವ ಶಕ್ತಿಯು ನಮ್ಮಲ್ಲಿಲ್ಲ. ಬ್ರಹ್ಮಪುರ-ವರ್ಣನೆಯಲ್ಲಿರುವ ಬೊಮ್ಮಗೇರಿಯ ಚಳಿಗಾಲದ ವರ್ಣನೆಯನ್ನು ಇಲ್ಲಿ ಕನ್ನಡಿಸಿ ಕೊಡುತ್ತೇವೆ.

'ಆಷಾಢ ಶುದ್ಧ ಪೌರ್ಣಿಮೆಯು. ಬನಗಳ ಹೊರತಾಗಿ ಮತ್ತೆಲ್ಲಿಯೂ ಹಸಿರು ಬಣ್ಣದ ಸುಳಿವಿಲ್ಲದ್ದರಿಂದ ಬನದ ಹುಣ್ಣಿಮೆಯೆಂದು ಪ್ರಖ್ಯಾತಿ ಪಡೆದಿದೆ. ಮಂಜೆಂಬ ಮಂತ್ರಿಯನ್ನೂ, ಮೂಡಣಗಾಳಿಯೆಂಬ ಸೇನಾಪತಿ ಯನ್ನೂ ಮುಂದೆ ಮಾಡಿಕೊಂಡು, ಜಯಭೇರಿಯನ್ನು ಹೊರಡಿಸುತ್ತ ಹೇಮಂತರಾಜನು ಹೊರಟಿದ್ದಾನೆ. ಜಯಶೀಲನಾಗಿ ಬರುವ ಸಮ್ರಾಟನನ್ನು ನೋಡಿ ಪ್ರಜೆಗಳು ಬಾಗಿ ತಲೆ ಬಗ್ಗಿಸುವಂತೆ ಹೇಮಂತರಾಜನ ಆಗಮನ ದಿಂದ ಪ್ರಪಂಚದಲ್ಲಿರುವ ಪ್ರಾಣಿಗಳೆಲ್ಲ ಮುದ್ದೆಯಾಗಿ ತಲೆ ಬಗ್ಗಿಸಿವೆ. ಮಂಜಿ ನಿಂದೊಡಗೂಡಿ ವೇಗದಿಂದ ಬೀಸುವ ಮೂಡಣಗಾಳಿಯಿಂದ ಮಲೆನಾಡಿನ ಅನೇಕ ಜನರು ಚಳಿಜ್ವರದಿಂದ ಪುೂಲೆಹಿಡಿದು ಮಲಗಿದ್ದಾರೆ. ನಾಗವಲ್ಲಿಯು

ಎಲೆಗಳು ಉದುರಲು ತೋಟಿಗರು ದುಃಖಪಡುತ್ತಿದ್ದಾರೆ. ಬೆಳೆಗಳು ಮಾಗಿ ಒಂದದ್ದನ್ನು ಕಂಡು ಒಕ್ಕಲಿಗರು ಹಿಗ್ಗುತ್ತಲಿದ್ದಾರೆ. '

ಒಂದು ಆರು ತಾಸಿನ ಸುಮಾರಕ್ಕೆ ಓರ್ವ ವೃದ್ಧಬ್ರಾಹ್ಮಣನು ಸಂಗಡ ಇಬ್ಬರು ಶಿಷ್ಯರನ್ನು ಕರೆದುಕೊಂಡು ದೇಸಾಯಿ ಶ್ರೀಪತಿರಾಯರ ಮನೆಗೆ ಬಂದನು. ಆಗ ಶ್ರೀಪತಿರಾಯರು ಎದ್ದು ಸನ್ಮಾನ ಮಾಡಿ ಅವರನ್ನು ಲೋಡಿಗೆ ಕುಳ್ಳಿರಿಸಿದರು. ಬಳಿಕ ಆ ಮೂವರು ಧ್ವನಿಗೂಡಿಸಿ ಉಚ್ಚ ಸ್ವರ ದಿಂದ ಋಗ್ವೇದದ ಋಕ್ಕುಗಳನ್ನೂ, ಅವುಗಳ ಪದಶ್ರಮ, ಘನಗಳನ್ನೂ ಅಂದು, ಶ್ರೀಪತಿರಾಯರಿಗೆ ಆಶಿರ್ವಾದ ಮಾಡಿದರು. ಆಗ ರಾಯರು ಮಧ್ಯಾಹ್ನಕ್ಕೆ ಅತಿಥಿಗಳ ಆಗಮನವಾಯಿತೆಂದು ಹಿಗ್ಗಿ ಒಳಗೆ ಹೋಗಿ ತಮ್ಮ ಹೆಂಡತಿಗೆ ಅತಿಥಿಗಳ ಸಲುವಾಗಿ ಹೆಚ್ಚಿಗೆ ಅಡಿಗೆ ಮಾಡಲಿಕ್ಕೆ ಹೇಳಿ ದರು. ಪ್ರತಿದಿನ ಬರುವ ಅತಿಥಿಗಳ ಸಲುವಾಗಿ ಚಂದ್ರಾವತಿಬಾಯಿಯವರು ಬೇಸತ್ತಿದ್ದರು. ಇಂದು ಆಗಲೆ ಆರು ತಾಸು ವಿಾರಿಹೋದದ್ದರಿಂದ ಅವರಿಗೆ ಸಿಟ್ಟು ತಡೆಯುವದಾಗಲಿಲ್ಲ. ತಮ್ಮ ದಿನದ ಮನೆಗೆಲಸವೆ ಭಾರವಾಗುವ ದೆಂದೂ, ತಾವು ಬೇಸತ್ತಿರುವದಾಗಿಯೂ, ದೊಡ್ಡ ರಂಬಾಟವನ್ನೇ ಮಾಡ್ಕೊ ದರು. ತಮ್ಮ ತಂದೆತಾಯಿಗಳಿದ್ದಿದ್ದರೆ ತಮಗೆ ಈ ಬವಣೆ ಬರುತ್ತಿದ್ದಿಲ್ಲ ವೆಂದು ಕಣ್ಣೀರಿಟ್ಟರು. ಶ್ರೀಪತಿರಾಯರಿಗೆ ಈ ಗೊಂದಲ ಸಹಿಸುವದಸಾಧ ವಾಯಿತು. ಅವರು ಎಂದೂ ಮನೆಗೆ ಬಂದ ಅತಿಥಿಗಳನ್ನು ನಿರಾಶೆಗೊಳಿಸಿ ದವರಲ್ಲ. ಇಂದು ತಮ್ಮ ಮೇಲೆ ಅಂಥ ದುರ್ಧರ ಪ್ರಸಂಗ ಬರುವದಲ್ಲ! ಎಂದು ಮನದಲ್ಲಿ ಕಳವಳಗೊಂಡರು. ಕೊನೆಯ ಪ್ರಯತ್ನವೆಂದು ಸಿಟ್ಟಿನಿಂದ ನುಡಿದರು. 'ನಮ್ಮ ಕಷ್ಟ ನಮಗ ಇದ್ದದ್ದs. ಹ್ಯಾಂಗಾರ ಮಾಡಿ ಲಗೂ ಮೈ ತೊಳಕೊಂಡು ಅಡಿಗೀ ಮಾಡು.'

ಚಂದ್ರಾವತಿಬಾಯಿಯವರು ತಮ್ಮವರ ಸಿಟ್ಟು ಸೆಡವುಗಳನ್ನೆಲ್ಲ ಅರಿತ ವರು. ದೇಸಾಯರ ಸಿಟ್ಟಿನ ಪರಿಣಾಮವೇನೂ ಅವರ ಮೇಲೆ ಆಗಲಿಲ್ಲ. ಪ್ರತ್ಯುತ್ತರವಾಗಿ ಅವರು ಹೀಗೆ ನುಡಿದರು: 'ಎಷ್ಟ ಪುಣ್ಯಾ ಮಾಡಿದರೂ ಅಷ್ಟೇ ಅದ. ಹೀಂಗ ಪುಣ್ಯಾ ಮಾಡಿ ಮಾಡೇ ಮನೀ ಗೊತ್ತಿಗೆ ಹಚ್ಚಿದ್ರಿ. ನನಗೇನು ಮಕ್ಕಳಿಲ್ಲ, ಮರೀ ಇಲ್ಲ. ಆ ಪುಣ್ಯಾ ತಕ್ಕೊಂಡು ನಾನು ಮಾಡೋದೂ ಅಷ್ಟರಾಗ ಅದ. ಎಲ್ಲಾ ಪುಣ್ಯ ನಿಮಗೇ ಇರಲಿ. ನೀವೇ

ಅಡಿಗೆ ಮಾಡಿ ಊರ ತಿರುಕರನ್ನೆಲ್ಲ ಕರೆದು ಊಟ ಮಾಡಿಸಿ ಮತ್ತಿಷ್ಟು ಪುಣ್ಯ ಕಟ್ಟಿಕೊಳ್ರಿ.' ಆಗ ದೇಸಾಯರ ಸಿಟ್ಟಯು ಕರಗಹತ್ತಿತು. ಹೆಂಡತಿಯ ಮೇಲೆ ಜೋರು ಜುಲುಮೆ ಮಾಡುವ ಧೈರ್ಯ ಅವರಲ್ಲಿ ಉಳಿಯಲಿಲ್ಲ. ಅವರು ಮುಂದುಗಾಣದೆ ನುಡಿದರು. 'ನನಗs ಅಡಿಗೀ ಮಾಡಲಿಕ್ಕೆ ಬರತಿದ್ದರ ನಿನಗ್ಯಾಕ ಇಷ್ಟು ಹೇಳಿಕೋತಿದ್ದೆ? ಆತು! ಇವತ್ತ ನೀ ಅಡಗೀ ಮಾಡೂದಿಲ್ಲ ಹೌದಲ್ಲೋ? ಬಿಟ್ಟುಬಿಡು. ನಮ್ಮ ಒಡಕಣ್ಣಾ, ಎಲ್ಲಿದ್ದಾನ? ಅವಗಾರs ಹೇಳತೇನಿ.'

'ಹೌದು! ಅವನ ಕಡಿಂದ ಅಡಿಗೀ ಮಾಡಸದ ಏನ ಮಾಡೀರಿ? ಆ ಹುಡುಗೊಂದು ಹೋಳಿ ಹುಣ್ಣಿವ್ಯಾಗ ಹುಡುಗರ ಕೈಯಾಗ ಕತ್ತಿ ಸಿಕ್ಕಾಂಗ ಆಗೇದ.' ಎಂದು ಚುಚ್ಚಿ ಮಾರುತ್ತರವನ್ನಿತ್ತರು. ದೇಸಾಯರೂ ಸಿಟ್ಟಿನ ಭರದಲ್ಲಿ, 'ಹೆಚ್ಚಿನ ಉಸಾಬರೀ ನಿನಗ್ಯಾಕ ಬೇಕು? ಸುಮ್ಮನs ಎದ್ದು ಮೈತೊಳಕೊಂಡು ಅಡಗೀ ಮಾಡು....ನಾಳೆ ಜಡ್ಡಾಗಿ ಸತ್ತರ ನೋಡಲಿಕ್ಕೆ ಬಂದೀತು.' ಎಂದು ಒದರಿಕೊಂಡು ಅಲ್ಲಿಂದ ಹೊರಟು ಹೋದರು. ದೇಸಾಯರು ಹೋದ ಮೇಲೆ ಬಾಯಿಯವರು ದೊಡ್ಡ ದನಿ ತೆಗದು ಬಿಕ್ಕಿಬಿಕ್ಕಿ ಅಳಹತ್ತಿದರು. 'ನಾ ಸಾಯೋದs ನಿಮಗ ಬೇಕಾಗೇದ.. ನಮ್ಮಪ್ಪ ವರದಕ್ಷಿಣಿ ವರೋಪಚಾರ ಮಾಡಿ ಕಟಗರ ಕೈಯ್ಯಾಗ ಕೊಟ್ಟು ಹೋದss. ನಮ್ಮಪ್ಪ-ಅವ್ವ ನನ್ನ ಅಡವ್ಯಾಗ ಬಿಟ್ಟು ಹೋದರೂss. ನಿಮ್ಮ ಮನೀಗಿ ಬಂದು ಹತ್ತು ವರ್ಷಾತು....ಸಾರಿಗೀ ಎತ್ತಿನ್ಹಾಂಗ ದುಡದೂ ದುಡದೂ ಸಾಯತೇನಿ....ಒಂದಿನಾನಾರ ಸುಖ ಸಂತೋಷದ ಮಾತಾಡೀರ್ಯಾ? ಸತ್ತರ ಸತ್ತೀ ಅಂತೀರಿ..ನಿಮಗಿಷ್ಟು ಬ್ಯಾಸರಾಗಿದ್ದರ ನನ್ನ ಒಂದು ಹಾಳಭಾವ್ಯಾಗಾರs ನೂಕಿ ಬರ್ರಿ.'

ಬಾಯಿಯವರ ಆರ್ಭಟ ಪಡಸಾಲೆಯಲ್ಲಿ ಕೇಳಬರುತ್ತಿತ್ತು. ಅಲ್ಲಿ ಕುಳಿತ ಬ್ರಾಹ್ಮಣರು ಗಂಡ-ಹೆಂಡಿರ ಸಂವಾದವನ್ನು ಕೇಳಿದ್ದರು. ದೇಸಾಯರು ಸಣ್ಣಮೋರೆ ಮಾಡಿದ್ದನ್ನು ನೋಡಿ ಆ ವೃದ್ಧ ಬ್ರಾಹ್ಮಣನು ಅಂದು ಸೋಮವಾರವಾದುದರಿಂದ ತನಗೆ ಸಾಯಂಕಾಲಕ್ಕೆ ಭೋಜನವೆಂದು ಹೇಳಿದನು; ತಾವು ಗೋಕರ್ಣಯಾತ್ರೆಯನ್ನು ಪಾದಚಾರಿಗಳಾಗಿ ಮಾಡಹತ್ತಿದ್ದರಿಂದ ಇಲ್ಲಿ ಬಹಳ ಹೊತ್ತು ನಿಲ್ಲುವ ಅವಕಾಶವಿಲ್ಲೆಂದೂ ತಿಳಿಸಿದರು.

ಈ ಊರಲ್ಲಿ ದೇಸಾಯರು ಬಹಳ ದೊಡ್ಡ ಮನುಷ್ಯರೆಂದು ಕೇಳಿ ತಾವು ಅಲ್ಲಿಗೆ ಬಂದೆವೆಂದು ಹೇಳಿ, 'ಸಂಜೆಗೆ ಮುಂದಿನ ಗ್ರಾಮಕ್ಕೆ ಹೋಗುತ್ತೇವೆ. ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿರಿ.' ಎನ್ನುತ್ತ ಫಲ ಮಂತ್ರಾಕ್ಷತೆಯ ತಟ್ಟೆಯನ್ನು ದೇಸಾಯರೆದುರು ಸರಿಸಿದರು. ದೇಸಾಯರು ಎಂಥ ಯೋಗವು ತಮ್ಮ ದುರದೃಷ್ಟದಿಂದ ತಪ್ಪಿಹೋಯಿತಲ್ಲ! ಎಂದು ಮನದಲ್ಲಿ ಮರುಗಿ ಒಂದು ರೂಪಾಯಿ ದಕ್ಷಿಣೆಯನ್ನು ಫಲಮಂತ್ರಾಕ್ಷತೆಯ ತಟ್ಟೆಯಲ್ಲಿ ಹಾಕಿ ನಮಸ್ಕಾರ ಮಾಡಿ ಫಲಮಂತ್ರಾಕ್ಷತೆಗಳನ್ನು ತಕ್ಕೊಂಡರು. ಬ್ರಾಹ್ಮಣರು ತಾವು ಹೋಗಿ ಬರುತ್ತೇವೆಂದು ಹೇಳಿ ತಮ್ಮ ಹಸಿಬೆ ಗಂಟುಗಳನ್ನು ತಕ್ಕೊಂಡು ದೇಸಾಯರ ಮನೆಯಿಂದ ಹೊರಬಿದ್ದು ಮುಂದೆ ಕಾಣಿಸದಂತಾದರು. ಹೆಂಡತಿಯ ಚಂಡಿತನದಿಂದ ಮನೆಗೆ ಬಂದ ಅತಿಥಿಗಳು ವಿಮುಖರಾದರೆಂದು ದೇಸಾಯರು ಬಹಳ ವ್ಯಸನಪಟ್ಟರು. "ಇಂದಿಗೆ ನಮ್ಮ ಮನೆತನದ ಪುಣ್ಯವು ತೀರಿತು! ನಾನು ಕುಲಕಂಟಕನಾದೆನು. ಈ ನನ್ನ ಜನ್ಮವು ವ್ಯರ್ಥವು!" ಎಂದು ಹಳಹಳಿಪಡುತ್ತ ಒಳಗೆ ಹೋಗಿ ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ, ಅಂದು ಉಪವಾಸದಿಂದಲೇ ಮನೆಯಿಂದ ಹೊರಬಿದ್ದು ತೋಟದ ಕಡೆಗೆ ಹೊರಟುಹೋದರು.

ಚಿಂತೆಯು ಚಿತೆಗಿಂತ ಹೆಚ್ಚಿನದೆಂದು ಬಲ್ಲವರು ಹೇಳುವದು ಸುಳ್ಳಲ್ಲ. ಅಂದು ದೇಸಾಯರ ಮನಸ್ಸು ಬೆಂದು ಬೆಂಡಾಗಿತ್ತು. ತೋಟದಲ್ಲಿ ಬೀಸುವ ಗಾಳಿಯಿಂದಾಗಲಿ, ಗಿಡಗಳ ತಂಪುನೆರಳಿನಿಂದಾಗಲಿ ಅವರ ಅಂತರಂಗಕ್ಕೆ ಶಾಂತಿಯು ದೊರೆಯಲಿಲ್ಲ. ಬರಬರುತ್ತ ದಾಹವು ಹೆಚ್ಚಾಗಿ ನಾಲಗೆಯು ಒಣಗಹತ್ತಿತು. ಆಗ ದೇಸಾಯರು ತೋಟಿಗರ ಕಡೆಯಿಂದ ಎಳೆಯ ತೆಂಗಿನಕಾಯಿಗಳನ್ನು ತರಿಸಿ ಆ ಸಿಹಿಯಾದ ತಂಪುನೀರನ್ನು ಕುಡಿದರು. ಆದರೂ ಹೊಟ್ಟೆಯೊಳಗೆ ಸಮಾಧಾನವಾಗಲಿಲ್ಲ. ಅಂತೂ ಇಂತೂ ಗಿಡದ ಕೆಳಗೆ ಹುಲ್ಲುಹಾಸಿಗೆಯ ಮೇಲೆ ಒರಗಿಕೊಂಡು ದೇಸಾಯರು ವಿಚಾರ ಮಾಡಹತ್ತಿದರು. ತಮ್ಮ ಮನೆಯಲ್ಲಿ ಈಗ ಇಷ್ಟು ಅವ್ಯವಸ್ಥೆಯೇಕೆ? ಎಂದು ಅವರ ವಿಚಾರ. ಹೆಂಡತಿಯೊ, ಬರಬರುತ್ತ ತಮ್ಮ ಮಾತು ಕೇಳದಂತಾಗಿದ್ದಾಳೆ. ಅವಳನ್ನು ತಡಹುವದೆಂದರೆ ತಾವೇ ಮಾನಭಂಗ ಮಾಡಿಕೊಳ್ಳುವ ಪ್ರಯತ್ನ ಮಾಡಿದಂತೆ. ತಾವೊ, ದಾನ ಧರ್ಮ ಮಾಡುತ್ತ

ದೇವರ ಧ್ಯಾನದಲ್ಲಿ ಹೊತ್ತುಕಳೆಯುವಂಥವರು. ತಮ್ಮ ಎಲ್ಲ ಸದಾಚಾರಗಳಿಗೆ ಹೆಂಡತಿಯಿಂದ ಪದೇ ಪದೇ ತಡೆಯುಂಟಾಗಹತ್ತಿದೆ. ಇದರ ಮೂಲವೆಲ್ಲಿರಬಹುದು? ಅವಳಿಗೆ ಮಕ್ಕಳಾಗದ್ದರಿಂದಲೇ? ಇರಬಹುದು. ಹಾಗಿದ್ದರೆ ನನ್ನ ಮೇಲಷ್ಟೇ ಸಿಟ್ಟುಮಾಡಬಹುದು. ಆದರೆ ಮಂದಿಯ ಮೇಲೇಕೆ ಇವಳ ಸೆಡವು? ಪಾಪ ಆ ಬಡ ವಿದ್ಯಾರ್ಥಿ ಹಣಮಂತನೇನು ಮಾಡಿದ್ದ? ಹುಡುಗ ಬಹಳ ಸಂಭಾವಿತ. ಭೋಳೇ ಸ್ವಭಾವದವ. ಮನೆಗೆಲಸದಲ್ಲಿ ಈಕೆಗೆ ನೆರವಾಗುತ್ತಿದ್ದ. ಅಂಥವನನ್ನೇಕೆ ಮನೆಯಿಂದ ಹೊರಡಿಸಿದಳೀಕೆ? ಈಕೆಗೆ ಮನೆಯಲ್ಲಿ ಯಾರೂ ಮಂದಿ ಬೇಡವೆ? ಈ ವೈದಿಕ ಬ್ರಾಹ್ಮಣರ ಹೆಣ್ಣಿನ ಸ್ವಭಾವವೇ ಹೀಗೆ. ಆದರೆ ಆ ಬಡಕನನ್ನು ಕಂಡರೆ ಎಷ್ಟು ಪ್ರೇಮ ಈಕೆಗೆ? ಅವನ ತಿನಸೇನು! ಅವನ ತೊಡಿಗೆಯೇನು! ಅವನದೆಲ್ಲ ಚೈನಿ! ಎಂದು ತಮ್ಮಷ್ಟಕ್ಕೆ ತಾವೇ ದೇಸಾಯರು ಅಂದು ಮತ್ತೆ ಮುಂದೆ ವಿಚಾರ ಬೆಳಿಸಿದರು. 'ನಮಗೆ ಹೊತ್ತಿಗೆ ಕೂಳು ಸಹ ಹಾಕದಾಕೆ ಅವನಿಗೇನು ಬೇಕೆಂದರೂ ಸಿದ್ಧಮಾಡಿಡುತ್ತಾಳೆ'! ದೇಸಾಯರಿಗೆ ಸ್ವಲ್ಪ ಸಂಶಯ ಬಂದಿತು. ಅವರ ಹಿಂದಿನ ನೆನಹುಗಳೆಲ್ಲ ಆ ಸಂಶಯವನ್ನು ಪೋಷಿಸಿದವು. ಶಿವರಾತ್ರಿ ದಿವಸ ಅವರ ಹೆಂಡತಿ ಕಾಲು ಹರಿಯುತ್ತವೆಂದು ಬಡಕನ ಕೈಯ್ಯಿಂದ ಕಾಲು ಹಿಚುಕಿಸಿಕೊಂಡಿದ್ದು—ಮೊನ್ನೆ ಹುಣ್ಣಿವೆ ದಿನ ಆಕೆ ಎರೆದುಕೊಳ್ಳುವಾಗ ಬಡಕನು ನೀರುಗ್ಗಿ ನಕ್ಕದ್ದು—ಅವರು ಒಮ್ಮೆ ಇಳಿಹೊತ್ತಿನಲ್ಲಿ ಅಕಸ್ಮಾತ್ತಾಗಿ ಹೊಲದಿಂದ ಬಂದು ಹಿತ್ತಲ ಬಾಗಿಲಿಂದ ಒಳಗೆ ಬಂದಾಗ ಇಬ್ಬರೂ ಒಂದೇ ಹಾಸಿಗೆಯ ಮೇಲೆ ಕುಳಿತಿದ್ದು ಎಲ್ಲವೂ ಚಲಚ್ಚಿತ್ರದಂತೆ ಅವರ ಕಣ್ಣಮುಂದೆ ಹಾಯ್ದುಹೋಯಿತು. ಕೂಡಲೆ ದೇಸಾಯರು ರಭಸದಿಂದ ಎದ್ದುನಿಂತು 'ಬಡಕ್ಯಾ! ಚಂಡಿ!' ಎಂದು ರೊಚ್ಚಿನಿಂದ ನುಡಿದರು. ಆದರೆ ರಾಯರು ಬಲು ಶಾಂತ ಸ್ವಭಾವದವರು. ಇಂದೇಕೊ ಅವರು ಹಸಿಬಿಸಿ ತಾಪದಿಂದ ಭಾವನೆಗಳ ಬಲೆಗೆ ಬಿದ್ದಿದ್ದರು. ಅವರ ವಿವೇಕ ತಕ್ಕ ಸಮಯಕ್ಕೆ ಅವರಿಗೆ ತಿಳಿಹೇಳಿತು. ಮುಂದೆ ತುಸು ಹೊತ್ತಿನ ಮೇಲೆ ಎದ್ದುನಿಂತೇ ವಿಚಾರ ಮಾಡುತ್ತಿದ್ದ ಅವರು, 'ಪ್ರತ್ಯಕ್ಷ ಪ್ರಮಾಣಗಳಿಲ್ಲದೆ ಹೀಗೆ ದುಡುಕುವದೇ?' ಎನ್ನುತ್ತ ನೆಲಕ್ಕೆ ಕುಕ್ಕುರಿಸಿದರು. ಆದರೂ ಊರೊಳಗಿನ ಜನರೇನು ಅನ್ನುತ್ತಿದ್ದಾರು? ನಮ್ಮ ಮಿತ್ರ

ರೇಕೆ ಈಗ ನಮ್ಮ ಮನೆಗೆ ಬರುವದಿಲ್ಲ? ಈ ಅಣ್ಣಾದೀಕ್ಷಿತರೂ ನಾವೂ ಲಂಗೋಟೀ ಗೆಳೆಯರು; ಅಂಥವರು ಸಹ ಮನೆಗೆ ಬರುವದನ್ನು ಕಡಿಮೆ ಮಾಡಿದರಲ್ಲ? ನನ್ನ ಸಂಶಯದಲ್ಲಿ ಸ್ವಲ್ಪಾದರೂ ತಥ್ಯವಿರಲಿಕ್ಕೇಬೇಕು. ಆದರೂ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡುವದು ಒಳಿತಲ್ಲ. ನೋಡೋಣ. ವಿಚಾರ ಮಾಡಿ ಮುಂದಿನ ಕೆಲಸಕ್ಕೆ ಕೈಹಾಕೋಣ.' ಹೀಗೆಂದು ಆಲೋಚಿಸುತ್ತ ದೇಸಾಯರು ಎದ್ದು ನಿಂತರು. ಮುಂದೆ ಸಂಜೆಯವರೆಗೂ ದೇಸಾಯರು ತೋಟದಲ್ಲಿಯೇ ಇದ್ದರು. ಸಂಜೆಗೆ ಊರ ಕಡೆಗೆ ಹೊರಡಲನುವಾದರು. ಅವರು ತೋಟದಿಂದ ಹೊರಬಿದ್ದು ಆಕಾಶದ ಕಡೆಗೆ ನೋಡಲು ಎಂಥ ಪ್ರತಿಭಾಶಾಲಿಗಳೂ ಅವನತಸ್ಥಿತಿಯಲ್ಲಿ ಶಾಂತಿಹೀನರಾಗುವಂತೆ ಪ್ರಭಾಕರನು ಪಶ್ಚಿಮಕ್ಕೆ ಇಳಿಯಹತ್ತಿ ನಿಸ್ತೇಜನಾಗಿದ್ದನು. ಆಗ ಶ್ರೀಪತಿರಾಯರು ಇನ್ನು ಇರುಳು ಬರುತ್ತದೆಂದು ಒತ್ತರದಿಂದ ಊರ ಮಾರ್ಗವನ್ನು ಹಿಡಿದರು. ಚಿಂತಾಗ್ನಿಯಿಂದ ಬೆಂದು ಬೆಂಡಾಗಿದ್ದರಿಂದಲೂ, ಹೊಟ್ಟೆಯಲ್ಲಿ ಅನ್ನವಿಲ್ಲದ್ದರಿಂದಲೂ, ಅವರ ಕಾಲುಗಳಲ್ಲಿ ನಡೆಯುವ ತ್ರಾಣವಿರಲಿಲ್ಲ. ಮುಖವು ಬಾಡಿತ್ತು. ಕಣ್ಣುಗಳು ಕಾಂತಿಹೀನವಾಗಿದ್ದವು. ಬಾಯಿಂದ ನಿಟ್ಟುಸಿರು ಬರುತ್ತಿತ್ತು. ಹೀಗೆ ಪ್ರಯಾಸದಿಂದ ಮಾರ್ಗಕ್ರಮಣ ಮಾಡುತ್ತ ಊರ ಹೊರಗಿರುವ ಮಾವಿನ ತೋಪಿಗೆ ಬಂದು, ಒಂದು ಮಾವಿನ ಮರದ ಬುಡದಲ್ಲಿ ಉಸುರ್ಗರೆದು ದೇಸಾಯರು ಕುಳಿತರು. ಅಷ್ಟರಲ್ಲಿ ನೆರೆಹಳ್ಳಿಗೆ ಹೋಗಿ ಅಲ್ಲಿಂದ ತಿರುಗಿ ಬೊಮ್ಮಗೇರಿಗೆ ಹೊರಟಿದ್ದ ಅಣ್ಣಾದೀಕ್ಷಿತರು ಅದೇ ಮಾರ್ಗವನ್ನು ಹಿಡಿದು ಬಂದರು. ಅವರು ಮಾವಿನ ಮರದ ಬುಡದಲ್ಲಿ ಮೋರೆ ಕೆಳಗೆ ಮಾಡಿಕೊಂಡು ಕುಳಿತ ದೇಸಾಯರನ್ನು ಕಂಡು ಅವರ ಸನಿಯಕ್ಕೆ ಬಂದು ಮಾತನಾಡಿಸಿದರು. ಅಣ್ಣಾದೀಕ್ಷಿತರು ಮತ್ತು ದೇಸಾಯರು ಚಿಕ್ಕಂದಿನಿಂದ ಕೂಡಿ ಆಡಿದವರು. ಇಬ್ಬರೂ ಕೂಡಿದಾಗ ತಮ್ಮ ತಮ್ಮ ಮನಸ್ಸನ್ನೆಲ್ಲ ಆಗಾಗ್ಗೆ ಒಬ್ಬರಮುಂದೊಬ್ಬರು ಬಿಚ್ಚಿಡುತ್ತಿದ್ದರು. ಅಣ್ಣಾ-ದೀಕ್ಷಿತರು ರಾಯರ ಮೋರೆ ಸಪ್ಪಗಾದದ್ದನ್ನು ಕಂಡು 'ಯಾಕ ಶ್ರೀಪತಿರಾಯ? ಒಡ್ಡಗಿಡ್ಡ ಆಗೇದೇನು?' ಎಂದು ಕೇಳಿದರು.

'ಇಲ್ಲ ಅಣ್ಣಾಪ್ಪ. ಇವತ್ಯಾಕೊ ಮನಸ್ಸಿಗೆ ಸಮಾಧಾನ ಇಲ್ಲ' ಎನ್ನುತ್ತ ನಿಟ್ಟುಸುರ್ಗರೆದರು ದೇಸಾಯರು.

ಮುಂಪ್ಪು ತರತದ ಮನುಷ್ಯಗ. ಇಷ್ಟು ದಿವಸ ನಿಶ್ಚಿಂತೀಲೆ ಇದ್ದಿ. ಈ ಒಡಕ್ಯಾ ನಿಮ್ಮ ಮನಿ ಹೊಕ್ಕಾಗಿನಿಂದ ಚಿಂತೀಸ ನಿನ್ನ ತಿಸಲಿಕ್ಕೆ ಹತ್ತ್ಯೇದ.. ನಾನೂ ಹಗಲೆಲ್ಲ ನಿಮ್ಮ ಮನ್ಯಾಗ ದಗ್ಗುದುಳೀತಿದ್ದೆ. ಆ ಒಡಕ್ಯಾನ ಹಿರೇತನ ಆದಂದಿನಿಂದ ನಿಮ್ಮ ಮನಿಗೆ ಬರಲಿಕ್ಕೆ ಸಂಕೋಚ ಆಗತದ..'

'ಹೌದ್ರೆಪಾ. ನೀವ ಹೇಳಿದ್ಹಾಂಗ ಆ ಒಡಕ್ಯಾ ನಮ್ಮ ಮನ್ಯಾಗ ಕಾಲು ಇಟ್ಟಂದಿನಿಂದ ಕಲಿಪ್ರವೇಶ ಆದಂತೆ ಆಗೇದ. ನಮ್ಮ ಪಾಲಿಗೆ ಮನಿ ಒಂದು ಅಡಿವಿ ಆದಹಾಂಗ ಆಗೇದ' ಎಂದು ಸಣ್ಣಮೋರೆ ಮಾಡಿ ದೇಸಾಯರು ಹೇಳಿದರು. ಆಗ ಅಣ್ಣಾದೀಕ್ಷಿತರು ದೇಸಾಯರಿಗೆ ಸಮಾಧಾನ ಹೇಳುವ ಧ್ವನಿಯಲ್ಲಿ ನುಡಿದರು. 'ಹೌದು, ದೇಸಾಯರೆ! ಪ್ರಪಂಚ ದೊಳಗ ಎಲ್ಲಾನೂ ಅನುಕೂಲ ಇದ್ದರs ಬರೋಬರಿ ನಡೀತದ. ಸ್ವಲ್ಪ ವ್ಯತ್ಯಾಸ ಆತು ಅಂದ್ರ ಎಲ್ಲಾನೂ ಕೆಟ್ಟಹೋಗತsದ....ನಿಮ್ಮ ಕುಟುಂಬ ಏನು ಜಾತ್ಯಾ ಕೆಟ್ಟಲ್ಲ; ದೊಡ್ಡ ಮನಸ್ಸಿನವರು. ಆ ಒಡಕ್ಯಾ ನಿಮ್ಮಲ್ಲಿ ಸೇರಿಕೊಂಡು ನಿಮ್ಮ ಕುಟುಂಬದ ಮನಸ್ಸು ಕೆಡಿಸಿಬಿಟ್ಟ್ಯಾನ. ನಿಮ್ಮ ಮನಿ ಸುದ್ದಿ ನಮಗ್ಯಾಕ ಬೇಕು? ಆದರೂ ಬಾಲ್ಯಸ್ನೇಹಿತ ಅಂತ ಹೇಳತೇನಿ. ಊರಾಗ ನಿಮ್ಮ ಮನೀ ಬಗ್ಗೆ ಏನೇನೋ ಮಾತಾಡತಾರ.'

ದೇಸಾಯರು ನಾಚಿಕೆಯಿಂದ ತಲೆಬಾಗಿಸಿ ನುಡಿದರು 'ಹಬ್ಬಿದ್ದರೂ ಹಬ್ಬಿದ್ದಾವು ಸುದ್ದಿ. ಎಲ್ಲಾ ನನ್ನ ಕೈಮೀರಿ ಹೋಗೇದ ಅಣ್ಣಪ್ಪಾ! ಇಷ್ಟು ದಿನ ಆ ಒಡಕ್ಯಾನು ಒಬ್ಬ ಮಗನ ಹಾಂಗ ಇದ್ದಾನ, ಆದಕ್ಕ ಅವನ ಮ್ಯಾಲ ಅಷ್ಟು ಪ್ರೀತಿ ಮಾಡತಾಳಂತ ನಂಬಿದ್ದೆ. ಆದರ ಈಗ ಅದು ವಿಪರೀತಕ್ಕ ಇಟ್ಟದಪಾ' ಎನ್ನುತ್ತ ಕಣ್ಣೀರು ಸುರಿಸಿದರು. ಅಳುವಾಗಲೇ ಒಂದು ನಿಷ್ಠುರವಾದ ನಿಶ್ಚಯ ಅವರ ಮೋರೆಯ ಮೇಲೆ ಒಡೆದು ಕಾಣಹತ್ತಿತು. ಕೂಡಲೆ 'ಇವತ್ತ ಆ ಮೂರ್ಖನ್ನ ಹೊರಗ ಹಾಕೇ ಎರಡನೆ ಕೆಲಸಾ ಮಾಡತೇನಿ ಅಣ್ಣಪ್ಪಾ' ಎಂದು ಏಳುವಷ್ಟರಲ್ಲಿ ಅಣ್ಣಾದೀಕ್ಷಿತರು ದೇಸಾಯರ ಕೈಹಿಡಿದು ಕೂಡಿಸಿ 'ಹಾ! ಶ್ರೀಪತಿರಾಯಾ! ಹೀಂಗ ದುಡುಕಿದರ ಕೆಲಸ ಕೆಟ್ಟು ಹೋದೀತು. ಆ ಒಡಕ್ಯಾ ಏನ ಕಡಿಮಿ ನೀರೊಳಗ ಮುಳಗೋ ಪೈಕಿ ಇಲ್ಲ. ಸಾಲ್ಯಾಗ ಮಾಸ್ತರ ಮ್ಯಾಲೆ ಎಂಥೆಂಥ ಕಾರಸ್ಥಾನ ಮಾಡಿದ

ನಿನಗ ಗೊತ್ತಿಲ್ಲs? ಮನೀ ಮರ್ಯಾದೆ ಹೋಗೋ ಹೊತ್ತು ಬಂದೀತು. ಹೂವು ಮಾರಿದ ಸ್ಥಳದಾಗ ಹುಲ್ಲು ಮಾರುವಂತೆ ಮಾತ್ರ ಮಾಡಬೇಡ.'

'ಹೌದಪಾ, ಅದೆಲ್ಲಾ ಖರೇ ಅದ. ಅಂವ ನಾಲ್ಕೈದು ವರ್ಷ ನಮ್ಮ ಮನ್ಯಾಗಿದ್ದು ಈಗ ಬೇರು ಬಿಟ್ಟುಗೊಂಡು ಕೂತಾನ. ನನ್ನ ಹೆಣತೀನು ಅಂವ ಹೇಳಿದ್ಹಾಂಗ ಕೇಳತಾಳ. ಹೀಂಗಾಗಿ ಅಂವನ್ನ ಹೊರಗ ಹಾಕೋದು ಒಲು ಕಠಿಣ ಕೆಲಸ ಆಗೇದ.'

ಅಣ್ಣಾದೀಕ್ಷಿತರು ದೇಸಾಯರ ಸೌಮ್ಯಸ್ವಭಾವವನ್ನು ಅರಿತವರು. ಕಾರಣ ಈ ವಿಷಯದಲ್ಲಿ ದೇಸಾಯರು ನಿಷ್ಠುರವಾಗಲಿಕ್ಕೇಬೇಕೆಂದು ಸ್ಪಷ್ಟ ವಾಗಿ ಹೇಳಿದರು. ಒಡಕನು ತನ್ನ ಕಾರಸ್ಥಾನದಿಂದ ದೇಸಾಯರಿಗೂ ಅವರ ಹೆಂಡತಿಗೂ ಕೂಡಿನಡೆಯುದಂತೆ ಮಾಡಬಹುದೆಂದು ಅವರಿಗೆ ಅನಿಸಿತು; ಅಂಥ ಪ್ರಸಂಗದಲ್ಲಿ ದೇಸಾಯರಿಗೆ ಎರಡನೆ ಮದುವೆ ಮಾಡಲಿಕ್ಕೆ ತಾವು ಸಿದ್ಧರಿದ್ದೇವೆಂದು ಅವರು ಸೂಚಿಸಿದರು. ಮರಳಿ ಹೋಗುವಾಗ ಅಣ್ಣಾ ದೀಕ್ಷಿತರು ದೇಸಾಯರಿಗೆ 'ಎಲ್ಲೀ ತನಕ ತಡಕೊಳ್ಳೋದು? ಎಲ್ಲಕ್ಕೂ ಘಟ್ಟಿಯಾಗಲಿಕ್ಕೇಬೇಕು. ಧೈರ್ಯದಿಂದ ಕೆಲಸಕ್ಕೆ ಕೈ ಹಾಕು' ಎಂದು ಹೇಳಿ ತಮ್ಮ ಮನೆಗೆ ಹೊರಟು ಹೋದರು.

---

## ೯

## ಬಂಜೆಯು ಬಸಿರು ಬಿಚ್ಚಿ ಬಿತ್ತು....

ದೇಸಾಯರು ಹೆಂಡತಿಯ ಮೇಲೆ ಸಿಟ್ಟಾಗಿ ಊಟಮಾಡದೆ ಮನೆ ಯನ್ನು ಬಿಟ್ಟು ಹೊರಗೆ ಹೋದ ಸ್ವಲ್ಪಹೊತ್ತಿನಲ್ಲಿಯೆ ಒಡಕಣ್ಣನು ಮನೆಗೆ ಬಂದನು. ಆಗ ಚಂದ್ರಾವತಿಬಾಯಿಯವರು ಅವನಿಗೆ ಮನೆಯಲ್ಲಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಒಡಕಣ್ಣನು 'ನೀವು ಅಷ್ಟು ದೀರ್ಘಕ್ಕೆ ಹೋಗಬಾರದಾಗಿತ್ತು. ಆದರೂ ನೋಡೋಣ, ದೇವರಿದ್ದಾನೆ.' ಎಂದು ಸಮಾಧಾನ ಹೇಳಿದನು. ಬಳಿಕ ಚಂದ್ರಾವತಿಬಾಯಿಯವರು ಒಡಕನ

ಸಂಗಡ ಚಕ್ಕಂಪವಾಗಿ ತಿಂದು, ವೈತೊಳಕೊಂಡು ಅಡಿಗೆಮಾಡಿದರು. ಎರಡು ಮೂರು ತಾಸುಗಳವರೆಗೆ ದೇಸಾಯರ ದಾರೀ ಕಾಯ್ದರು. ಹೊತ್ತು ಮುಳುಗಿದರೂ ದೇಸಾಯರು ಬಾರದ್ದರಿಂದ ಚಂದ್ರಾವತಿಬಾಯಿಯವರು ಗಾಬರಿಯಾದರು. ಅವರು ಒಡಕಣ್ಣನಿಗೆ ಊಟಕ್ಕೆ ಹಾಕಿ, ದೇಸಾಯರು ಎಲ್ಲಿರುವರೆಂಬುದನ್ನು ನೋಡಿಬರಲಿಕ್ಕೆ ಕಳುಹಿದರು. ಕೂಡಲೆ ಒಡಕಣ್ಣನು ಮನೆಯಿಂದ ಹೊರಬಿದ್ದು ಓಣಿಯಲ್ಲಿ ಅಲ್ಲಲ್ಲಿ ವಿಚಾರಿಸಿ, ದೇಸಾಯರು ತೋಟದ ಕಡೆಗೆ ಹೋಗಿರುವರೆಂಬದನ್ನು ತಿಳಿದುಕೊಂಡು, ಒಳಹಾದಿಯಿಂದ ನೆಟ್ಟಗೆ ತೋಟಕ್ಕೆ ಹೋದನು. ಅಷ್ಟರಲ್ಲಿ ದೇಸಾಯರು ದೊಡ್ಡಮಾರ್ಗ ದಿಂದ ಊರಕಡೆಗೆ ತಿರುಗಿದ್ದರು. ಒಡಕಣ್ಣನು ಅವರ ಹಿಂದಿನಿಂದ ಬರುತ್ತಿ ರಲು ದೇಸಾಯರು ಮಾವಿನ ಮರದ ಕೆಳಗೆ ಅಣ್ಣಾದೀಕ್ಷಿತರೊಂದಿಗೆ ಮಾತ ನಾಡುತ್ತ ಕುಳಿತಿರುವದನ್ನು ಕಂಡನು. ಕೂಡಲೆ ಅವನು ಅಡ್ಡದಾರಿಯಿಂದ ಬಂದು, ಸನಿಯದ ಒಂದು ಬೇಲಿಯ ಮರೆಗೆ ಅಡಗಿಕೊಂಡು ದೇಸಾಯರೂ ಅಣ್ಣಾದೀಕ್ಷಿತರೂ ಆಡುವ ಮಾತುಗಳನ್ನೆಲ್ಲ ಚಿತ್ತಗೊಟ್ಟು ಕೇಳಿಕೊಂಡು, ಅವರು ಮನೆಯ ಕಡೆಗೆ ಹೊರಡುವ ಯೋಚನೆಯಲ್ಲಿರುವಾಗ, ಅಲ್ಲಿಂದ ಹೊರಟು ಲಗುಬಗೆಯಿಂದ ಮನೆಗೆ ಬಂದನು. ಚಂದ್ರಾವತಿಬಾಯಿಯವರು 'ಅವರೆಲ್ಲಿದ್ದಾರ? ಮನೀಗೆ ಬಂದರೇನು?' ಎಂದು ಆತುರತೆಯಿಂದ ಕೇಳಿ ದರು. 'ಅವರೆಲ್ಲಿ ಹೋಗುತ್ತಾರೆ? ಊರ ಹೊರಗಿನ ಆ ಮಾವಿನ ತೋಪಿ ನೊಳಗೆ ಅವರ ಸ್ನೇಹಿತರು ಕೂಡಿದ್ದರು. ಈಗ ಬರಬಹುದು. ಆದರೆ ಮುಂ ದಿನ ಪ್ರಸಂಗ ಮಾತ್ರ ಬಹಳ ಕಠಿಣವಿದೆ. ಏನಾದರೂ ಯುಕ್ತಿಯನ್ನು ಮಾಡದಿದ್ದರೆ ಸ್ವಲ್ಪ ದಿನಗಳಲ್ಲಿ ನಾನೂ ನೀವೂ ಕೂಡಿಯೇ ಮನೆಯನ್ನು ಬಿಟ್ಟು ಹೊರಡಬೇಕಾಗುತ್ತದೆ.' ಎಂದು ಒಡಕಣ್ಣನು ಹೇಳಿದನು. ಚಂದ್ರಾ ವತಿಬಾಯಿಯವರು ಭೀತಿಯಿಂದ ಕಣ್ಣರಳಿಸಿ ಕೇಳಿದರು, 'ಅದೇನು ಪ್ರಸಂಗ ಮತ್ತೆ?' ಎಂದು.

ಒಡಕಣ್ಣ ತನ್ನ ಯುಕ್ತಿಯ ಗೆಲವಿನಲ್ಲಿ ಮುಗುಳುನಗೆಯಿಂದ ನುಡಿದ. ಏನೋ ನಮ್ಮ ಮೇಲೆ ಇವತ್ತು ದೇವರ ಅನುಗ್ರಹವಿತ್ತು. ಅವರ ಆಲೋ ಚನೆಗಳೆಲ್ಲಾ ನನಗೆ ಗೊತ್ತಾದವು. . . . ದೇಸಾಯರಿಗೆ ಇನ್ನೊಂದು ಲಗ್ನಾ ಮಾಡಿ ನಿಮ್ಮನ್ನೂ ನನ್ನೂ ಕೂಡಿಯೇ ಮನೆಬಿಟ್ಟು ಹೊರಗೆ ಹಾಕಬೇಕೆಂದು

ದೀಕ್ಷಿತರು ತೂಕ ತಗೆದಿದ್ದಾರೆ. ನಾನು ಬರುವ ಮುಂಚೆ ದೇಸಾಯರನ್ನು ಉಬ್ಬಿಸಿ ಖಮ್ಮಗೆ ತಿಂದುಹೋಗುತ್ತಿದ್ದರು. ಅದೆಲ್ಲ ಈಗ ಕಟ್ಟಾಗಿದೆ; ಅದಕ್ಕೇ ನನ್ನ ಮೇಲೆ ರಕ್ತ ಕಾರುತ್ತಾರೆ! ಅವರ ಯುಕ್ತಿಗೆ ನಾನು ಮಣಿಯುತ್ತೇನೇನು? ನೀವು ಮಾತ್ರ ನಾನು ಹೇಳಿದಂತೆ ನಡೆಯಬೇಕು. ಅಂದರೆ ಇಬ್ಬರೂ ಪಾರಾಗಬಹುದು.'

ಚಂದ್ರಾವತಿಬಾಯಿಯವರು ಎರಡನೇ ಮದುವೆಯ ಸುದ್ದಿ ಕೇಳಿ ಮುಂದುಗಾಣದಾದರು. 'ನಿನ್ನ ಬಿಟ್ಟು ನನಗ್ಯಾರು ಗತಿ ಇದ್ದಾರಪಾ' ಎಂದು ಕಣ್ಣೀರು ಸುರಿಸಹತ್ತಿದರು. ನಿರಾಧಾರವಾದ ಲತೆಯು ಮುಳ್ಳು ಬೇಲಿಗೆ ಅವಿತುಕೊಳ್ಳುವಂತೆ, ಹತಾಶರಾದ ಚಂದ್ರಾವತಿಬಾಯಿಯವರು ಒಡಕಣ್ಣಾನ ವಿಚಾರತಂತ್ರಗಳಿಗೇ ಜೋತುಬಿದ್ದರು.

ಒಡಕಣ್ಣಾನು ತನ್ನನ್ನೇ ನಂಬಿದ ಚಂದ್ರಾವತಿಬಾಯಿಯವರ ಕಿವಿಯಲ್ಲಿ ತನ್ನ ಗುರುಮಂತ್ರವನ್ನೂದಿದನು. 'ಎಲ್ಲವನ್ನು ಯುಕ್ತಿಯಿಂದ ಸಾಧಿಸ ಬೇಕು. ಹೊಟ್ಟೆಯೊಳಗಿನ ಸಿಟ್ಟು ಹೊರಗೆಡವಬಾರದು. ಕೆಲಸ ಸಾಧಿಸ ಬೇಕಾದರೆ ನೀವು ಮೊದಲಿಗೆ ಮಾನ, ಮರ್ಯಾದೆ, ನಾಚಿಕೆ ಇವೆಲ್ಲವನ್ನು ಬಿಟ್ಟುಬಿಡಬೇಕು.' ಗುರುಶಿಷ್ಯರ ಜೋಡಣೆಯೇ ಅಷ್ಟು ಸರಿಯಾದದ್ದು! 'ನಾ ಏನು? ಹೆಂಗಸು. ಪ್ರಸಂಗ ಬಂದರ ಯಾತಕ್ಕೂ ಹಿಂಜರಿಯೋಕೆಲ್ಲ.' ಎಂದು ಥಟ್ಟನೆ ಚಂದ್ರಾವತಿಬಾಯಿಯವರು ಉತ್ತರವನ್ನಿತ್ತರು. ಒಡಕನು ಚಂದ್ರಾವತಿಬಾಯಿಯವರಿಗೆ ತನ್ನ ಯುಕ್ತಿಪ್ರಯುಕ್ತಿಗಳನ್ನೆಲ್ಲ ತಿಳಿಸಿಹೇಳಿ, ತಾನು ಮದ್ದೂರಿಗೆ ಹೋಗುವೆನೆಂದು ಹೊರಡಲನುವಾದನು. ಅದನ್ನು ಕೇಳಿ ಚಂದ್ರಾವತಿಬಾಯಿಯವರು, ತಮ್ಮ ಗುರುವು ಹೋದರೆ ತಮ್ಮ ಗತಿ ಯೇನು? ತಮಗೆ ಮುಂದಿನ ಪ್ರಸಂಗಗಳಲ್ಲಿ ಯುಕ್ತಿಯನ್ನು ಹೇಳುವವ ರಾರು? ಎಂದು ದುಃಖಿಸಹತ್ತಿದರು. ಆಗ ಒಡಕನು ತಾನು ತಿರುಗಿ ಬರುವ ಯುಕ್ತಿಯೂ ಬಾಯಿಯವರ ಬಸಿರು ಬಯಕೆಗಳಲ್ಲಿಯೇ ಇದೆಯೆಂದು ತಿಳಿಸಿ ದೇಸಾಯರು ಬಂದ ಸುಳಿವನ್ನು ತಿಳಿದು ಹಿತ್ತಲಬಾಗಿಲಿಂದ ಹೊರಬಿದ್ದು ಹೋದನು.

ದೇಸಾಯರು ಮನೆಯೊಳಗೆ ಬಂದ ಕೂಡಲೆ, ಚಂದ್ರಾವತಿಬಾಯಿ ಯವರು ಒಳಗಿನಿಂದ ಕಣ್ಣೀರು ಸುರಿಸುತ್ತ ಬಂದು, ಅವರ ಪಾದಗಳನ್ನು

ಹಿಡಿದು ಬಿಕ್ಕಿಬಿಕ್ಕಿ ಅಳಹತ್ತಿದರು. “ ನನ್ನ ತಪ್ಪಾಗೇದ . . . ಕ್ಷಮಾ . . . ಮಾಡಿರಿ . . . ಮುಟ್ಟಾಗಿ ದೀಡ ತಿಂಗಳಾತು. . . .ಬಯಕಿ ಆಗಲಿಕ್ಕೆ ಹತ್ಯಾವ. .' ಹೆಂಡತಿಯಷ್ಟೇ ಗಂಡನಿಗೂ ಮಕ್ಕಳ ಹುಚ್ಚು. ಬಯಕೆಯ ಮಾತು ಕೇಳಿ ದೇಸಾಯರ ಮೈಯ್ಯೆಲ್ಲ ಆನಂದದಿಂದ ಸ್ಫುರಣವಾಗಹತ್ತಿತು. ದೇಸಾಯರು ಬಾಗಿ, ಹೆಂಡತಿಯನ್ನು ಕೈಹಿಡಿದು ಎಬ್ಬಿಸಿ ಕುಳ್ಳಿರಿಸಿದರು. ತಮ್ಮ ಬಲೆಗೆ ರಾಯರು ತೀವ್ರ ಸಿಕ್ಕದ್ದನ್ನು ತಿಳಿದು ಬಾಯಿಯವರು ಮತ್ತೆ ಪ್ರಾರಂಭ ಮಾಡಿದರು. ‘ ಇವತ್ತ ನನಗ ಪಿತ್ತೆದ್ದಿತ್ತು; ಆ ಸಂಕಟದಾಗ ನಿಮಗೇನೇನೋ ಮಾತಾಡಿದೆ. . . ಇವತ್ತಿನ ತನಕ ನಿಮಗೊಮ್ಯಾರೆ ತಿರುಗಿ ಉತ್ತರ ಕೊಟ್ಟೇನೆ ? . . . ನಿಮ್ಮನ್ನ ಬಿಟ್ಟರ ನನಗೆ ಯಾರು ಗತಿಯಿದ್ದಾರ ?.. ನೀವು ಉಪಾಸ ಹೋದ್ರೀ ಅಂತ ನಾನೂ ಉಪಾಸ ಬಿದ್ದೇನಿ. ಮಾಡಿದ ಅಡಿಗಿ ಹಾಂಗೆ ಕೂತದ. ನೀವು ಉಂಡ್ರ ನಾನೂ ಊಟಾ ಮಾಡತೇನಿ. ಇಲ್ಲದ್ರ ನಾ ಎಲ್ಲ್ಯಾರ ಭಾವೀ ಕೆರೀ ಪಾಲು ಆಗಿ ಹೋಗತೇನಿ ’ ಎಂದು ದೀನಸ್ವರದಿಂದ ಹೇಳಿಕೊಂಡರು. ಮರುಳ ದೇಸಾಯರ ಮನಸ್ಸೆಲ್ಲ ಕರಗಿ ನೀರಾಗಿ ಹೋಯಿತು. ಅವರು ಹೆಂಡತಿಗೆ ಸಮಾಧಾನ ಹೇಳಿ, ಒಳಕ್ಕೆ ಹೋಗಿ ತಮ್ಮ ಸಂಧ್ಯಾವಂದನೆಯನ್ನು ಮುಗಿಸಿ ಭೋಜನಕ್ಕೆ ಕುಳಿತರು. ಸಾತ್ವಿಕಸ್ವಭಾವದ ದೇಸಾಯರು ಹೆಂಡತಿಯೊಡನೆ ಸರಸ-ಸಲ್ಲಾಪಗಳನ್ನಾಡುತ್ತ ಭೋಜನ ಮಾಡಹತ್ತಿದರು.

ಮುಂದೆ ತುಸು ಹೊತ್ತಿನ ಮೇಲೆ ಅಣ್ಣಾದೀಕ್ಷಿತರು ತಮ್ಮ ಉಪದೇಶದ ಪರಿಣಾಮವು ದೇಸಾಯರ ಮನೆಯಲ್ಲಿ ಎಷ್ಟರ ಮಟ್ಟಿಗೆ ಕಂಡು ಬರಬಹುದೆಂದು ನೋಡಲಿಕ್ಕೆ ಹೋದರು. ಆಗ ದೇಸಾಯರು ತಮ್ಮ ಹೆಂಡತಿಯ ಸಂಗಡ ಸಂತೋಷದಿಂದ ಊಟಮಾಡುತ್ತ ಕುಳಿತುದನ್ನು ನೋಡಿ ಅವರಿಗೆ ನಗೆ ಬಂದಿತು. ಅವರು ದೇಸಾಯರನ್ನು ಕುರಿತು ‘ ಏನ ದೇಸಾಯರ! ಗಂಡಹೆಂಡರ ಜಗಳ ಉಂಡು ಮಲಗೋತನಕಾ. .’ ಎಂದು ತಮ್ಮ ಹಳ್ಳಿಯ ರೀತಿಯಲ್ಲಿ ನುಡಿದು ತಮ್ಮ ಮನೆಯ ಮಾರ್ಗ ಹಿಡಿದರು. ಹೋಗಹೋಗುತ್ತ ಅವರು ದೇಸಾಯರ ಮೇಲಿನ ಸಿಟ್ಟಿನಿಂದ ಒಟಗುಟ್ಟ ಹತ್ತಿದರು ‘ ಇಂಥ ಮರಳು ಮನುಷ್ಯಾ ಆ ದುಷ್ಟ ಹೆಂಗಸಿನ ಕೈಯ್ಯಾಗ ಸಿಕ್ಕರ ಬಿಟ್ಟಾಳೆ ಆಕಿ ? ಇವನ್ನ ಮಂಗ್ಯಾನ ಕುಣಿಸಿದ್ಹಾಂಗ ಕುಣಿಸತಾಳ. ಹೇಡೀ

ಬೆನ್ನ ಕಟ್ಟಬಾರದಂತ, ಹೆಣದ ಗೆಳೆತನ ಮಾಡಬಾರದಂತ! ಹ್ಯಾಂಗ ಆತು ನಾವು ಇವತ್ತು ಅವರಿಗೆ ಉಪದೇಶ ಮಾಡಿದ್ದು!' ದೀಕ್ಷಿತರು ಕತ್ತಲೆಯಲ್ಲಿ ಕಲ್ಲನ್ನು ಎಡವಿದರು. ಸಿಟ್ಟಿನಿಂದ 'ಸಾವಿರ ಕುದುರಿ ಸರದಾರ, ಮನೀ ಹೆಂಡತೀಗ ಪಿಂಜಾರ. ಹ್ಯಾಂಗಿದ್ದರೂ ಅವರೂ ಅವರೂ ಎಲ್ಲಾ ಒಂದೇ. ನಾವು ನಡುವೆ ನಿಷ್ಠುರ ಮಾತನಾಡಿದವರೆ ಖೊಟ್ಟಿ ಆಗತೇವಿ. ಅದೇನೋ ಹೇಳತಾರಲ್ಲ, ಊರ ಉಸಾಬರೀ ಮಾಡಿ ಉಣದ ಕೆಟ್ಟರಂತ' ಎನ್ನುತ್ತ ತಾವೂ ಊಟ ಮಾಡುವ ಗಡಿಬಿಡಿಯಿಂದ ತಮ್ಮ ಮನೆಯನ್ನು ಹೊಕ್ಕರು. ಮರುದಿನ ಅಣ್ಣಾದೀಕ್ಷಿತರಿಗೆ ಒಡಕನು ದೇಸಾಯರ ಮನೆ ಬಿಟ್ಟು ಹೋದ ನೆಂದು ಯಾರೋ ಹೇಳಿದರು. ಆಗ ದೀಕ್ಷಿತರು, 'ಅಂವ ಎಲ್ಲೆ ಹೋಗಲಿಕ್ಕೆ ಕೂತಾನ! ಏನಾದರೊಂದು ತಂತ್ರಾ ಮಾಡಿ ಮತ್ತ ಈ ದೇಸಾಯಿನ್ನ ಹಾಳ ಮಾಡಲಿಕ್ಕೆ ಬಂದs ಬರತಾನ' ಎಂದರು.

ಅಂದು ರಾತ್ರಿ ದೇಸಾಯರು ಊಟ ಮಾಡಿದ ಬಳಿಕ, ಚಂದ್ರಾವತಿ ಬಾಯಿಯವರೂ ಊಟ ಮಾಡಿ, ಲಗುಬಗೆಯಿಂದ ಎಲ್ಲ ಕೆಲಸಗಳನ್ನು ಮುಗಿಸಿ, ಕೋಣೆಗೆ ಹೋಗಿ ದೇಸಾಯರ ಹಾಸಿಗೆಯನ್ನು ಹಾಸಿದರು. ದೇಸಾಯರು ವೀಳ್ಯವನ್ನು ಮೆದ್ದು ಕಾಲು ಚಾಚಿ ಮಲಗಿರಲು, ಚಂದ್ರಾವತಿ ಬಾಯಿಯವರು ಅವರ ಪಾದಸೇವೆಯನ್ನು ಮಾಡುತ್ತ ಮಾತಾಡಿದರು. "ಇವತ್ತಿನ ದಿವಸ ನನಗೊಂದು ದೆವ್ವ ಒಡಿದಿತ್ತು. ಕುಲಸ್ವಾಮಿ ವೆಂಕಟ– ರಮಣ ಪಾರು ಮಾಡಿದ. ನಿಮ್ಮನ್ನ ಕರೀಲಿಕ್ಕಾದರೂ ಕಳಿಸಬೇಕೆಂದರೆ ಆ ಒಡಕನೂ ನನ್ನ ಮ್ಯಾಲೆ ಸೆಟಗೊಂಡು ಇವತ್ತ ಮುಂಜಾನೆ ತಮ್ಮ ಊರಿಗೆ ಹೋಗಿ ಬಿಟ್ಟಾನ. ನಿಮ್ಮ ಹೊರ್ತು ನನಗ್ಯಾರು ಗತಿ ಇದ್ದಾರ? ನೀವs ತಿಳದು ನೋಡ್ರಿ." ಹೆಂಡತಿಯ ಮೃದುವಚನಗಳಿಂದ ದೇಸಾಯರಿ ಗಾದ ದುಃಖವು ಶಾಂತವಾಯಿತು; ಅದುದೆಲ್ಲವನ್ನು ಅವರು ಮರೆತು ಬಿಟ್ಟರು.

ಮರುದಿನ ಚಂದ್ರಾವತಿಬಾಯಿಯವರು ಬೆಳಗಾಗುವದರೊಳಗೆದ್ದು ದೇಸಾಯರಿಗೆ ತಕ್ಕ ಉಪಚಾರಗಳನ್ನು ಮಾಡಿದರು. ಒಯ್ಯಾರದಿಂದ ಕೂಡಿದ ಒಳ್ಳೆಯ ಮಾತುಗಳನ್ನು ಆಡಹತ್ತಿದರು. ಹೊತ್ತಿಗೆ ಸರಿಯಾಗಿ ದೇಸಾಯರಿಗೆ ಊಟವಾಯಿತು. ಆಮೇಲೆ ತಾವು ಊಟಕ್ಕೆ ಕುಳಿತು

ಒಂದೆರಡು ತುತ್ತು ಉಂಡು ಓಕರಿಸುತ್ತ, 'ಬಯಕೆ' ಯೆಂದು ತುಂಬಿದ ಎಲೆಯನ್ನು ಬಿಟ್ಟು ಹಾಗೆಯೆ ಹೋದರು. ಅಂದು ತಮಗೆ ಅನ್ನ ಹೋಗ ಲಿಲ್ಲವೆಂದು ಒಂಬತ್ತು ತಾಸಿನ ಸುಮಾರಕ್ಕೆ ಉಪಹಾರದ ಪದಾರ್ಥಗಳನ್ನು ಸಿದ್ಧಪಡಿಸಿ ದೇಸಾಯರನ್ನು ಎಬ್ಬಿಸಿದರು. ದೇಸಾಯರು ಹಸಿವೆಯಿಲ್ಲ ವೆಂದು ಹೇಳಲು, "ನೀವು ತಿನ್ನದಿದ್ದರೆ ನಾನೂ ತಿನ್ನುವದಿಲ್ಲ" ಎಂದು ನುಡಿದು, ಜುಲುಮೆಯಿಂದ ಅವರ ಉಪಹಾರ ಮಾಡಿಸಿದರು. ತಮ್ಮ ಪತ್ನಿಯು ತಮ್ಮ ಮೇಲೆ ವಿಶೇಷ ಪ್ರೇಮಾದರಗಳನ್ನು ಮಾಡುವದನ್ನು ನೋಡಿ, ನಿನ್ನೆಯ ಪ್ರಸಂಗದಿಂದ ಅವಳಿಗೆ ಪಶ್ಚಾತ್ತಾಪವಾಗಿ ಬುದ್ಧಿ ಬಂದಿರಬೇಕೆಂದು ಅವರು ತಿಳಿದರು. ಒಡಕನು ತಾನಾಗಿಯೇ ತನ್ನ ಊರಿಗೆ ಹೋದದ್ದನ್ನು ಕಂಡು, ಕುಲಸ್ವಾಮಿ ವೆಂಕಟರಮಣನೇ ತಮ್ಮ ಮೇಲೆ ಅಪವಾದ ಬರದಂತೆ ಅವನನ್ನು ಕಳಿಸಿದನೆಂದು ಭಾವಿಸಿದರು.

ಚಂದ್ರಾವತಿಬಾಯಿಯವರು ತಾವು ಗರ್ಭಿಣಿಯಾಗಿರುವರೆಂದು ಹಿಂದೆ ದೇಸಾಯರಿಗೆ ತಿಳಿಸಿದರಷ್ಟೆ. ಈ ಸುದ್ದಿಯನ್ನು ಅವರು ತಮ್ಮ ಒಕ್ಕಲಗಿತ್ತಿ ಯಾದ ಸಾವಕ್ಕನಿಗೂ ಹೇಳಿದರು. ಆಕೆಯಿಂದ ಸುದ್ದಿಯು ಬೊಮ್ಮಗೇ ರಿಯ ತುಂಬ ಹಬ್ಬಿತು. ಆಗ ಓಣಿಯೊಳಗಿನ ಹೆಣ್ಣುಮಕ್ಕಳು ಏನಾದ ರೊಂದು ನೆವ ತೆಗೆದು ದೇಸಾಯರ ಮನೆಗೆ ಬಂದು, ಅವರ ಹೆಂಡತಿ ಬಸುರಿರು ವರೋ ಇಲ್ಲೋ ಎಂಬುದನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಹತ್ತಿದರು. ಆಗ ಚಂದ್ರಾವತಿಬಾಯಿಯವರು, ಎರಡು ತಿಂಗಳಾದ ಮೇಲೆ ತಮ್ಮ ತಳ-ಹೊಟ್ಟೆ ಮುಂದೆ ಬರುವ ಬಗೆ ಹೇಗೆ ? ಸ್ವಲ್ಪ ದಿವಸಗಳಲ್ಲಿ ತಮ್ಮ ಗುಟ್ಟೆಲ್ಲಾ ರಟ್ಟಾಗಿ ಊರಲ್ಲೆಲ್ಲ ನಗೆಗೇಡಾಗುವ ಪ್ರಸಂಗವು ತಮಗೆ ಬರಬಹುದಲ್ಲ! ಎಂದು ಚಿಂತಿಸಹತ್ತಿದರು. ತಿಂದು ಕೊಬ್ಬಬೇಕೆಂದರೆ ಬಯಕೆಯೂ ಮನೆ ಗೆಲಸಗಳೂ ಅವರ ಬೆನ್ನುಹತ್ತಿದ್ದವು. ಬಯಕೆಯ ನೆವದಿಂದ ಅವರು ಊಟ ವನ್ನು ಕಡಿಮೆ ಮಾಡಿದರು. ಕದ್ದು ಮುಚ್ಚಿ ಅನೇಕ ತರದ ತಿಂಡಿಗಳನ್ನು ತಿಂದು ತಿಂದು ಸ್ವಲ್ಪ ಪುಷ್ಟರಾದರು; ಆದರೂ ಹೊಟ್ಟೆಯು ಮುಂದೆ ಬಂದಂತೆ ತೋರಲಿಲ್ಲ. ಆಗ ಅವರು ಗಾಬರಿಯಾದರು. ಒಡಕಣ್ಣನನ್ನು ತಮ್ಮಲ್ಲಿಗೆ ಕರೆಯಿಸಿದ ಹೊರತು ತಮ್ಮ ಬಸಿರು ಸ್ಥಿರವಾಗದೆಂದು ಅವರು ನಿಶ್ಚಯಿಸಿದರು. ಬಳಿಕ ಅವರು ಮೂರು ದಿವಸಗಳ ವರಗೆ ಊಟವನ್ನೇ

ಮಾಡಲಿಲ್ಲ. ಇದನ್ನು ತಿಳಿದು ದೇಸಾಯಿರು ತರತರದ ಹಣ್ಣು-ಹಂಪಲ ಗಳನ್ನು ತರಿಸಿಕೊಟ್ಟರು. ಆದರೂ ಅವರು ಉಕ್ಕಿಂದು ಕೈಕಾಲು ಎಳೆಯುತ್ತ ಮನೆಗೆಲಸಗಳನ್ನು ಮಾಡಹತ್ತಿದರು. ಹೆಂಡತಿಯ ಸ್ಥಿತಿಯನ್ನು ನೋಡಿ ದೇಸಾಯಿರಿಗೆ ಕನಿಕರ ಹುಟ್ಟಿತು. ಆಗ ಅವರು 'ನೀನು ನಿತ್ರಾಣಳಾಗಿದ್ದೀ; ತಿಂಗಳೊಪ್ಪತ್ತು ಮನೆಯಲ್ಲಿ ಅಡಿಗೆಮಾಡಲಿಕ್ಕೆ ಅಡಿಗೆಯುವನನ್ನು ಕರೆಯಿಸ ಬೇಕೆಂದು ಮಾಡಿರುತ್ತೇನೆ' ಎಂದು ತಮ್ಮ ಹೆಂಡತಿಗೆ ತಿಳಿಸಿದರು. ಆಗ ಚಂದ್ರಾವತಿಬಾಯಿಯವರು ಅಡಿಗೆಯ ಗಂಡಸರಿಂದ ತನಗೇನೂ ಉಪ-ಯೋಗವಾಗುವದಿಲ್ಲವೆಂದೂ, ಮುದ್ದೂರಲ್ಲಿದ್ದ ಒಡಕಣ್ಣನನ್ನೂ ಅವನ ತಾಯಿಯನ್ನೂ ಒಂದು ತಿಂಗಳೊಪ್ಪತ್ತು ಕರೆಕಳಿಸಬೇಕೆಂದೂ ತಿಳಿಸಿದರು. ಅದಕ್ಕೆ ದೇಸಾಯಿರು ನಿರ್ವಾಹವಿಲ್ಲದೆ ಒಪ್ಪಿ ಗೋಪಾಳರಾಯರಿಗೆ ಅವರ ಹೆಂಡತಿಯನ್ನು ಕಳುಹಿಸುವದರ ಸಲುವಾಗಿ ಪತ್ರವನ್ನು ಬರೆದು, ಮುದ್ದೂರಿಂದ ಕರೆಯಿಸಿಕೊಂಡರು; ಅವರ ಸಂಗಡ ಒಡಕನೂ ಆಗಂತುಕನಾಗಿ ಬಂದಿದ್ದನು. ಶ್ರೀಪತಿರಾಯರಿಗೆ ಒಡಕನನ್ನು ಕಂಡರೆ ಸಿಟ್ಟು ಬೆಂಕಿ; ಆದರೆ ಅವರು ಉಪಾಯಗಾಣದಾದರು. ಹೇಗಾದರೂ ಒಡಕನನ್ನು ಮನೆಯಲ್ಲಿ ಇರಗೊಟ್ಟರು.

ಒಡಕಣ್ಣನು ಬಂದದ್ದರಿಂದ ಚಂದ್ರಾವತಿಬಾಯಿಯವರಿಗೆ ಹಿಡಿಸಲಾರ ದಷ್ಟು ಆನಂದವಾಯಿತು. ಮರುದಿವಸ ಅವರು ಒಡಕಣ್ಣನನ್ನು ಗುಪ್ತ ವಾಗಿ ಕರೆದು 'ನೀನು ಹೇಳಿದಂತೆ ಮಾಡಿದ್ದರಿಂದ ಅವರಂತೂ ನನ್ನ ಬಲೆ ಯಲ್ಲಿ ಸಿಕ್ಕಿರುವರು. ಬಸುರಾಗಿರುವದನ್ನು ತೋರಿಸುವದು ನನಗೆ ಅಸಾಧ್ಯ ವಾಗಿದೆ. ಮೂರು ತಿಂಗಳಾದರೂ ಹೊಟ್ಟೆ ಕಾಣಿಸುವದಿಲ್ಲೆಂದು ಊರೊಳ ಗಿನ ಹೆಣ್ಣುಮಕ್ಕಳು ಕುಚುಕುಚು ಮಾತಾಡಹತ್ತಿದ್ದಾರೆ. ನನಗೆ ತಳ ಹೊಟ್ಟೆಯು ಒಡೆದು ಕಾಣುವಂತೆ ಏನು ಯುಕ್ತಿ ಮಾಡಬೇಕು, ಹೇಳು?' ಎಂದು ಕೇಳಿದರು. ಅದಕ್ಕೆ ಒಡಕಣ್ಣನು ಅವರಿಗೆ ನಾಲ್ಕಾರು ದಿವಸಗಳ ವರೆಗೆ ಮನೆಬಿಟ್ಟು ಹೊರಬೀಳಬೇಡಿರೆಂದೂ, ಅಷ್ಟರಲ್ಲಿ ಅವರಿಗೆ ಹೊಟ್ಟೆಯು ಬರುವ ಹಂಚಿಕೆಯನ್ನು ತಾನು ಮಾಡುವೆನೆಂದೂ ಹೇಳಿ ಸಮಾಧಾನಪಡಿಸಿದನು.

ಮುಂದೆ ನಾಲ್ಕೈದು ದಿನಗಳ ಮೇಲೆ ಒಂದು ದಿನ ಇಳಿಹೊತ್ತಿನಲ್ಲಿ ಒಡಕಣ್ಣನು ಅರಿವೆಯಲ್ಲಿ ಏನನ್ನೋ ಸುತ್ತಿಕೊಂಡು ತಂದು ಬಾಯಿಯವರ

ಕೋಣೆಯಲ್ಲಿ ಇಟ್ಟನು. ಅದೇನೆಂದು ಬಾಯಿಯವರು ವಿಚಾರಿಸಲಾಗಿ, ಒಡಕಣ್ಣನು 'ನಿಮ್ಮ ಬಸಿರಿನ ಹೊಟ್ಟೆಯನ್ನು ತಂದಿದ್ದೇನೆ.' ಎಂದು ಚೇಷ್ಟೆಮಾಡಿ, ತನ್ನ ಯುಕ್ತಿಯನ್ನು ಅವರಿಗೆ ತಿಳಿಸಿ ಹೊರಟುಹೋದನು. ಈಗ ಚಂದ್ರಾವತಿಬಾಯಿಯವರ ಆನಂದಕ್ಕೆ ಪಾರವೇ ಇಲ್ಲ. ಕೋಣೆಯ ಬಾಗಿಲನ್ನಿಕ್ಕಿ ತಮ್ಮ 'ಬಸಿರನ್ನು' ಬಿಚ್ಚಿದರು; ಅದರಲ್ಲಿ ನಾಲ್ಕು ಪರಿವಾಣ ಗಳಿದ್ದುವು. ಪ್ರತಿಯೊಂದಕ್ಕೂ ಎರಡು ಕಡೆಗೆ ಸಣ್ಣ ಹೆಜ್ಜ (ತೂತು) ಗಳು ಇದ್ದವು. ಎಲ್ಲವನ್ನೂ ಬೇರೆ ಬೇರೆಯಾಗಿಟ್ಟು 'ಮೂರು ತಿಂಗಳ ಬಸಿರು.. ಐದು ತಿಂಗಳ ಬಸಿರು..ಏಳು ತಿಂಗಳ..ಒಂಬತ್ತನೆಯದು' ಎಂದು ನಾಮ ಕರಣ ಮಾಡಿದರು. ಊರಲ್ಲಿಯ ಕುಚೋದ್ಯ ಮುದುಕರನ್ನು ಮೋಸ ಮಾಡುವ ಯುಕ್ತಿಯಿದೆಂದು ತಮ್ಮಲ್ಲಿಯೆ ನಗಹತ್ತಿದರು. ಅಷ್ಟರಲ್ಲಿಯೇ ತಮ್ಮ ಬಸರಿನ ಮೋಜು ಹೊರಬಿದ್ದರೆ? ಎಂದು ಗಾಬರಿಯಾದರು. ಅಂಗಾತ ವಾಗಿಟ್ಟ ಪರಿವಾಣಗಳು-ತಮ್ಮ ಭಾವೀಸಂತತಿಯೆಲ್ಲ-ಒಟ್ಟುಗೂಡಿ ತಮ್ಮನ್ನು ಕೆಣಕುವಂತೆ ಗಹಗಹಿಸಿ ನಗುವವೋ ಏನೋ ಎಂಬುವಂತೆ ಬಾಯ್ದೆರೆದಿ-ದ್ದವು. ಅವನ್ನು ಕಂಡು ಒಂದು ಕ್ಷಣಹೊತ್ತು ಅವರಿಗೆ ಅಂಜಿಕೆ ಬಂದಿತು. ಮತ್ತೆ,—ನಕ್ಕರೂ ಆಯಿತು, ಕೆಣಕಿದರೂ ಆಯಿತು, ತನ್ನ ಮಕ್ಕಳು ಮಕ್ಕಳೇ ಅಲ್ಲವೇ? ಎಂಬ ಭಾವನೆಯು ಬಲವಾಗಿ ಬಂದಿತು. ಆಗ ಅವರು ಒಂದು ಕೂಸನ್ನು ಕೈಯಲ್ಲೆತ್ತಿದರು. ಅಲ್ಲೇನಿದೆ? ಮಣ್ಣು ಪರಿವಾಣ! ವಸ್ತುಸ್ಥಿತಿಯನ್ನು ನೆನೆಸಿ 'ಅಯ್ಯೋ!' ಎಂದು ಅವರು ಕಣ್ಣೀರು ಸುರಿಸಿ ದರು. ಎಷ್ಟೋ ಹೊತ್ತು ವಿಚಾರಮಾಡಿದರು. ಏನೂ ಬಗೆಹರಿಯಲಿಲ್ಲ. ಕೊನೆಗೆ ಒಡಕಣ್ಣನ ವಿಚಾರ ಬಂದಿತು. ಅವನದೆಷ್ಟು ಜಾಣತನ? ಎಂದು ತಮ್ಮಲ್ಲಿ ತಾವೇ ಆನಂದಹೊಂದಿದರು. ಅವನ ಚಾಣಾಕ್ಷತೆಗೆ ಮೆಚ್ಚಿದರು. ಅವನೇ ತಮ್ಮ ಬಸಿರು ತಂದವನಲ್ಲವೇ? ಆದ್ದರಿಂದ ಅವನೇ ಎಲ್ಲ ಸಂಕಟಗಳ ಪರಿಹಾರ ಮಾಡುವವ. ಅವನು ಹೇಳಿದಂತೆ ಯಾರಿಗೂ ತಮ್ಮ ಹೊಟ್ಟೆ ಯನ್ನು ತೋರಿಸದಿದ್ದರಾಯಿತು. ಮುಂದಿನದೆಲ್ಲ ಅವನನ್ನೇ ಕೂಡಿದೆ-ಯೆಂದು ವಿಚಾರ ಮಾಡುತ್ತ ತಮ್ಮ ಮುಂದಿದ್ದ ಪರಿವಾಣವೊಂದನ್ನು ಕೈಯಲ್ಲಿ ತೆಗೆದುಕೊಂಡು 'ಬಾ ಎನ್ನ ಬಸಿರೇ' ಎಂದು ಎದೆಗವಚಿಕೊಂಡರು. ಆಮೇಲೆ ಬಾಯಿಯವರು ಅದರ ಹೆಜ್ಜಗಳಲ್ಲಿ ಗಟ್ಟಿಯಾದ ದಾರವನ್ನು

ಪೋಣಿಸಿ ತಳಹೊಟ್ಟೆಗೆ ಬಿಗಿಯಾಗಿ ಕಟ್ಟಿಕೊಂಡರು. ಅಬ್ಬಾ! ಚಂದ್ರಾವತಿಬಾಯಿಯವರು ಇಂದಿನಿಂದ ಒಮ್ಮೆಲೇ ಮೂರು ತಿಂಗಳ ಬಸಿರಿ!

ಪರಿವಾಣವನ್ನು ಕಟ್ಟಿಕೊಂಡ ಮರುದಿವಸವೇ ಚಂದ್ರಾವತಿಬಾಯಿಯವರು ಹೊಸ ಸೀರೆಯನ್ನುಟ್ಟುಕೊಂಡು ಗೋಪಾಳರಾಯರ ಕುಟುಂಬದವರೊಂದಿಗೆ ಗುಡಿಗೆ ಹೋಗುವ ನೆವದಿಂದ ಊರಲ್ಲೆಲ್ಲ ಹೊಟ್ಟೆಯನ್ನು ಮುಂದೆಹಾಯಿಸಿಕೊಂಡು ತಿರುಗಾಡಿ ಬಂದರು. ನೋಡಿದ ಹೆಣ್ಣುಮಕ್ಕಳಲ್ಲಿ ಕೆಲವರು 'ತಕ್ಕಷ್ಟು ಹೊಟ್ಟೆ ಬಂದಿದೆ' ಎಂದರು; ಕೆಲವರು, 'ಬೊಜ್ಜು ಬೆಳೆದಿದೆ' ಎಂದರು. ಆದರೆ ಒಳಗಿನ ಇಂಗಿತವು ಮಾತ್ರ ಯಾರಿಗೂ ಹೊಳೆಯಲಿಲ್ಲ. ಗೋಪಾಳರಾಯರ ಕುಟುಂಬದವರು ಒಂದು ತಿಂಗಳು ಶ್ರೀಪತಿರಾಯರ ಮನೆಯಲ್ಲಿದ್ದು ಚಂದ್ರಾವತಿಬಾಯಿಯವರ ಆದರೋಪಚಾರ ಮಾಡಿದರು. ಬರಬರುತ್ತ ಬಯಕೆಯ ಕಾಟವು ಬಯಲಾಯಿತು. ಬಳಿಕ ಗೋಪಾಳರಾಯರು ಚಕ್ಕಡಿಯನ್ನು ಕೊಟ್ಟು ಕರೆಯಲಿಕ್ಕೆ ಕಳಿಸಿದ್ದರಿಂದ ಗೋಪಾಳರಾಯರ ಕುಟುಂಬದವರು ಚಂದ್ರಾವತಿಬಾಯಿಯವರನ್ನೂ ಒಡಕಣ್ಣನನ್ನೂ ಕರೆದುಕೊಂಡು ಮುದ್ದೂರಿಗೆ ಹೊರಟುಹೋದರು. ಅಲ್ಲಿ ಚಂದ್ರಾವತಿಬಾಯಿಯವರು ಒಂದು ತಿಂಗಳು ಇದ್ದು, ಬೊಮ್ಮಗೇರಿಯಲ್ಲಿಯೇ ಇದ್ದ ತಮ್ಮ ಅಣ್ಣಂದಿರು ತವರಮನೆಯ ಹಸಿರು ಸೀರೆ ಉಡುಗರೆ ಮಾಡಲಿಕ್ಕೆಂದು ಕರೆಯಕಳುಹಿದ್ದರಿಂದ ಒಡಕಣ್ಣನೊಡನೆ ಮತ್ತೆ ಬೊಮ್ಮಗೇರಿಗೆ ಬಂದರು. ಅವರು ತಮ್ಮ ತವರುಮನೆಯಲ್ಲಿ ನಾಲ್ಕೈದು ದಿವಸ ಮಾತ್ರವಿದ್ದು ಉಡುಗರೆ ಮಾಡಿಸಿಕೊಂಡು ತಮ್ಮ ಮನೆಗೆ ಬಂದರು. ಬಳಿಕ ಊರೊಳಗಿನ ಮುತ್ತೈದೆಯರೆಲ್ಲ, ಚಂದ್ರಾವತಿಬಾಯಿಯವರು ಬಹಳ ದಿವಸಕ್ಕೆ ಚೊಚ್ಚಲು ಬಸಿರಾಗಿರುವದರಿಂದ ಅವರನ್ನು ಊಟಕ್ಕೆ ಕರೆದು ಹಸಿರು ಕುಪ್ಪಸಗಳ ಉಡುಗರೆಯನ್ನು ಮಾಡತೊಡಗಿದರು. ಅಣ್ಣಾದೀಕ್ಷಿತರ ಮನೆಯಲ್ಲಿ ಬೆಳುದಿಂಗಳ ಪಂತಿಯ ಸಮಾರಂಭವಾಯಿತು. ತಿಪ್ಪಾಶಾಸ್ತ್ರಿಗಳ ತೋಟದಲ್ಲಿ ಭೋಜನವಾಯಿತು. ಹೀಗೆ ಏಳೆಂಟು ತಿಂಗಳು ತುಂಬುವವರೆಗೆ ಚಂದ್ರಾವತಿಬಾಯಿಯವರು ಸುಗ್ರಾಸಭೋಜನ ಮಾಡುತ್ತ ಚಕ್ಕಂದದಿಂದ ಕಾಲಕಳೆದರು.

ತಮ್ಮ ಕುಟುಂಬಕ್ಕೆ ಏಳು ತಿಂಗಳು ಪೂರ್ಣವಾಗಿರುವವೆಂದು

ಶ್ರೀಪತಿರಾಯರಿಗೆ ತಿಳಿದ ಕೂಡಲೆ ಒಂದು ಉತ್ತಮ ಮುಹೂರ್ತವನ್ನು ಕೇಳಿಕೊಂಡು ಅಂದಿನ ದಿವಸ ಶ್ರೀಮಂತ (ಹೂ ಮುಡಿಸುವದು) ಸಮಾರಂಭವನ್ನು ವೈಭವದಿಂದ ಅವರು ಮಾಡಿದರು. ಶಾಸ್ತ್ರೋಕ್ತ ಕಾರ್ಯಗಳೆಲ್ಲ ಆದಮೇಲೆ ಚಂದ್ರಾವತಿಬಾಯಿಯವರು ಬಂದ ಮುದುಕರಿಗೆಲ್ಲ ನಮಸ್ಕಾರ ಮಾಡುವ ಪ್ರಸಂಗ ಬಂದಿತು. ಕೂಡಿದ ವೃದ್ಧಸ್ತ್ರೀಯರಿಗೆಲ್ಲ ನಮಸ್ಕಾರ ಮಾಡಹತ್ತಲು ಅವರು 'ಗಂಡಸು ಮಗನ ತಾಯಿಯಾಗು' ಎಂದು ಹರಸಿದರು. ನಮಸ್ಕಾರ ಮಾಡುವ ಮುಂದೆ ಬಾಗುವದು ಅವರಿಗೆ ಬಹಳ ಜಡವಾಯಿತು. ಗರ್ಭವು ಎಲ್ಲಿ ಕಳಚಿಕೊಂಡು ಬೀಳುವದೋ ಎಂಬ ಹೆದರಿಕೆಯಿಂದ ಅವರು ಎಡಗೈಯನ್ನು ಗಟ್ಟಿಯಾಗಿ ಹೊಟ್ಟೆಯ ಮೇಲಿಟ್ಟುಕೊಂಡು ಬಲಗೈಯೊಂದನ್ನೇ ನೆಲಕ್ಕೆ ಮುಟ್ಟಿಸಿ ನಮಸ್ಕಾರಮಾಡಹತ್ತಿದರು. ಆಗ ನಿಷ್ಠುರಳಾದ ಒಬ್ಬ ಮುತ್ತೈದೆಯು 'ತಂಗೀ ಒಂಟಿಗೈಲೆ ನಮಸ್ಕಾರ ಮಾಡಬಾರದು. ಹೊಟ್ಟೀಮ್ಯಾಲ ಕೈ ಇಟ್ಟುಗೊಳ್ಳಿಕ್ಕೆ ಹೊಟ್ಟ್ಯಾಗಿನ ಕೂಸೇನು ಬಿಚ್ಚಿಬೀಳೋದಿಲ್ಲ. ಎರಡೂ ಕೈಲೆ ನಮಸ್ಕಾರ ಮಾಡು.' ಎಂದಳು. ಅಷ್ಟಕ್ಕೇ ಚಂದ್ರಾವತಿಬಾಯಿಯವರು ನಮಸ್ಕಾರ ಮಾಡುವದನ್ನೆಲ್ಲ ಮುಗಿಸಿಬಿಟ್ಟರು. ಬಂದ ಮುತ್ತೈದೆಯರೆಲ್ಲ, ಚಂದ್ರಾವತಿಬಾಯಿಯವರ ಮೋರೆಯ ಮೇಲೆ ಬಸಿರಿನ ಕಳೆ ಇಲ್ಲವೆಂದೂ, ಬಸಿರು-ಹೆಂಗಸಿನ ಹೊಟ್ಟೆಯಂತೆ ಇವರ ಹೊಟ್ಟೆಯಿಲ್ಲವೆಂದೂ ಕುಚುಕುಚು ಮಾತಾಡುತ್ತ ತಮ್ಮ ಮನೆಗೆ ಹೊರಟುಹೋದರು. ಅಂದು ಅವರಿಗೆ ಊಟ ಸವಿ ಹತ್ತಲಿಲ್ಲ. ತಾವು ನಮಸ್ಕಾರಮಾಡುವ ಗೋಜಿಗೆ ಹೋಗಿದ್ದು ಯುಕ್ತವಲ್ಲೆಂದು ಅವರಿಗೆನಿಸಿತು ಬಂದವರೆಲ್ಲ ತಮ್ಮ ಗುಟ್ಟನ್ನರಿತೇ ಹೀಗೆ ಮಾತಾಡಿರಬಹುದೆಂದು ಅವರು ಸಂಶಯಪಟ್ಟರು.

ಬಸಿರೆಲ್ಲಾ ಆದದ್ದಾಯಿತು; ಆದರೆ ಹಡೆಯುವ ಬಗೆ ಹೇಗೆಂದು ಅವರು ಚಿಂತೆಮಾಡುತ್ತಿರುವಾಗ ಅವರಿಗೆ ಒಡಕಣ್ಣಿನ ಯುಕ್ತಿ ನೆನಪಾಯಿತು. ಆದರೆ ಅದಕ್ಕೆ ಹೆಂಗಸರ ಸಹಾಯ ಬೇಕು. ಆದ್ದರಿಂದ ಮರುದಿವಸ ಬೆಳಗಾಗುತ್ತಲೇ ಸಾವಕ್ಕನನ್ನು ಗುಪ್ತವಾಗಿ ಕರೆದು, ಅವಳಿಗೆ ಹತ್ತು ರೂಪಾಯಿಗಳನ್ನು ಕೊಟ್ಟು ತಮ್ಮ ಬಸಿರಿನ ಗುಟ್ಟನ್ನೆಲ್ಲ ಅವಳಿಗೆ ಚಂದ್ರಾಬಾಯಿಯವರು ತಿಳಿಸಿದರು. ಈ ಗುಟ್ಟನ್ನು ಹೊರಗೆಡವಬಾರದೆಂದೂ ಜನ

ರಲ್ಲಿ ತಾವು ಹೇಳುವ ಸುದ್ದಿಯನ್ನು ಹರಡಬೇಕೆಂದೂ ಆಕೆಗೆ ತಿಳಿಸಿದರು. ಅಷ್ಟು ಕೆಲಸವನ್ನು ಅವಳು ದಕ್ಷತೆಯಿಂದ ಮಾಡಿದರೆ ಅವಳಿಗೆ ಹೊಸ ಸೀರೆಯನ್ನು ತರಿಸಿಕೊಡುವೆನೆಂಬ ಆಸೆಯನ್ನು ಹಚ್ಚಿದರು. ಸಾವಕ್ಕನು ಅದರಂತೆ ಮಾಡುವೆನೆಂದು ಕೈಮೇಲೆ ಕೈಹಾಕಿ ವಚನವನ್ನಿತ್ತಳು.

ಶ್ರೀಮಂತಕಾರ್ಯವಾದ ಬಳಿಕ ಶ್ರೀಪತಿರಾಯರು ತಮ್ಮ ಇನಾಮು ಗ್ರಾಮದ ರೈತರ ಆಮಂತ್ರಣ ಬಂದದ್ದರಿಂದ ತಮ್ಮ ಇನಾಮು ಗ್ರಾಮಕ್ಕೆ ಹೋದರು. ಅಂದು ಸಂಜೆಯ ಸುಮಾರಕ್ಕೆ ಚಂದ್ರಾವತಿಬಾಯಿಯವರು 'ಹೊಟ್ಟೆಶೂಲಿಯೆದ್ದಿದೆ, ಟೊಂಕ ಚುಚ್ಚುತ್ತದೆ'ಯೆಂದು ಆರ್ಭಟಿಸಹತ್ತಿದರು. ಒಡಕಣ್ಣನು ಆಳುಗಳಿಗೆ ಹೇಳಿಕಳಿಸಿ ಸಾವಕ್ಕನನ್ನು ಕರೆಕಳುಹಿದನು. ಕೂಡಲೆ ಸಾವಕ್ಕನು ದೇಸಾಯರ ಮನೆಗೆ ಬಂದಳು. ಓಣಿಯಲ್ಲಿ ಚಂದ್ರಾವತಿಬಾಯಿಯವರು ಬೇನೆತಿನ್ನಹತಿರುವರೆಂಬ ಸುದ್ದಿಯು ಹರಡಿತು. ಒಡಕಣ್ಣನು ಎಂಟರಲ್ಲಿ ಬೇನೆ ಬರದಂತೆ 'ಥಡೀ' ಹಾಕಿಸಬೇಕೆಂದು ಸಿದ್ದಯ್ಯನನ್ನು ಕರೆಯಿಸಿ 'ಥಡೀ' ಹಾಕಿಸುವ ಉಪಚಾರವನ್ನು ಮಾಡಿಸಿದನು. ಅಷ್ಟರಲ್ಲಿ ಚಂದ್ರಾವತಿಬಾಯಿಯವರ ಅತ್ತೆಗೆಯವರೂ ಓಣಿಯೊಳಗಿನ ಕೆಲವು ವೃದ್ಧಸ್ತ್ರೀಯರೂ ಬಂದರು. ಆಗ ಚಂದ್ರಾವತಿಬಾಯಿಯವರು 'ಈಗ ಟೊಂಕಶೂಲೆಯು ಸ್ವಲ್ಪ ಕಡಿಮೆಯಾಗಿದೆ; ಥಡೀ ಹಾಕುವ ವರೆಗೆ ಬಹಳ ವೇದನೆ ಇತ್ತೆಂ'ದು ಹೇಳಿ ಅವರೆಲ್ಲರನ್ನೂ ಮನೆಗೆ ಕಳುಹಿದರು. ಮೂರು ತಾಸು ರಾತ್ರಿಯ ಸುಮಾರಕ್ಕೆ ಚಂದ್ರಾವತಿಬಾಯಿಯವರು ಮಲವಿಸರ್ಜನೆಗೆಂದು ಹಿತ್ತಲದಲ್ಲಿದ್ದ ಶೌಚಕೂಪಕ್ಕೆ ಹೋದರು. ಸಾವಕ್ಕನೂ ಅವರ ಬೆನ್ನಹಿಂದೆ ಇದ್ದಳು. ಚಂದ್ರಾವತಿಬಾಯಿಯವರು, ಶೌಚಕೂಪದಲ್ಲಿ ಕುಳಿತು ತಮ್ಮ ಹೊಟ್ಟೆಗೆ ಕಟ್ಟಿದ ಎಲ್ಲ ಪರಿವಾಣಗಳನ್ನು ಬಿಚ್ಚಿ ಒಗೆದು ದೊಡ್ಡ ಧ್ವನಿಯಿಂದ ಚೀರಿದರು. ಕೂಡಲೆ ಸಾವಕ್ಕನು ಬಂದು ಅವರನ್ನು ಕರೆದುಕೊಂಡು ಹೋಗಿ ಹುಲ್ಲು ಹಾಸಿದ ಕತ್ತಲೆಯ ಕೋಣೆಯಲ್ಲಿ ಮಲಗಿಸಿದಳು. ಮುಂದೆ ಸ್ವಲ್ಪಹೊತ್ತಿನ ಮೇಲೆ ಅವಳು ಹೊರಗೆ ಬಂದು, ಚಂದ್ರಾವತಿಬಾಯಿಯವರು ಬೇನೆತಿನ್ನಲಿಕ್ಕೆಹತ್ತಿ ಮಲವಿಸರ್ಜನೆಗೆಂದು ಪಾಯಖಾನೆಗೆ ಹೋಗಿದ್ದರು; ಆಗ ಒಂದು ದೊಡ್ಡ ಬೇನೆಯು ಬಂದು ಕೂಸು ಪಾಯಖಾನೆಯಲ್ಲಿ ಬಿದ್ದಿತೆಂದೂ, ಮಾಂಸವನ್ನು ತಾನು ತೆಗೆದು ಒಗೆದಳೆಂದೂ, ಎಂಟರಲ್ಲಿ

ಇರುವದರಿಂದ ಹುಲ್ಲು ಹಾಸಿದ ಕತ್ತಲ ಕೋಣೆಯಲ್ಲಿ ಮಲಗಿಸಿ ನಂಜಿನ ಔಷಧಿಯನ್ನು ತರಿಸಿಕೊಟ್ಟೆನೆಂದೂ ಓಣಿಯಲ್ಲಿ ಸುದ್ದಿಯನ್ನು ಹಬ್ಬಿಸಿದಳು. ಒಡಕಣ್ಣನೂ ಸಾವಕ್ಕನ ಸಹಾಯಕನಾಗಿದ್ದನು. ಓಣಿಯೊಳಗಿನ ಹೆಂಗಸರು ಬರಲು ಒಡಕಣ್ಣನೂ ಸಾವಕ್ಕನೂ ಕೂಡಿ 'ಚಂದ್ರಾವತಿಬಾಯಿಯವರಿಗೆ ಬವಳಿಬಂದು ಬಹಳ ತ್ರಾಸವಾದ್ದರಿಂದ ಯಾರೂ ಅವರನ್ನು ಮಾತಾಡಿಸಬಾರದೆ'ಂದು ಹೇಳಿ, ಬಂದವರನ್ನೆಲ್ಲ ಹಿಂದಕ್ಕೆ ಕಳಿಸಿದರು. ಆಗ ಬಂದ ವೃದ್ಧಸ್ತ್ರೀಯರೆಲ್ಲ 'ಕೂಸು ಪಾಯಖಾನೆಯಲ್ಲಿ ಬೀಳುವದುಂಟೇ? ಆಕೆ ಬಂಜೆ. ಬಸಿರಿದ್ದದ್ದೇ ಸುಳ್ಳು. ಬಂಜೆಯ ಬಸಿರು ಬಿಚ್ಚಿಬಿತ್ತು.' ಎಂದು ಹುಡುಗಾಟಿಕೆ ಮಾಡುತ್ತ ತಮ್ಮತಮ್ಮ ಮನೆಗಳಿಗೆ ಹೊರಟುಹೋದರು.

---

## ೧೦

**ದೇಸಾಯರ ಧರ್ಮರಾಜತನ....**

ಹನಮಾಪುರವು ಶ್ರೀಪತಿರಾಯರ ಇನಾಮು ಗ್ರಾಮವು. ಆ ಹಳ್ಳಿಯ ಜನಸಂಖ್ಯೆ ಸುಮಾರು ಮೂರು ನೂರು. ಊರಲ್ಲಿ ಮನೆಗಳು ಸಾಲುಗೊಂಡಿರದೆ ಅಲ್ಲಿಯೊಂದು ಇಲ್ಲಿಯೊಂದು ಬಿಡಿಬಿಡಿಯಾಗಿವೆ. ಕರ್ನಾಟಕದ ಅವನತ ಸ್ಥಿತಿಯನ್ನು ಪ್ರತ್ಯಕ್ಷ ತೋರಿಸುವಂತೆ ಆ ಊರ ಸುತ್ತಲೂ ಹುಗಿದ ಕಂದಕವೂ ಹಾಳಾದ ಕೋಟೆಯ ಗೋಡೆಗಳೂ ಬಿದ್ದ ಬುರುಜುಗಳೂ ಅಸ್ತವ್ಯಸ್ತವಾಗಿ ನಿಂತಿವೆ. ಕೋಟೆಯ ಸುತ್ತಲೂ ಹಬ್ಬಿರುವ ಡಬಗಳ್ಳಿಯಿಂದ ಊರೊಳಗಿನ ಓಣಿಗಳೆಲ್ಲ ಬೇರೆಬೇರೆಯಾಗಿವೆ. ಗ್ರಾಮದ ದೇಸಾಯರು ಆ ಊರಲ್ಲಿರದೆ ಬೊಮ್ಮಗೇರಿಯಲ್ಲಿ ಮನೆಮಾಡಿಕೊಂಡದ್ದರಿಂದ ತಮ್ಮ ದೇಸಗತಿಯ ಗ್ರಾಮದ ಅಭಿವೃದ್ಧಿಯ ಬಗ್ಗೆ ಉದಾಸೀನರಾಗಿದ್ದಾರೆ. ಪರಭಾಷೆಯ ಮೋಹಜಾಲದಲ್ಲಿ ಸಿಕ್ಕ ಕರ್ನಾಟಕದ ಹಿರಿಯರು ಕರ್ನಾಟಕ ಏಕೀಕರಣಕ್ಕೆ ಹಿಂಜರಿಯುವಂತೆ, ಡಬಗಳ್ಳಿಯ ಮಧ್ಯದಲ್ಲಿಯೇ ಮನೆಮಾಡಿಕೊಂಡಿದ್ದ ಹನುಮಾಪುರದೊಳಗಿನ ದೊಡ್ಡ ರೈತರು ಊರೊಳಗಿನ ಓಣಿಗಳ

ಏಕೀಕರಣಕ್ಕೆ ಹಿಂಜರಿಯುಹತ್ತಿದ್ದಾರೆ. ಕರ್ನಾಟಕದ ಏಕೀಕರಣಕ್ಕಾಗಿ ಹಣಗಾಡಿ ಧನಸಹಾಯವನ್ನು ಕೇಳಲಿಕ್ಕೆ ಹೋದ ಜನರಿಗೆ ದೇಶದಲ್ಲಿದ್ದ ಧನಿಕರು ಧನಸಹಾಯಮಾಡದೆ ಹಿಂದೆ ನಿಂತು ಹೀಯಾಳಿಸುವಂತೆ, ಊರೊಳಗಿನ ಡಬಗಳ್ಳಿಯನ್ನು ಕಡಿಸಲಿಕ್ಕೆಂದು ಧನಸಹಾಯ ಬೇಡಲಿಕ್ಕೆ ಹೋದ ಜನರಿಗೆ ಆ ಊರೊಳಗಿನ ಧನಿಕರು ಸಹಾಯಮಾಡದೆ 'ಊರ ಉಸಾಬರಿ ಇವರಿಗೇಕೆ ಬೇಕು?' ಎಂದು ಹಿಂದೆ ಹಾಸ್ಯಮಾಡಹತ್ತಿದ್ದಾರೆ. ಸ್ವಪ್ರತಿಷ್ಠಾಕಾಂಕ್ಷಿಗಳಾದ ಕೆಲವು ಧೂರ್ತ ಜನರು ಹಳ್ಳಿಯಲ್ಲಿ ಕುಟಿಲತಂತ್ರವನ್ನು ಹೂಡಿ ಊರಲ್ಲಿ ಅನೇಕ ಬಣಗಳನ್ನು ಮಾಡಿ ಬಡಿದಾಟ ಹಚ್ಚಿದ್ದಾರೆ. ಕರ್ನಾಟಕದ ಏಕೀಕರಣಕ್ಕಾಗಿ ತನು-ಮನ-ಧನಗಳಿಂದ ದುಡಿದು ದುಃಖಪಟ್ಟ ಜನರು ಫಲಪ್ರಾಪ್ತಿಯಾಗದೆ ದೇವರನ್ನು ನಂಬಿ ಅನುಕೂಲ ಕಾಲವನ್ನು ಪ್ರತೀಕ್ಷಿಸುತ್ತ ಕುಳಿತಂತೆ, ಆ ಗ್ರಾಮದಲ್ಲಿ ಹಬ್ಬಿದ ಡಬಗಳ್ಳಿಯನ್ನು ಕಡಿಯಲಿಕ್ಕೆ ಪ್ರಯತ್ನಮಾಡಿ ದುಃಖಬಟ್ಟರೂ ಡಬಗಳ್ಳಿಯು ನಾಶವಾಗದ್ದರಿಂದ ಡಬಗಳ್ಳಿಯನ್ನು ತಿನ್ನುವ ಹುಳುಗಳು ಬರುವ ಕಾಲವನ್ನು ನಿರೀಕ್ಷಿಸುತ್ತ ಕುಳಿತಿದ್ದಾರೆ.

ಡಬಗಳ್ಳಿಯು ಹೆಚ್ಚಾಗಿ ಬಡಜನರು ಒಬ್ಬೊಬ್ಬರಾಗಿ ಗ್ರಾಮತ್ಯಾಗ ಮಾಡಹತ್ತಲು ಊರು ಬರಿದಾಗಹತ್ತಿದೆ. ಊರೊಳಗಿನ ಕೆಲವು ಉತ್ಸಾಹಿ ತರುಣರು ಒಟ್ಟುಗೂಡಿ ದೇಸಾಯರ ಸಹಾಯವನ್ನು ಪಡೆದು, ಡಬಗಳ್ಳಿಯನ್ನು ನಾಶಮಾಡಿ, ಊರನ್ನು ಊರ್ಜಿತಸ್ಥಿತಿಗೆ ತರಬೇಕೆಂದು ನಿಶ್ಚಯಿಸಿ ಬೊಮ್ಮಗೇರಿಯಲ್ಲಿರುವ ದೇಸಾಯಿ ಶ್ರೀಪತಿರಾಯರಿಗೆ ತಮ್ಮ ಗ್ರಾಮಕ್ಕೆ ಬರಬೇಕೆಂದು ಆಮಂತ್ರಣಕೊಟ್ಟು ಕಳಿಸಿದ್ದರು. ದೇಸಾಯರಾದರೂ ರೈತರ ಕಲ್ಯಾಣದಲ್ಲಿಯೇ ನಂಬಿ, ಮನೆಯಲ್ಲಿ ಬಸಿರಿದ್ದ ಹೆಂಡತಿಯೊಬ್ಬಳನ್ನೇ ಬಿಟ್ಟು ಹನುಮಾಪುರಕ್ಕೆ ಬಂದರು. ದೇಸಾಯರು ಬಂದ ಸುದ್ದಿಯನ್ನು ಕೇಳಿ ಊರ ಪ್ರಮುಖರೆಲ್ಲ ಒಟ್ಟುಗೂಡಿ, ಅವರನ್ನು ಆದರದಿಂದ ಬರಮಾಡಿಕೊಂಡು, ಹನುಮಂತ ದೇವರ ಗುಡಿಯಲ್ಲಿ ಅವರನ್ನು ಇಳಿಸಿದರು. ದೇಸಾಯರ ಪೂರ್ವಜರು ಬೊಮ್ಮಗೇರಿಯಲ್ಲಿಯೇ ಮನೆಮಾಡಿದ್ದು, ಹಳ್ಳಿಯಲ್ಲಿದ್ದ ಅವರ ಮನೆಯು ಅವರ ಅಲಕ್ಷ್ಯದಿಂದ ಬಿದ್ದು ನೆಲಸಮವಾಗಿತ್ತು. ಅವರು ವರ್ಷಕ್ಕೆ ಒಂದೆರಡು ಸಲ ಹಳ್ಳಿಗೆ ಬರುತ್ತಿದ್ದರು. ಅವರ ಕಾರಕೂನನೇ

ಎಲ್ಲ ಕಾರಭಾರವನ್ನು ಸಾಗಿಸುತ್ತಿದ್ದನು. ಹೀಗಾಗಿ ಆ ಗ್ರಾಮವು ಬರಬರುತ್ತ ಅವನತಸ್ಥಿತಿಯನ್ನು ಹೊಂದುತ್ತ ನಡೆದಿತ್ತು.

ದೇಸಾಯರ ಹಿರಿಯರ ಕಾಲಕ್ಕೆ ಊರಲ್ಲಿಯ ಬಣಗಳಿಂದ, ಮೇಲಿಂದ ಮೇಲಾಗುವ ವ್ಯಾಜ್ಯಗಳಿಂದ ರೈತರಿಗೆ ಬಹಳ ತ್ರಾಸವಾಗುತ್ತಿತ್ತು. ಆದರೆ ಶ್ರೀಪತಿರಾಯರು ಹಾಗಲ್ಲ. ಅವರಿಗೆ ರೈತರ ಮೇಲೆ ಬಹಳ ಪ್ರೇಮ. ರೈತರ ಕೊರತೆಗಳನ್ನು ತುಂಬಿಕೊಡುವದರಲ್ಲಿ ಅವರು ತಮ್ಮ ಹಣವನ್ನು ವೆಚ್ಚ ಮಾಡುತ್ತಿದ್ದರು. ಹೀಗಾಗಿ ಒಡೆಯ ಮತ್ತು ರೈತರಲ್ಲಿ ತಂದೆ-ಮಕ್ಕಳ ಪ್ರೇಮಸಂಬಂಧವು ಬೆಳೆದು ಬಂದಿತ್ತು. ಆದ್ದರಿಂದಲೇ ಈಗಾದರೂ ಡಬಗಳ್ಳಿಯ ನಾಶದ ಸಲುವಾಗಿ ರೈತರು ತಮ್ಮ ಒಡೆಯನ ಸಹಾಯ ಬೇಡುವದಕ್ಕೆಂದು ಅವರನ್ನು ಕರೆಸಿದ್ದರು.

ಶ್ರೀಪತಿರಾಯರು ಹನುಮಂತದೇವರ ಗುಡಿಗೆ ಬಂದ ಕೂಡಲೆ ಮೂರುತಿಗೆ ಸಾಷ್ಟಾಂಗ ನಮಸ್ಕಾರಮಾಡಿ ಅಲ್ಲಿ ಹಾಸಿದ ಗಾದಿಯ ಮೇಲೆ ಕುಳಿತರು. ಆಮೇಲೆ ದೇಸಾಯರು ರೈತರಿಗೆ ಕೂಡಹೇಳಲು ಪರಸ್ಪರ ಕುಶಲ ಪ್ರಶ್ನೆಗಳಾದವು. ದೇಸಾಯರನ್ನು ಕರೆಯಲಿಕ್ಕೆಂದು ಹೋದ ಕಣಬುರಗಿ ಸಿದ್ದಪ್ಪನು ದೇಸಾಯರ ಕುಟುಂಬ, ಗರ್ಭಿಣಿಯಿದ್ದ ಸುದ್ದಿಯನ್ನು ಎಲ್ಲರಿಗೆ ತಿಳಿಸಿದನು. ಆ ಸುದ್ದಿಯನ್ನು ಕೇಳಿ ರೈತಸಮಾಜಕ್ಕೆಲ್ಲ ಆನಂದವಾಯಿತು. ಅವರಲ್ಲೊಬ್ಬನು ದೇಸಾಯರಿಗೆ ಸಂತಾನಪ್ರಾಪ್ತಿಯ ಸುಯೋಗವನ್ನು ಮಾರುತಿಯೇ ಉಂಟುಮಾಡಿದ್ದರಿಂದ ಮರುದಿನ ದೇವರಿಗೆ ಮಹಾಭಿಷೇಕ ವಾಗಬೇಕೆಂದು ಪ್ರಸ್ತಾಪವೆತ್ತಿದನು. ದೇಸಾಯರೂ ಮರುದಿನ ಶನಿವಾರ ವಿದ್ದುದರಿಂದ ಅಭಿಷೇಕಕ್ಕೆ ಒಪ್ಪಿ, ಊರ ಜನಕ್ಕೆಲ್ಲ ಊಟವಾಗಬೇಕೆಂದು, ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಿದ್ಧಪಡಿಸುವದಕ್ಕೆಂದು ಮೇಟಿಯ ಬಸಪ್ಪನ ಕಡೆಗೆ ಕೆಲವು ಹಣ ಕೊಟ್ಟರು. ಹಾಗು ತಮ್ಮ ಕಾರಕೂನನಿಗೆ ಭತ್ತ ಕುಟ್ಟಿಸಿ ಅಕ್ಕಿಯನ್ನು ಮಾಡಿಸಲಿಕ್ಕೂ ಮೊರಡೂರಿಂದ ವೈದಿಕರನ್ನು ಕರೆದುಕೊಂಡು ಬಂದು ಅಭಿಷೇಕ ಮಾಡಿಸಲಿಕ್ಕೂ ತಿಳಿಸಿದರು. ಸಂಜೆಗೆ ಎಲ್ಲ ರೈತರೂ ತಮ್ಮ ಮನೆಗಳಿಗೆ ಹೋಗಲು ದೇಸಾಯರು ಊಟವನ್ನು ತೀರಿಸಿ ತಮ್ಮ ಹಾಸಿಗೆಯ ಮೇಲೆ ಮಾರುತಿಯ ಧ್ಯಾನ ಮಾಡುತ್ತ ಮಲಗಿ ಕೊಂಡರು.

ಮರುದಿನ ನಸುಕಿನಲ್ಲಿಯೇ ದೇಸಾಯರ ರೈತರು ಪ್ರಸ್ತಕ್ಕೆ ಬೇಕಾಗುವ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿ ಗುಡಿಗೆ ತಂದಿಟ್ಟರು. ದೇಸಾಯರು ಏಳುವ ಮುಂಚಿತವೆ ಗುಡಿಯ ಮುಂದೆ ಹಂದರ ಹಾಕಿ ತೋರಣ ಕಟ್ಟಿ ಎಲ್ಲ ಸಿದ್ಧತೆಯನ್ನೂ ಮಾಡಿದ್ದರು. ಮೂರು ತಾಸಾಗುವದರೊಳಗಾಗಿ ಎಲ್ಲವೂ ಸಿದ್ಧವಾಯಿತು. ಅಷ್ಟರಲ್ಲಿ ದೇಸಾಯರ ಕಾರಕೂನನು ಹದಿನೈದು ಜನ ವೈದಿಕರನ್ನು ಅಭಿಷೇಕಕ್ಕೆಂದು ಕರೆದುಕೊಂಡು ಬಂದನು. ಬಳಿಕ ಆಂಜನೇಯನಿಗೆ ಅಲಂಕಾರ ಪೂಜೆಯನ್ನು ಕಟ್ಟಿದರು. ಮಧ್ಯಾಹ್ನಕ್ಕೆ ಭೋಜನವಾದ ಮೇಲೆ, ರೈತರೂ ತಾವು ಸಿದ್ಧಪಡಿಸಿದ ಅಡಿಗೆಯನ್ನು ಮಾರುತಿಗೆ ಎಡೆಮಾಡಿ ಊಟಮಾಡಿದರು. ಸಂಜೆಗೆ ಎಲ್ಲರೂ ಒಟ್ಟುಗೂಡಿ ಉತ್ಸವದೊಂದಿಗೆ ಹನುಮಂತ ದೇವರ ಪಾಲಕಿಯ ಉತ್ಸವವನ್ನು ಮಾಡಿದರು. ದೇಸಾಯರು ತಮಗೆ ಪುತ್ರಸಂತಾನವಾದರೆ ಹನುಮಂತ ದೇವರ ರಥೋತ್ಸವವನ್ನು ಮಾಡಿಸುವೆನೆಂದು ಬೇಡಿಕೊಂಡರು. ಬಳಿಕ ಎಲ್ಲರೂ ಆನಂದದಿಂದ ದೇಸಾಯರೊಡನೆ ಮಾತನಾಡುತ್ತ ಕುಳಿತರು.

ಇಷ್ಟು ಹೊತ್ತಾದರೂ ರೈತರು ತಮ್ಮ ಮುಖ್ಯ ವಿಷಯದ ಪ್ರಸ್ತಾಪವನ್ನು ದೇಸಾಯರೆದುರು ಎತ್ತಿರಲಿಲ್ಲ. ಅವರಿಗೆ ಡಬಗಳ್ಳಿಯ ತ್ರಾಸು ಅಸಹ್ಯವಾಗಿತ್ತು; ಅದರ ಸಂದಿಸಂದಿಗಳಲ್ಲಿಯೂ ಕ್ರೂರ ಪಶುಗಳು ಸೇರಿಕೊಂಡು ಆಗಾಗ್ಗೆ ಅವರ ದನಕರುಗಳ ಮೇಲೆ ದೌಡು ಮಾಡುತ್ತಿದ್ದವು. ರೈತರ ಬಾಳುವೆ ದನಕರುಗಳಿಂದಲ್ಲವೆ? ಆದ್ದರಿಂದ ಸಮಯ ಸಾಧಿಸಿ ಮೇಟಿ ಬಸಪ್ಪನು ಡಬಗಳ್ಳಿಯ ವಿಷಯವನ್ನು ವಿಶದವಾಗಿ ತಿಳಿಸಿ ಊರೊಳಗಿನ ಡಬಗಳ್ಳಿಯನ್ನಷ್ಟು ಕಡಿಸಿ ತಮ್ಮ ಕಷ್ಟವನ್ನು ನಿವಾರಿಸಬೇಕೆಂದು ಬೇಡಿಕೊಂಡನು. ದೇಸಾಯರಿಗೆ ಇಷ್ಟು ದಿನವಾದರೂ ಯಾರೂ ಆ ವಿಷಯವನ್ನು ತಿಳಿಸಿದ್ದಿಲ್ಲ; ರೈತರ ಗೋಳೂ ತಮ್ಮ ಗೋಳೂ ಒಂದೇ ಎಂದು ಹೇಳಿ ಅದನ್ನು ನಾಶಮಾಡಲು ಅವರು ತಮ್ಮ ಒಪ್ಪಿಗೆಯನ್ನಿತ್ತರು; ಪ್ರತಿಯೊಬ್ಬನೂ ತಮ್ಮ ಮನೆಯ ಹದ್ದಿನಲ್ಲಿಯ ಡಬಗಳ್ಳಿಯನ್ನು ಕಡಿದುಕೊಂಡರೆ ಊರಲ್ಲಿ ಬೇರೆ ಕಡೆಗೆ ಹಬ್ಬಿದ್ದನ್ನು ತಾವೇ ಕಡಿಸುವೆವೆಂದು ಹೇಳಿದರು. ಆಗ ರೈತರು ತಾವು ಬಹಳ ದುಃಸ್ಥಿತಿಯಲ್ಲಿರುವರೆಂದೂ, ತಮ್ಮ ಕೈಯಲ್ಲಿ ತಮ್ಮ ಮನೆಗಳ ಸುತ್ತಲಿನ ಡಬಗಳ್ಳಿಯನ್ನೇ ಕಡಿಸಲು ಹತ್ತುವಷ್ಟು ಹಣ

ತಮ್ಮಲ್ಲಿಲ್ಲವೆಂದು ಹೇಳಿದರು. ಆಗ ದೇಸಾಯರು ಒಂದು ಯುಕ್ತಿಯನ್ನು ಹೇಳಿದರು. ಸುಗ್ಗಿಯಲ್ಲಿ ರೈತರು ಗಳಿಗೆ ಹದಿನಾರು ಪಡಿಯಂತೆ ಕಾಳು ಎತ್ತಬೇಕು; ತಾವು ಲಾವಣಿ ಹಣದಲ್ಲಿ ರೂಪಾಯಿಗೆ ಎರಡಾಣೆಯಂತೆ ಹಣ ತೆಗೆದಿಡಬೇಕು; ಬಡವರಿದ್ದವರು ವಾರಕ್ಕೆ ಒಂದು ದಿನ ಪುಕ್ಕಟೆ ದುಡಿಯ ಬೇಕು. ಹೀಗೆ ಮಾಡಿ ಇದೇ ಸಾರೆ ಬೇಸಿಗೆಯಲ್ಲಿ ಎಲ್ಲ ಡಬಗಳ್ಳಿಯನ್ನು ಕಡಿಸಿದರೆ ಒಳಿತಲ್ಲವೆ ?

ದೇಸಾಯರು ತೆಗೆದ ಯುಕ್ತಿಗೂ ಅವರ ಉದಾತ್ತ ರೀತಿಗೂ ಊರವ ರೆಲ್ಲ ಮೆಚ್ಚಿ ಅವರನ್ನು ಕೊಂಡಾಡಿದರು. ಮುಂದಿನ ವರುಷದಲ್ಲಿಯೇ ಡಬಗಳ್ಳಿಯು ನಾಶವಾಗುವದೆಂದು ಊರ ಜನರೆಲ್ಲರೂ ಹಿಗ್ಗಿದರು. ಬಳಿಕ ದೇಸಾಯರು ಊರೊಳಗಿನ ಪ್ರಮುಖ ರೈತರನ್ನು ಕರೆದು ಅವರಿಗೆ ಬುದ್ಧಿ-ವಾದವನ್ನು ಹೇಳಿ ಊರೊಳಗಿನ ಬಣಗಳನ್ನು ಮುರಿದು ಒಕ್ಕಟ್ಟಿನಿಂದ ಸಾರ್ವಜನಿಕ ಕೆಲಸಗಳನ್ನು ಮಾಡಿರೆಂದು ಉಪದೇಶಮಾಡಿದರು. ತಮ್ಮ ಕಾರಕೂನನು ಊರೊಳಗಿನ ಎಲ್ಲ ಕಾರ್ಯಗಳನ್ನು ದಕ್ಷತೆಯಿಂದ ಮಾಡ ಬೇಕೆಂದು ಹೇಳಿದರು. ಹೀಗೆ ಊರಲ್ಲಿ ಒಕ್ಕಟ್ಟನ್ನು ಬೆಳಿಸಿ, ಸುಗ್ಗಿಯಲ್ಲಿ ಕಾಳು ಎತ್ತಲಿಕ್ಕೆ ಪಂಚರನ್ನು ನಿಯಮಿಸಿದರು. ತರುವಾಯ ದೇಸಾಯರು ತಾಂಬೂಲವನ್ನು ಸೇವಿಸುತ್ತ ತಮ್ಮ ರೈತ ಜನರೊಡನೆ ಆನಂದದಿಂದ ಮಾತ ನಾಡುತ್ತ ಕುಳಿತರು. ದೊರೆಗೂ ಪ್ರಜೆಗಳಿಗೂ ಇಂತಹ ಸಾಮರಸ್ಯದ ಸುಸಂಧಿಯು ಸಾಧಿಸಿರುವಾಗ ದಿನಗಳು ಪ್ರಹರಗಳಂತೆ ಕಳೆದುಹೋದರೆ ಏನಾಶ್ಚರ್ಯ ?

## ೧೧

**ದೇಸಾಯರ ಮನೆಯಲ್ಲಿ ದೈವ್ವದ ಕುಣಿತ.......**

ಈ ರೀತಿಯಲ್ಲಿ ಎಲ್ಲರೂ ಆನಂದದಿಂದಿರುವಾಗ ಬೊಮ್ಮಗೇರಿಯಿಂದ ಒಬ್ಬ ಮನುಷ್ಯನು ಬಂದು ದೇಸಾಯರ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟನು. ದೇಸಾಯರು ಗಾಬರಿಯಾಗಿ ಅದನ್ನು ಒಡೆದು ನೋಡಿ ಓದ ಹತ್ತಿದರು. ಆಗ ಆನಂದಿತವಾಗಿದ್ದ ಅವರ ಮುಖಮುದ್ರೆಯು ಕಪ್ಪಾಯಿತು. ಕಣ್ಣಲ್ಲಿ ನೀರು ಸುರಿಯಹತ್ತಿದವು. ಮಾತಾಡಲಿಕ್ಕೆ ಬಾರದಂತಾಯಿತು. ಬಳಿಕ ಆ ಪತ್ರವನ್ನು ಅಲ್ಲಿಯೇ ಒಗೆದು ಕೆಳಗೆ ಮೋರೆ ಮಾಡಿಕೊಂಡು ಉಶ್ಶೆಂದು ಕುಳಿತರು. ಅಲ್ಲಿ ಕೂಡಿದ ರೈತರೆಲ್ಲ ದೇಸಾಯರ ಸ್ಥಿತಿಯನ್ನು ನೋಡಿ ಗಾಬರಿಯಾಗಿ, ಬಂದ ಪತ್ರವನ್ನು ಓದಲಿಕ್ಕೆ ದೇಸಾಯರ ಕಾರಕೂನನಿಗೆ ಹೇಳಿದರು. ಆಗ ದೇಸಾಯರ ಕಾರಕೂನನು ಅಲ್ಲಿ ಬಿದ್ದಿರುವ ಪತ್ರವನ್ನು ತೆಗೆದುಕೊಂಡು ಓದಹತ್ತಿದನು.

" ಬೊಮ್ಮಗೇರಿಯಿಂದ,

ತೀರ್ಥಸ್ವರೂಪರಾದ ಶ್ರೀಪತಿರಾಯರ ಚರಣ ಸನ್ನಿಧಿಗೆ—

ಶ್ರೀವಲ್ಲಭನ ಕಡೆಯಿಂದ — ಬರೆದು ತಿಳಿಸುವದೇನಂದರೆ — ನೀವು ಹಸುಮಾಪುರಕ್ಕೆ ಹೊರಟುಹೋದ ಮರುದಿವಸವೇ ಮಾತೋಶ್ರೀ ಸ. ಕುಂ. ಸೌ. ಚಂದ್ರಾವತಿಬಾಯಿಯವರಿಗೆ ಹೊಟ್ಟೆಶೂಲೆಯು ಎದ್ದು ಬಹಳ ತ್ರಾಸವಾಗಹತ್ತಿತು. ಆಗ ಬಲ್ಲವರನ್ನು ಕರೆದುಕೊಂಡು ಬಂದು ತೋರಿಸಿದೆನು. 'ಥಡೀ' ಹಾಕಿಸಿದೆನು. ಅದರಿಂದ ಏನೂ ಪ್ರಯೋಜನ ವಾಗಲಿಲ್ಲ. ಸಾಯಂಕಾಲಕ್ಕೆ ಪ್ರಸವವೇದನೆಯು ಹೆಚ್ಚಾಗಿ ಮೂರು ತಾಸು ರಾತ್ರಿಯ ಸುಮಾರಕ್ಕೆ ಗಂಡುಮಗುವನ್ನು ಹೆತ್ತರು. ಅದು ಕೂಡಲೆ ಸತ್ತಿತು. ಈಶಚಿತ್ತಕ್ಕೆ ಉಪಾಯವಿಲ್ಲ. ಬಾಯಿಯವರಿಗೆ ಇನ್ನೂ ಎಂಟು ತಿಂಗಳು ಪೂರ್ಣ ತುಂಬಿಲ್ಲವಾದ್ದರಿಂದ ನಂಜಿನ ಔಷಧ ಕುಡಿಸಿ ಅವರನ್ನು ಕತ್ತಲೆಯ ಕೋಣೆಯಲ್ಲಿ ಮಲಗಿಸಿರುವೆವು. ತಾಯಿಯವರ ಪ್ರಕೃತಿ

ನೆಟ್ಟಗಿದೆ. ಗಾಬರಿಯಾಗಬಾರದು. ಪತ್ರ ಕಂಡಕೂಡಲೆ ಹೊರಟು ಬರಬೇಕು.

ತಮ್ಮ
**ಟಿ. ಒಡಕಣ್ಣ.''**

ಪತ್ರದ ವರ್ತಮಾನವನ್ನು ಕೇಳಿ, ಎಲ್ಲ ರೈತರೂ ತಾವು ಹಾರೈಸಿದ್ದೆಲ್ಲ ವ್ಯರ್ಥವಾಯಿತೆಂದು ಮರುಗಿದರು. ಅಂತೂ ಅಗಸನ ಕತ್ತೆಯು ಮರಿಯು ಸತ್ತು ಅರಸನ ಪರಿವಾರವನ್ನೆಲ್ಲ ಅಳಿಸಿದಂತೆ ಪರಿವಾಣದ ಬಸಿರು ಎಲ್ಲರನ್ನೂ ದುಃಖದಲ್ಲಿ ಮುಳುಗಿಸಿತು. ಹಿರಿಯರಾದ ರೈತರು ದೇಸಾಯರಿಗೆ ಸಮಾಧಾನವನ್ನು ಹೇಳಿ, ಚಕ್ಕಡಿಯನ್ನು ಸಿದ್ಧಪಡಿಸಿ ದೇಸಾಯರನ್ನು ಬೊಮ್ಮಗೇರಿಗೆ ಕಳಿಸಿಕೊಟ್ಟರು.

ಶ್ರೀಪತಿರಾಯರು ಬೊಮ್ಮಗೇರಿಗೆ ಬರುವದರೊಳಗಾಗಿ, ಒಡಕಣ್ಣನು ಮುದ್ನೂರಿಗೆ ಪತ್ರ ಬರೆದು, ತಮ್ಮ ತಾಯಿಯವರನ್ನು ಕರೆಯಿಸಿದ್ದನು. ದುಃಖದಿಂದ ತಮ್ಮ ಮನೆಯನ್ನು ಸೇರಿ, ಒಡಕಣ್ಣನನ್ನು ಕಂಡು ಸಂತಪ್ತರಾದ ರಾಯರು ಅವನ ಮೇಲೆ ರೇಗಿದರು. ಕೂಡಲೆ ಒಕ್ಕಲಗಿತ್ತಿಯಾದ ಸಾವಕ್ಕನು ಒಳಗಿನಿಂದ ಒಂದು ಎರಡು ದಿವಸ ಬಾಯಿಯವರಿಗೆ ಬಹಳ ತ್ರಾಸವಾಗಿತ್ತೆಂದೂ, ಅವರ ದರ್ಶನವಾಗುವದೋ ಇಲ್ಲೋ ಎಂದು ಗಾಬರಿಯಾಗಿ ಅಳುತ್ತಿದ್ದರೆಂದೂ, ಇಂದು ಅವರ ಪ್ರಕೃತಿ ನೆಟ್ಟಗಿರುವದೆಂದೂ ಕೂಸಿನ ಮೇಲೆಯೇ ಅರಿಷ್ಟವು ಹೋಯಿತೆಂದೂ ಹೇಳಿದಳು. ಬಳಿಕ ಒಡಕಣ್ಣನು ತಾನು ನಂಜಿನ ಔಷಧ ತರಿಸಿ ಕೊಟ್ಟಿರುವದರಿಂದ ಅವರ ಜೀವಕ್ಕೇನೂ ಅಪಾಯವಿಲ್ಲವೆಂದೂ, ಮಾತ್ರ ಹತ್ತು ದಿವಸ ಕತ್ತಲೆಯ ಕೋಣೆಯಲ್ಲಿ ಮಲಗಿಸಿ ಜಾಗ್ರತರಾಗಿರಬೇಕೆಂದೂ ಹೇಳಿದನು. ಇವರೆಲ್ಲರ ಹೇಳಿಕೆಯಿಂದ ಶ್ರೀಪತಿರಾಯರಿಗೆ ಕೂಸು ಸತ್ತಿತೆಂದು ಅಸಮಾಧಾನವಾದರೂ ತಮ್ಮ ಹೆಂಡತಿ ಕ್ಷೇಮದಿಂದಿರುವಳೆಂಬುದನ್ನು ಕೇಳಿ, ದುಃಖದಲ್ಲಿಯೇ ಸಂತೋಷವನ್ನು ಹೊಂದಿದರು. ಬಳಿಕ ತನಗೆ ಮೈಲಿಗೆಯಿರುವದೋ ಹೇಗೆಂಬುದನ್ನು ವಿಚಾರಿಸಲಿಕ್ಕೆ ಅಣ್ಣಾದೀಕ್ಷಿತರನ್ನು ಕರೆಕಳುಹಿದರು.

ಅಣ್ಣಾದೀಕ್ಷಿತರು ಬಂದೊಡನೆ 'ಆದದ್ದಾಯಿತು, ಇನ್ನು ಈಶ ಸಂಕಲ್ಪದ ಬಗ್ಗೆ ನೀವು ಹೆಚ್ಚು ವ್ಯಸನಪಡಬಾರದು' ಎಂದು ದೇಸಾಯರಿಗೆ

ಸಮಾಧಾನ ಹೇಳಿದರು. ದೇಸಾಯರು ಮೈಲಿಗೆಯ ಬಗ್ಗೆ ವಿಚಾರಿಸಲಾಗಿ ಅಣ್ಣಾದೀಕ್ಷಿತರು ಮನಸ್ಸಿನಲ್ಲಿಯೇ ನಕ್ಕು ಮಾತನಾಡಿದರು: 'ಕೂಸು ಹುಟ್ಟಿದ ಮೇಲೆ ಧ್ವನಿಯನ್ನು ಕೂಡ ತೆಗೆದಿಲ್ಲ. ಸತ್ತೇ ಹುಟ್ಟಿದ ಕೂಸಿಗೆ ಎಲ್ಲಿಯ ಮೈಲಿಗೆ? ಏನೊ ಹುಟ್ಟಿದೆಯೆಂದು ಹತ್ತು ದಿವಸ 'ವೃದ್ಧಿ' ಯೊಂದನ್ನು ಮಾಡಬೇಕು.' ದೇಸಾಯರನ್ನು ಲೋಡಿಗೆ ಕುಳ್ಳಿರಿಸಿ ಅಲ್ಲಿಯೇ ನಿಂತ ಒಡಕಣ್ಣನ ಕಡೆಗೆ ವಕ್ರವಾಗಿ ನೋಡುತ್ತ ಅಣ್ಣಾದೀಕ್ಷಿತರು ಮತ್ತೆ ಮಾತಾಡಹತ್ತಿದರು. 'ನಮ್ಮ ಅಜ್ಜಂದಿರು ಬ್ರಹ್ಮಪುರಿ-ವರ್ಣನೆಯೊಳಗೆ ಬರೆದಿಟ್ಟಂತೆ ಬಲು ವಿಚಿತ್ರಕಾಲ ಬರಲಿಕ್ಕೆ ಹತ್ತಿದೆ. 'ಕಾಣದ್ದು ಕಂಡೀರಿ, ಕೇಳದ್ದು ಕೇಳೀರಿ' ಎಂದು ಬಾಲಬಸವರು ಸಾರಿದ ಹಾಗೆ, ಎಂದೆಂದಿಗೂ ಕೇಳದ್ದೂ ಕಾಣದ್ದೂ ನೋಡೋ ಹೊತ್ತು ಬಂದಿದೆ. ಹುಟ್ಟಿದ ಕೂಡಲೆ ಪಾಯಖಾನೆಯೊಳಗೆ ಕೂಸು ಬಿದ್ದದ್ದು ನೀವೆಂದಾದರೂ ಕೇಳಿದ್ದಿರಾ?' ಮುಂದೆ ತುಸು ಹೊತ್ತು ಅಲ್ಲಿಯೇ ಎಲೆಯಡಿಕೆ ತಿನ್ನುತ್ತ ಕುಳಿತ ಅಣ್ಣಾದೀಕ್ಷಿತರು, ಒಡಕಣ್ಣನು ಇನ್ನೂ ಅಲ್ಲಿಯೇ ತಮ್ಮ ಮಾತು ಕೇಳುತ್ತನಿಂತಿರುವದನ್ನು ಕಂಡು 'ಕಾಲ ಏನು, ತಾನೆ ಬರತsದ, ಆದರ ತಕ್ಕ ಪೀಳಿಗಿ ಹುಟ್ಟಲಿಕ್ಕೆ ಹತ್ತೇದ' ಎಂದು ಚುಚ್ಚಿ ಮಾತಾಡಿದರು. ಕೂಡಲೆ ಒಡಕಣ್ಣನು ಉರಿಮೋರೆ ಮಾಡಿಕೊಂಡು ಅಲ್ಲಿಂದ ಹೊರಟು ಹೋದನು. ತರುವಾಯ ಅಣ್ಣಾದೀಕ್ಷಿತರು, ದೇಸಾಯರಿಗೆ ಇನ್ನೊಮ್ಮೆ ಭೆಟ್ಟಿಯಾಗುತ್ತೇವೆಂದು ಹೇಳಿ ಹೊರಟುಹೋದರು. ಒಡಕನಿಗೆ ಮಾತ್ರ ಅಣ್ಣಾದೀಕ್ಷಿತರು ತಮ್ಮ ಗುಟ್ಟನ್ನೆಲ್ಲಾ ಹೊರಗೆಡವಿ ದೇಸಾಯರ ಮನಸ್ಸನ್ನು ತಮ್ಮ ಬಗ್ಗೆ ವಿಪರೀತ ಮಾಡಬಹುದೆಂಬ ಭಯವುಂಟಾಯಿತು. ಆದಕ್ಕಾಗಿ ಒಡಕಣ್ಣನು ದೇಸಾಯರ ಮನಸ್ಸು ಹೊಯ್ದಾಡದಂತೆ ಇನ್ನೊಂದು ತಂತ್ರವನ್ನು ಮಾಡಬೇಕೆಂದು ವಿಚಾರ ಮಾಡಿದನು.

ಹದಿನೈದು ದಿನಗಳ ವರೆಗೆ ಚಂದ್ರಾವತಿಬಾಯಿಯವರು ಕತ್ತಲೆಯ ಕೋಣೆಯನ್ನು ಬಿಟ್ಟು ಕದಲಲಿಲ್ಲ. ಒಕ್ಕಲಗಿತ್ತಿ ಸಾವಕ್ಕನು ಅವರ ಉಪಚಾರವನ್ನು ಬಹು ದಕ್ಷತೆಯಿಂದ ಮಾಡಿದಳು. ಒಡಕಣ್ಣನು ಗುಪ್ತವಾಗಿ ಚಂದ್ರಾವತಿಬಾಯಿಯವರ ತಿನಸುಗಳನ್ನು ಪೂರೈಸುವದರಲ್ಲಿ ನಿರತನಾಗಿದ್ದನು. ಒಡಕಣ್ಣನ ತಾಯಿಯವರು ಮನೆಗೆಲಸದಲ್ಲಿ ಮಗ್ನರಾಗಿದ್ದರಿಂದ

ಚಂದ್ರಾವತಿಬಾಯಿಯವರ ಕೋಣೆಯ ಕಡೆಗೆ ದಿವಸಕ್ಕೆ ಒಂದೆರಡು ಸಲ ಮಾತ್ರ ಹಣಿಕಿ ಹಾಕುತ್ತಿದ್ದರು. ಊರೊಳಗಿನ ಯಾವ ಹೆಣ್ಣುಮಕ್ಕಳೂ ದೇಸಾಯರ ಮನೆಯೊಳಗೆ ಬರದಂತೆ ಒಡಕಣ್ಣನು ವ್ಯವಸ್ಥೆಯನ್ನು ಮಾಡಿದ್ದನು. ಹೀಗಾದ್ದರಿಂದ ಚಂದ್ರಾವತಿಬಾಯಿಯವರು, ತೊಂದರೆಯಿಲ್ಲದೆ ಹದಿನೈದು ದಿವಸಗಳನ್ನು ಕತ್ತಲೆಯ ಕೋಣೆಯಲ್ಲಿ ಕಳೆದರು. ಕತ್ತಲೆಯ ಕೋಣೆಯ ವಾಸದಿಂದ ಅವರ ಮೋರೆ ಬಿಳುಪೇರಿತ್ತು. ತಮಗೆ ಕೂಸಿಲ್ಲದ ಕಾರಣ ಬಾಣಂತಿತನದ ಎಲ್ಲ ಔಷಧೋಪಚಾರಗಳನ್ನು ಅವರು ನಿರಾಕರಿಸಿದರು. ಒಂದು ದಿನ ಒಡಕನು ತನ್ನ ತಾಯಿಯವರೂ ದೇಸಾಯರೂ ಮನೆಯಲ್ಲಿ ಇಲ್ಲದ ಹೊತ್ತು ಸಾಧಿಸಿ ಚಂದ್ರಾವತಿಬಾಯಿಯವರಿಗೆ ಊರಲ್ಲಿ ಅವರ ಬಸಿರಿನ ಬಗ್ಗೆ ನಡೆದ ಮಾತುಗಳನ್ನೂ ಅದರಿಂದ ದೇಸಾಯರ ಮನದಲ್ಲಾಗಬಹುದಾದ ಪರಿಣಾಮವನ್ನೂ ನಿವೇದಿಸಿ, ಅದರ ಪರಿಹಾರಕ್ಕೆಂದು ಅವರಿಗೆ ತನ್ನದೊಂದು ಯುಕ್ತಿಬೋಧವನ್ನು ಮಾಡಿದನು. ಚಂದ್ರಾವತಿಬಾಯಿಯವರು ಅದಕ್ಕೆ ಒಪ್ಪಿದ ಬಳಿಕ ತನ್ನ ತಂತ್ರದ ಸಿದ್ಧತೆಯನ್ನು ಮಾಡಿದನು.

ಮರುದಿವಸ ದೇಸಾಯರು ಮಧ್ಯಾಹ್ನದ ಭೋಜನ ಮಾಡಿ ತಮ್ಮ ಕೋಣೆಯಲ್ಲಿ ಮಲಗಿದ್ದರು. ಒಡಕಣ್ಣನ ತಾಯಿಯವರು ಮನೆಗೆಲಸವನ್ನೆಲ್ಲ ತೀರಿಸಿಕೊಂಡು ಬಂದು ನಡುಮನೆಯಲ್ಲಿ ಹುಲ್ಲುಚಾಪೆಯ ಮೇಲೆ ಅಡ್ಡಾಗಿದ್ದರು. ಒಡಕಣ್ಣನು ಪಡಸಾಲೆಯಲ್ಲಿ ಹಾಸಿದ ಜಮಖಾನೆಯ ಮೇಲೆ ಕಾಲು ಚಾಚಿಕೊಂಡು ಕುಳಿತಿದ್ದನು. ಸುಮಾರು ಒಂಬತ್ತು ತಾಸಾಗಿರಬಹುದು. ಆಗ ಚಂದ್ರಾವತಿಬಾಯಿಯವರು ಕೋಣೆಯಲ್ಲಿ ಕುಳಿತು ತಮ್ಮ ತಲೆಗೂದಲನ್ನು ಹರವಿಕೊಂಡು, ಸೀರೆಯ ಸೆರಗನ್ನು ಟೊಂಕಕ್ಕೆ ಕಟ್ಟಿಕೊಂಡು, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು, ಭಯಂಕರ ರೂಪವನ್ನು ಧರಿಸಿ, ದೊಡ್ಡ ಧ್ವನಿಯಿಂದ ಆರ್ಭಟಿಸುತ್ತ ಒಮ್ಮಿಂದೊಮ್ಮೆ ನಡುಮನೆಗೆ ಬಂದರು. ಕೂಡಲೇ ನಡುಮನೆಯಲ್ಲಿ ತೇಲುಗಣ್ಣು ಹಾಕುತ್ತ ಮಲಗಿದ ಒಡಕಣ್ಣನ ತಾಯಿಯವರು ಗಾಬರಿಯಾಗಿ 'ಏ ಒಡಿಕ್ಯಾ! ಕೋಣ್ಯಾಗಿಂದ ದೆವ್ವ ಬಂತೋ ದೆವ್ವ! ಲಗೂ ಬಾರೋ' ಎಂದು ಕೆಟ್ಟ ಧ್ವನಿ ತೆಗೆದು ಚೀರಿದರು. ಕೂಡಲೆ ಒಡಕನು ಒಳಗೆ ಬಂದು 'ಅವ್ವಾ! ಹೀಂಗ್ಯಾಕ ಬೆದರತೀ?'

ಎಂದು ಕೇಳಿದನು. ಆಗ ಅವನ ತಾಯಿಯವರು 'ಅಲ್ಲೆ ನೋಡೋ! ಹ್ಯಾಂಗ ತಲಿ ಹರವಿಕೊಂಡು ಮೂಲ್ಯಾಗ ದೆವ್ವ ಕುಣಿಲಿಕ್ಕೆ ಹತ್ತೇದ!' ಎಂದು ಚೀರಿದರು. ಆಗ ಒಡಕಣ್ಣನು ಅತ್ತಕಡೆ ನೋಡಿ 'ಅದು ದೆವ್ವವಲ್ಲ, ಚಂದ್ರಾವತಿಬಾಯಿಯವರು' ಎಂದು ಮುಂಜಾನೆ ಬಾಯಿಯವರು ಹಿತ್ತಲಲ್ಲಿ ಹೋದಾಗ ಹೆದರಿಕೆ ಒಂದಿತೆಂದು ತನ್ನೆದುರಿಗೆ ಹೇಳುತ್ತಿದ್ದರೆಂದು ತಿಳಿಸಿ ಬಾಯಿಯವರನ್ನು ಕಟ್ಟಿ ಹಿಡಿದು ಎಳೆದು ತಂದು ಕಂಬಕ್ಕೆ ಆನಿಸಿ ಕುಳ್ಳಿರಿಸಿದನು. ಆಗ ದೆವ್ವವು 'ಏ ಪೋರಾ! ನನ್ನ ರಟ್ಟೀ ಹಿಡಿತೀದ್ಯಾ? ಸರೀ ಹಿಂದಕ್ಕೆ. ಆ ಶ್ರೀಪ್ಯಾ ಎಲ್ಲಿದ್ದಾನ? ಕರಿ ಅವನ್ನ!' ಎಂದು ಕೆರಳಿತು. ಆಗ ಒಡಕಣ್ಣನ ತಾಯಿಯವರು ಅಳುತ್ತ ಹೋಗಿ ಶ್ರೀಪತಿರಾಯರನ್ನು ಎಬ್ಬಿಸಿ ನಡುಮನೆಗೆ ಕರೆದುಕೊಂಡು ಬಂದರು. ರಾಯರು ಕಂಬಕ್ಕೆ ಕುಳಿತು ಆರ್ಭಟಿಸುತ್ತಿರುವ ಹೆಂಡತಿಯ ಭಯಂಕರ ಸ್ವರೂಪವನ್ನು ನೋಡಿ ಬೆದರಿದರು. ದೇಸಾಯರು ಹೆಂಡತಿಯ ಸ್ವರೂಪವನ್ನು ನೋಡಿ, ಅವಳಿಗೆ ಭೂತಬಾಧೆಯೇ ಆಗಿರಬೇಕೆಂದು ಮನದಲ್ಲಿ ನಿಶ್ಚಯಿಸಿ, ಆ ಊರ ಪ್ರಸಿದ್ಧ ವೇತಾಳಿಯಾದ ಬಸವಲಿಂಗಪ್ಪನನ್ನು ಕರೆಯಲಿಕ್ಕೆಂದು ಒಡಕಣ್ಣನನ್ನು ಕಳಿಸಿದರು. ಒಡಕಣ್ಣನು ಲಗುಬಗೆಯಿಂದ ಹೋಗಿ ತನ್ನ ಹಸ್ತಗತನಾದ ಬಸಲಿಂಗಪ್ಪನಿಗೆ ದೆವ್ವದ ಗುಟ್ಟನ್ನು ಅರುಹಿ ಕರೆದುಕೊಂಡು ಬಂದನು. ಬಸಲಿಂಗಪ್ಪನು ದೇಸಾಯರ ಮನೆಗೆ ಬಂದೊಡನೆಯೇ ಬಾಯಿಯವರನ್ನು ನೋಡಿ ಅವರಿಗೆ ದೊಡ್ಡ ದೆವ್ವ ಬಡಿದಿರುವದರಿಂದ ತನ್ನ ಕೈಲಾದ ಮಟ್ಟಿಗೆ ಅದರ ಪೀಡೆ ಪರಿಹಾರವಾಗುವ ಪ್ರಯತ್ನ ಮಾಡುವೆನೆಂದು ಹೇಳಿದನು. 'ಈಗ ಅನಕಾ ಅದನ್ನ ಬಿಡಸ್ತೇನಿ; ಪಾವ ಅಕ್ಕಿ, ಒಂದ ಟೆಂಗಿನಕಾಯಿ, ಐದು ಲಿಂಬಿಹಣ್ಣು, ಐದು ಬಾಳೀಹಣ್ಣು, ಎಲಿ, ಅಡಿಕಿಬೆಟ್ಟ, ಒಂದು ತಾಮ್ರದ ತುಂಬಿದ ಚೆರಿಗಿ, ತಗೊಂಡಕಾಸ ಬರ್ರಿ' ಎಂದು ತನ್ನ ಕಾರ್ಯಕ್ಕೆ ಅಣಿಯಾದನು. ಒಡಕಣ್ಣನು ಆ ಎಲ್ಲ ಸಾಮಗ್ರಿಯನ್ನು ತಂದಿಡುತ್ತಲೆ, ಬಸಲಿಂಗಪ್ಪನು ಅಕ್ಕೀಕಾಳಿನಿಂದ ರಂಗವನ್ನು ಹಾಕಿ, ನಾಲ್ಕು ಮೂಲೆಗೆ ಎಲೆ ಅಡಿಕೆ ಲಿಂಬೀಹಣ್ಣು ಬಾಳೇಹಣ್ಣುಗಳನ್ನಿಟ್ಟು ಅದರ ಮಧ್ಯದಲ್ಲಿ ತುಂಬಿದ ತಂಬಿಗೆಯನ್ನೂ ಅದರ ಮೇಲೆ ತೆಂಗಿನಕಾಯಿಯನ್ನೂ ಇಟ್ಟನು. ಬಳಿಕ ತಾನು ತಂದ ದುರಗವ್ವನ ತಾಳಿ (ಪ್ರತಿಮೆ) ಯನ್ನು ಆ ತಂಬಿಗೆಯ

ಮುಂದೆ ಸ್ಥಾಪಿಸಿ ಅದರ ಮುಂದೆ ಎಲೆ ಅಡಿಕೆ ನಿಂಬೆಯ ಹಣ್ಣು ಬಾಳೇ ಹಣ್ಣುಗಳನ್ನಿಟ್ಟು ದೇಸಾಯರಿಗೆ 'ಅಪನೋರ, ಐದ ಮೂಲಿಗೆ ಐದ ಪಾವಲಿ ಇಡ್ರಿ. ಈ ದೆವ್ವನ್ನ ಬಿಡಿಸತೇನಿ' ಎಂದನು. ಆಗ ದೇಸಾಯರು ಹಣವನ್ನು ಕೊಡಲು, ಅವನು ಧೂಪ ಕೆಂಡವನ್ನು ತರಿಸಿ ಅದರಲ್ಲಿ ಲೋಭಾನವನ್ನು ಹಾಕಿ ಅದರ ಹೊಗೆಯನ್ನು ಕೈಯಿಂದ ಕಾಯಿಗೆ ಬೀಸಹತ್ತಿದನು. ಬಳಿಕ ಆ ಧೂಪಾರತಿಯನ್ನು ಕೆಳಗಿಟ್ಟು ಕೈಯ್ಯಲ್ಲಿ ದುರಗವ್ವನ ಬೆತ್ತವನ್ನು ತೆಗೆದು ಕೊಂಡು ಕಣ್ಣು ಮುಚ್ಚಿ ಏನೇನೋ ಗುಣುಗುಣು ಮಂತ್ರವನ್ನು ಅಂದು ಮಂತ್ರಿಸಿ ಮೇಲಕ್ಕೆದ್ದು ಬೆತ್ತವನ್ನು ನೆಲಕ್ಕೆ ಮುಟ್ಟಿಸಿ, ಆರ್ಭಟಿಸುತ್ತ— 'ಎಲೇ! ನೀ ಇಲ್ಲಿದ್ರ ನನ ದುರಗಿ ಆಣೈತಿ, ಆಣೈತಿ! ಕಾಳೀ ಆಣೈತಿ! ನಿನ್ನ ಗತೀ ಪಾಡಾಗಾಕಿಲ್ಲ; ಲಗೂ ಏಳು ಇಲ್ಲಿಂದ....ಯಾಕ? ಏಳಾಕ ಒಲ್ಲೆಂತಿಯಾ? ನೋಡ ಈಗ! ನಿನ್ನ ಗತಿ ಹ್ಯಾಂಗಾಕ್ಕೈತಿ' ಎಂದು ಬೆತ್ತ ವನ್ನು ತಿರುಗಿಸುತ್ತ ದುರಗವ್ವನ ಅಂಗಾರವನ್ನು ಉಗ್ಗುತ್ತ 'ಅಹಹಾಹಾ! ದುರಗೀ ನಿನ್ನ ಸತ್ತೇವು ತೋರಿಸು' ಎಂದು ಕುಣಿಯಹತ್ತಿದನು. ಆಗ ತುಂಬಿದ ತಂಬಿಗೆಯ ಮೇಲಿಟ್ಟ ತೆಂಗಿನಕಾಯಿಯು ಗರಗರ ತಿರುಗಲಿಕ್ಕೆ ಹತ್ತಿತು. ಆಗ ಚಂದ್ರಾವತಿಬಾಯಿಯವರೂ ಎದ್ದು ಗರಗರನೇ ತಿರುಗ ಹತ್ತಿದರು. ಆಗ ದುರಗವ್ವನ ಪೂಜಾರಿಯು 'ನಿಲ್ಲು ಈಗ ಸುಮಾಕ! ಈಗಾರ ಬಿಟ್ಟು ಹೋಕ್ಕಿಯೋ ಇಲ್ಲೋ?' ಎಂದು ಕೂಗಿದನು. ಅದಕ್ಕೆ ದೆವ್ವನಿಂದ ಉತ್ತರವಾದರೂ ಯಥಾರ್ಥವಾಗಿಯೇ ಬಂದಿತು. 'ಥೀ! ಏಳs ಮಳ್ಳ! ನೀ ಏನ ದೆವ್ವ ಬಿಡಿಸಿದ್ದಿ; ಸುಮ್ಮನ ಮನೀಗೆ ಹೋಗು.' ಇದಕ್ಕೆ ವೇತಾಳ ಬಿಡಿಸುವವನು ಗಾಬರಿಯಾದವನಂತೆ ನಟಿಸಿ, ಆ ದೆವ್ವವನ್ನು ಬಿಡಿಸುವದು ತನಗೆ ಅಸಾಧ್ಯವಾದುದೆಂದು ತಿಳಿಸಿ, ತನಗೆ ಸಲ್ಲತಕ್ಕ ಹಣ, ತೆಂಗಿನಕಾಯಿ, ಹಣ್ಣುಹಂಪಲಗಳನ್ನೆಲ್ಲಾ ತೆಗೆದುಕೊಂಡು ಹೊರಟು ಹೋದನು. ಆಗ ದೇಸಾಯರು ಮುಂದುಗಾಣದಾದರು. ಕೊನೆಯ ಉಪಾಯವೆಂದು ತಾವೇ ದೆವ್ವಕ್ಕೆ ಸಾಷ್ಟಾಂಗವೆರಗಿ, ಅದು ಯಾರು, ಯಾವ ಕಾರಣವಾಗಿ ಬಂದಿರುವದು? ಎಂಬ ವಿಚಾರಣೆಯನ್ನು ಮಾಡಲಾಗಿ, ದೆವ್ವವು ಸ್ವಲ್ಪ ಸಮಾಧಾನದಿಂದ ಉತ್ತರವಿತ್ತಿತು: 'ಹೀಂಗ ಹಾದಿಗೆ ಬಾರಪಾ ದೆವ್ವನ್ನ ಬಿಡಿಸೋ ಅವರನ್ನ ತರಿಸತಾನಂತ! ಯಾರು ಬಂದು ಏನು ಮಾಡೋ

ಹಾಂಗ ಇದ್ದಾರ?” ಎಂದು ಗಹಗಹಿಸಿ ನಗುತ್ತ: “ನನ್ನ ಗುರ್ತು ನಿನಗ್ಯಾಂಗ ಹತ್ತೀತು? ಸತ್ತು ಆಗಲೇ ಇಪ್ಪತ್ತು ವರ್ಷಾತು! ಹೇಣತಿ ಜೊಚ್ಚಲ ಬಸರಾದರ ನನಗ ಚಕ್ಕಣೀ ಮಾಡಿ ಒಂದು ಸೀರಿ ಕುಬಸಾ ಏರಸಲಿಲ್ಲ! ಅದಕ್ಕಂತಽ ನಿನ್ನ ಕೂಸಿನ ಕುತಿಗೀ ಮುರಿದು ಪಾಯಖಾನ್ಯಾಗ ಒಗದೆ. ಅಂದ್ರೂ ನಿನಗ ಖಬರು ಬರಲಿಲ್ಲ. ನಿನಗ ಚಲೋತ್ನ್ಯಾಗಿ ಬುದ್ಧೀ ಕಲಿಸಬೇಕೂ ಅಂತ ಬಂದೇನಿ. ನಾನು ನಿಮ್ಮ ತಾಯಿ, ಸಾವಿತ್ರಿ. ತಿಳೀತೋ ಇಲ್ಲೋ?” ದೇಸಾಯರು ದೆವ್ವನ ಮಾತನ್ನು ಕೇಳಿ ವಿಸ್ಮಯ ಚಕಿತರಾದರು. ಅವರ ತಾಯಿ ತೀರಿದಾಗ ಅವರು ಚಿಕ್ಕ ವಯಸ್ಸಿನಲ್ಲಿದ್ದರು. ಆಮೇಲೆಯಾದರೂ ತಮ್ಮ ಮೃತ ತಾಯಿ ಪಿಶಾಚಿಯಾಗಿದ್ದಾಳೆಂದು ಅವರಿಗೆ ತಿಳಿದಿರಲಿಲ್ಲ. ಅವರಂಥ ದೊಡ್ಡ ಮನುಷ್ಯರಿಗೆ ಈ ತರಹದ ಕೀಳುಜನ್ಮ ಬರಬಹುದೆಂಬ ಕಲ್ಪನೆ ಯಾರ ಕನಸು-ಮನಸಿನಲ್ಲಿಯೂ ಇರಲಿಲ್ಲ. ಆದರೂ ಇಷ್ಟು ದಿವಸ ಇಲ್ಲದ ದೆವ್ವ ಇಂದು ಹೇಗೆ ಬಂದಿತು! ಎಂಬ ವಿಚಾರ ಅವರ ಮನಸ್ಸಿನಲ್ಲಿ ಮಿಂಚಿ ಹೋಯಿತು ಅಷ್ಟೆ. ಮುಂದೆ ಏನೂ ಹೊಳೆಯಲಿಲ್ಲ. ದೂರದೃಷ್ಟಿಯಿಲ್ಲದ ಮರುಳು ದೇಸಾಯರು ಹೆಂಡತಿಯ ಮೋಸಕ್ಕೆ ಸೆರೆ ಸಿಕ್ಕರು. ತಮ್ಮ ಮೃತ ತಾಯಿಯೇ ತಮ್ಮೆದುರು ಕುಳಿತು ಮಾತಾಡುವಳೆಂದು ತಿಳಿದು, ಭಕ್ತಿಯುತರಾಗಿ ಗಾಬರಿಯಿಂದ ನಡುಗುತ್ತ ನಿಲ್ಲಲು, ದೆವ್ವವು ಮತ್ತೆ ಪ್ರಾರಂಭಿಸಿತು: “ನಾನು ಸತ್ತಾಗ ನೀ ಇನ್ನೂ ಸಣ್ಣಾವ ಇದ್ದೀ. ಮಾಡಿಟ್ಟ ಗಂಟು ತೋರಿಸಬೇಕಂದ್ರ ಆಗಲಿಲ್ಲ. ಆ ವಾಸನಾ ಉಳದು ಈ ಕೆಟ್ಟ ಜನ್ಮ ಬಂದದ....ಅಟ್ಟದ ಮ್ಯಾಲಿನ ಬಾಗಿಲ ಮಾಡದ ಬುಡದಾಗ ಒಂದು ಮಗೀ ಒಳಗ ವರಾಹ ಹುಗದಿಟ್ಟೇನಿ. ಅವನ್ನ ತಗೋ.’

ದೇಸಾಯರು ಇದರ ಸತ್ಯತೆಯನ್ನು ತಿಳಿಯುವದಕ್ಕಾಗಿ ಅಟ್ಟದ ಮೇಲಿನ ಬಾಗಿಲ ಮಾಡವನ್ನು ಅಗಿದು ನೋಡಲು, ಅಲ್ಲಿ ಹತ್ತು ಇಕ್ಕೇರಿ ವರಗಳಿದ್ದ ಒಂದು ಮಣ್ಣಿನ ಮಗಿಯು ಅವರಿಗೆ ಸಿಕ್ಕಿತು. ಅದನ್ನು ನೋಡಿ ತಮ್ಮ ತಾಯಿಯು ದೆವ್ವವಾದದ್ದೇ ನಿಜವೆಂದು ನಂಬಿ, ಅವರು ನಡುಮನೆಗೆ ಬಂದು ದೆವ್ವನಿಗೆ ಕೈಮುಗಿದು ‘ಅವ್ವಾ! ನಿನ್ನ ಉದ್ಧಾರ ಆಗಬೇಕಾದ್ರ ನಾನು ಏನು ಮಾಡಬೇಕು ಹೇಳು? ಅದನ್ನ ಮಾಡತೇನಿ’ ಎಂದು ಧೈರ್ಯದಿಂದ ಕೇಳಿಕೊಂಡರು. ದೇಸಾಯರ ಧೆವ್ವವು ಬರಿಯ ಬಾಯಿಮಾತಿಗೆ

ಮರುಳಾಗುವಂಥದಲ್ಲ. ಅದಕ್ಕೆ ಬೇಕಾಗಿದ್ದು ತಮ್ಮ ಸತ್ಯವ್ರತಿಯಾದ ಮಗನ ವಚನ. ಆದ್ದರಿಂದ ತಾನು ಹೇಳಿದಂತೆ ಕೇಳುವ ಬಗ್ಗೆ ದೇಸಾಯಿ ರಿಂದ ವಚನವನ್ನು ಪಡೆದುಕೊಂಡು, ಹೇಳಿತು. ' ಇಕೋ ! ಈ ಚಂದ್ರಿ ನನ್ನ ಪ್ರೀತೀ ಸೊಸಿ. ಚಿಕ್ಕಂದಿನಿಂದ ಈಕಿನ್ನ ಎತ್ತಿ ಆಡಿಸಿದ್ದೆ. ನೀ ಈಕಿನ್ನ ಲಗ್ನಾ ಮಾಡಿಕೊಂಡದ್ದು ಛಲೋ ಆತು. ಆದರ ನಿನಗ ಸ್ವಂತ ಬುದ್ಧಿ ಇಲ್ಲಾ. ಮಂದೀ ಮಾತು ಕೇಳಿ ಮಂಗ್ಯಾನ್ಹಾಂಗ ಕುಣೀತೀದಿ. ಯಾರದಾರ ಮಾತ ಕೇಳಿ ಇನ್ನೊಂದು ಲಗ್ನಾ ಮಾಡಿಕೊಂಡಿ ಅಂದ್ರ ನೋಡು. ನಿಂದೂ ಆಕೀದೂ ಕೂಡೇ ಗೋಣು ಮುರೀತೇನಿ....ಮತ್ತ ಕಾಶಿಗೆ ಹೋಗಿ ನನ್ನ ಹೆಸರ್ಲೆ ಪಿಂಡಾ ಹಾಕಿ ಬಾ. ಅಂದರೆ ನಾನು ಉದ್ಧಾರ ಆಗತೇನಿ ' ಎಂದಿತು. ದೇಸಾ ಯರು ಇಷ್ಟೆಲ್ಲಾ ಕರಾರುಗಳಿಗೆ ಒಪ್ಪಿದ ಮೇಲೆ, ದೆವ್ವವು ತಾನು ಈಗ ಅವರ ಹೆಂಡತಿಯನ್ನು ಬಿಟ್ಟು ಹೋಗುವೆನೆಂದೂ, ಆದರೂ ತಾನು ಕುಳಿತ ಕಂಬವೇ ವಾಸಸ್ಥಾನವಾದ್ದರಿಂದ ಅಮಾವಾಸ್ಯೆಗೊಮ್ಮೆ ಅದರ ಪೂಜೆ ಮಾಡಿ ಒಬ್ಬ ಮುತ್ತೈದೆಗೆ ಊಟ ಮಾಡಿಸಬೇಕೆಂದೂ ಹೇಳಿತು.

ಕೂಡಲೆ ಚಂದ್ರಾವತಿಬಾಯಿಯವರು ಗದಗದ ನಡುಗಹತ್ತಿ ನಿರ್ವಿಣ್ಣ ರಾಗಿ ಎಚ್ಚರದಪ್ಪಿದಂತೆ ಭೂಮಿಯ ಮೇಲೆ ಬಿದ್ದರು. ಒಡಕನು ಗಾಳಿಯನ್ನು ಬೀಸುತ್ತ ನೆತ್ತಿಗೆ ನೀರು ಬಡಿದನು. ದೇಸಾಯರು ಹೆಚ್ಚಿದ ಗಾಬರಿಯಿಂದ ಬೆಪ್ಪಾಗಿ ನಿಂತರು. ಒಡಕಣ್ಣನ ತಾಯಿಯವರು ಬಿಸಿಬೂದಿಯನ್ನು ತಂದು ಕಾಲಿಗೆ ತಿಕ್ಕಿದರು. ಬಳಿಕ ಸ್ವಲ್ಪ ಹೊತ್ತಿನ ಮೇಲೆ ಚಂದ್ರಾವತಿಬಾಯಿ ಯವರು ಉಶ್ಶೆಂದು ಎದ್ದು ಕೋಣೆಯೊಳಗೆ ಹೋದರು. ಈ ಗದ್ದಲವನ್ನು ಕೇಳಿ ನೆರೆದ ಜನರು ದೇಸಾಯರ ತಾಯಿಯು ದೆವ್ವವಾಗಿ ಅವರ ಹೆಂಡತಿಯ ಮೈಮೇಲೆ ಬಂದಿದ್ದಳೆಂದು ಊರ ತುಂಬ ಸುದ್ದಿಯನ್ನು ಹರಡಿದರು. ದೇಸಾ ಯರ ಮನೆಯ ಪರಿಸ್ಥಿತಿಯನ್ನರಿತ ಜನರಿಗೆ ಇಲ್ಲಿಯೂ ಒಡಕನ ಸೂತ್ರವಿರ ಬಹುದೆಂದು ಭಾಸವಾಯಿತು. ಕೆಲವರು ಹುಗಿದಿಟ್ಟ ಬದುಕಿನ ಸುದ್ದಿ ಯನ್ನು ಕೇಳಿದ್ದರಿಂದ ದೆವ್ವವು ನಿಜವೆಂದೇ ನಂಬಿದರು.

ಮುಂದೆ ಕೆಲವು ದಿವಸಗಳ ತರುವಾಯ, ಒಡಕಣ್ಣನ ತಾಯಿಯವರು ಶ್ರಾವಣಮಾಸವು ಸಮೀಪಿಸಿದ್ದರಿಂದ ಶುಕ್ರವಾರದ ಗೌರಿಯನ್ನು ಕೂಡಿಸ ಲಿಕ್ಕೆ ಮುದ್ದೂರಿಗೆ ಹೋಗಬೇಕೆಂದು, ಮತ್ತು ಅದರ ನಿಮಿತ್ತವಾಗಿ ಚಂದ್ರಾ

ವತಿಬಾಯಿಯವರನ್ನು ಮುದ್ದೂರಿಗೆ ಕಳುಹಿಸಬೇಕೆಂದು ಹೇಳಿದರು. ಬಳಿಕ ಶ್ರೀಪತಿರಾಯರ ಅಪ್ಪಣೆಯನ್ನು ಪಡೆದು ಇಬ್ಬರೂ ಮುದ್ದೂರಿಗೆ ಹೋದರು.

ಶ್ರಾವಣ ಶುಕ್ರವಾರ ದಿನ ದೇಶಪಾಂಡೆ ಗಿರಿಧರರಾಯರ ಮನೆಯಲ್ಲಿ ಎಲ್ಲ ಹೆಂಗಸರೂ ಕೂಡಿದ್ದರು. ಆ ವೇಳೆಗೆ ಚಂದ್ರಾವತಿಬಾಯಿಯವರ ಬಸಿರಿನ ಕಥೆ ಅವರ ಮಾತುಕಥೆಗಳ ವಿಷಯವಾಗಿತ್ತು. ಅಂದು ಅಲ್ಲಿ ಕೂಡಿದ ಹೆಂಗಸರೆಲ್ಲ ಅದೇ ವಿಷಯವಾಗಿ ಹಾಸ್ಯಮಾಡಿದರು. ಯಾರಾದರೂ ಚೊಚ್ಚಲು ಬಸಿರಾದರೆ 'ದೇಸಾಯರ ಹೆಂಡತೀ ಹಾಂಗ ಬಸಿರಾಗ್ಯಾಳೇನು? ನೋಡ್ರಿ!' ಎಂದು ಗಂಡಸರು ಚೇಷ್ಟೆ ಮಾಡುವ ಪರಿಪಾಠವನ್ನು ರೂಢಿಯಲ್ಲಿ ತರಲು ಚಂದ್ರಾವತಿಬಾಯಿಯವರೇ ಕಾರಣವಲ್ಲವೆ?

———

## ೧೨

## ಸಿದ್ದಯ್ಯನ ಯಂತ್ರಮಂತ್ರಗಳು....

ಚಂದ್ರಾವತಿಬಾಯಿಯವರು ಒಡಕಣ್ಣನ ತಾಯಿಯೊಡನೆ ಮುದ್ದೂರಿಗೆ ಹೋದರೆಂದು ಹಿಂದೆ ಹೇಳಿದೆಯಷ್ಟೆ. ಅವರು ಮುದ್ದೂರಲ್ಲಿ ಗೋಪಾಳರಾಯರ ಆದರ-ಸತ್ಕಾರಗಳನ್ನು ಪಡೆಯುತ್ತ ಚಕ್ಕಂದದಿಂದ ಇರಹತ್ತಿದರು. ಒಡಕಣ್ಣನು ವಾರದಲ್ಲಿ ಎರಡು ಸಾರೆ ಬೊಮ್ಮಗೇರಿಗೆ ಹೋಗಿ ದೇಸಾಯರ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದು ಚಂದ್ರಾವತಿಬಾಯಿಯವರಿಗೆ ಎಲ್ಲ ಸಂಗತಿಯನ್ನು ತಿಳಿಸುತ್ತಿದ್ದನು. ಹೀಗಿರಲು ಒಂದು ದಿನ ಒಡಕಣ್ಣನು ಬೊಮ್ಮಗೇರಿಯಿಂದ ಜೋಲುಮೋರೆ ಮಾಡಿಕೊಂಡು ಮುದ್ದೂರಿಗೆ ಬಂದನು. ಅವನ ಮುಖವನ್ನು ನೋಡಿ ಚಂದ್ರಾವತಿಬಾಯಿಯವರು ಗಾಬರಿಯಾಗಿ ಒಡಕಣ್ಣನನ್ನು ಒಳಗೆ ಕರೆದು 'ಬೊಮ್ಮಗೇರಿಯಲ್ಲಿ ಏನು ವಿಶೇಷ ನಡೆದಿದೆ?' ಎಂದು ಕೇಳಿದರು. ಆಗ ಒಡಕಣ್ಣನು ಉಶ್ಶೆಂದು ನಿಟ್ಟುಸಿರು ಬಿಟ್ಟು ತಾವು ಇಷ್ಟುದಿನ ಮಾಡಿದ್ದೆಲ್ಲ ಹೊಳೆಯಲ್ಲಿ ಹುಣಿಸೆ

ಹಣ್ಣು ತೊಳೆದಂತಾಯಿತೆಂದು ಹೇಳಿದನು. ಅವನು ಹೋದಾಗ ದೇಸಾಯರ ಮನೆಯಲ್ಲಿ ಆ ಕಲ್ಲಂಭಟ್ಟರ ಬಳಕೆ ಬೆಳೆದಿತ್ತು. ಅವರು ದೇಸಾಯರಿಗೆ ಅವರ ಹೆಂಡತಿಯ ಗುಟ್ಟನ್ನೆಲ್ಲ ತಿಳಿಸಿ ಅವರ ಮನಸ್ಸನ್ನು ಕಲುಷಿತವಾಗಿಸಿದ್ದರು. ಒಡಕಣ್ಣಾಕನು ಯುಕ್ತಿಯಿಂದ ದೇಸಾಯರಿಗೆ ಅವರ ಮಿತ್ರರು ಇನ್ನೊಂದು ಮದುವೆಮಾಡಬೇಕೆಂದಿರುವರೆಂಬದನ್ನು ಅರಿತನು. ಅದನ್ನು ಕೇಳಿ ತಾವು ಇಷ್ಟುದಿನ ಸೂತದ್ದೆಲ್ಲ ಹಂಜಿಯಾಗುವ ಹೊತ್ತು ಮರಳಿತೆಂದು ಹಳಹಳಿಪಟ್ಟನು. ಚಂದ್ರಾವತಿಬಾಯಿಯವರಂತೂ ತಮ್ಮ ಗುಟ್ಟು ರಟ್ಟಾದುದನ್ನು ಕೇಳಿ ನಾಚಿಕೆಗೊಂಡು ಅವರ ಕೈಕಾಲೇ ಹೋದಂತಾದವು. ಏನಾದರೇನು ? ಹೆಣ್ಣಿನ ಮಾರಿತನವು ಒಮ್ಮೆ ಧೈರ್ಯತಾಳಿ ಮುಂದೆ ಬಂದಿತೆಂದರೆ ಎಂಥ ಭಯಂಕರ ಪ್ರಸಂಗದಲ್ಲಿಯೂ ಎದೆಗೊಟ್ಟು ನಿಲ್ಲುವದು! ಧೈರ್ಯಗೆಟ್ಟು ನಿಂತ ಒಡಕಣ್ಣಾನನ್ನುದ್ದೇಶಿಸಿ ಅವನನ್ನು ಹುರುಪುಗೊಳಿಸುವಂತೆ ಚಂದ್ರಾಬಾಯಿಯವರು ಮಾತನಾಡಿದರು. 'ನಾನು ನಿನ್ನನ್ನೇ ನಂಬಿರುವೆನು. ಒಂದು ಗುರಿ ತಪ್ಪಿದರೆ ಮತ್ತೊಂದು ಗುರಿಯನ್ನು ಹೂಡಿಯೇ ತೀರಬೇಕು. ನೀನೇನು ಕಡಿಮೆಯವನಲ್ಲ; ನಿನ್ನೆದುರು ಆ ಕಲ್ಲಂಭಟ್ಟನ ತಂತ್ರಗಳು ನಡೆಯುವದಿಲ್ಲ. 'ಅವರು' ನಾನು ಹೇಳಿದ ಹಾಗೆ ಕೇಳುವ ಏನಾದರೂ ಹೊಸ ಹಂಚಿಕೆಯನ್ನು ತೆಗೆಯಬೇಕು.' ಒಡಕಣ್ಣಾನೂ ಏನೋ ವಿಚಾರಮಾಡಿ. 'ಒಂದು ಹಂಚಿಕೆಯಿದೆ. ಆದರೆ ಅದಕ್ಕೆ ಮೀರಿದ ಸಾಹಸ ಮಾಡಬೇಕು; ದುಡ್ಡು ಖರ್ಚುಮಾಡಬೇಕು; ಅಂದರೆ ಕಾರ್ಯವು ಕೈಗೂಡುವದು.' ಎಂದನು. 'ಆಗಲಿ, ದುಡ್ಡಿನ ಕಾಳಜಿ ನೀನು ಮಾಡಬೇಡ. ಆದರೆ ಮೊದಲು ನಿನ್ನ ಹಂಚಿಕೆ ಹೇಳು.' ಎಂದು ಉತ್ತರ ಬಂದಿತು.

ಒಡಕಣ್ಣಾನಿಗೆ ದೇಸಾಯರ ವತನದ ಆಸೆ, ದುಡ್ಡಿನ ಸಹಾಯ, ಮತ್ತು ಮೇಲೆ ಹೆಣ್ಣಿನ ಮೋಹ. ಇವಿಷ್ಟಿದ್ದ ಮೇಲೆ ಸಮಯೋಚಿತ ಯುಕ್ತಿಗಳು ಹೊಳೆಯುವದರಲ್ಲೇನಾಶ್ಚರ್ಯ! ತಮ್ಮ ಊರಿಂದ ನಾಲ್ಕು ಮೈಲಿನ ಮೇಲಿರುವ ಹಳ್ಳಿಕೇರಿಯಲ್ಲಿ ಗೊಲ್ಲರ ಸಿದ್ದಯ್ಯನೆಂಬೊಬ್ಬ ಪ್ರವೀಣ ವೇತಾಳಿಯಿರುವನೆಂದು ಅವನು ಬಹುದಿವಸದಿಂದ ಕೇಳುತ್ತಿದ್ದ. ಹಳ್ಳಿಗಳಲ್ಲಿ ಇಂಥವರ ಅಗಾಧಕೃತಿಗಳ ವಾರ್ತೆ ಹಬ್ಬುವದೇನು ತಡವೇ? ಆ ಸಿದ್ದಯ್ಯನು ದೆವ್ವಗಳನ್ನು ಹಿಡಿಸುವನಿಷ್ಟೇ ಅಲ್ಲ; ಆದರೆ ಹುಲಿಗಳಿಗೆ ಮಾಟಮಾಡಿ ಅವಕ್ಕೆ

ಕಣ್ಣು ಕಾಣಿಸದಂತೆ ಮಾಡಿ ಅವುಗಳನ್ನು ನಾಶಮಾಡುವನೆಂಬ ವಾರ್ತೆ ಹಬ್ಬಿತ್ತು. ಈ ಸಂಗತಿಗಳಿಗೆ ಒಡಕಣ್ಣನಂಥವನ ವಾಗ್ಝರಿಯು ಜೋಡಣೆ ಸಿಕ್ಕಮೇಲೆ ಕೇಳುವದೇನು? ಆದರಲ್ಲೂ ಚಂದ್ರಾವತಿಬಾಯಿಯವರಂಥ ಮುಳ್ಳು ಹೆಂಗಸು ಶ್ರೋತೃಗಳಾಗಿದ್ದರು. ಆಯಿತು, ಒಡಕಣ್ಣನ ಉಪದೇಶದ ಪೂರ್ಣ ಪರಿಣಾಮವಾಯಿತು. ದೇಸಾಯರು ತಾವು ಹೇಳಿದಂತೆ ಕೇಳುವ ಹಂಚಿಕೆ ದೊರೆಯಿತೆಂದು ಚಂದ್ರಾವತಿಬಾಯಿಯವರಿಗೆ ಆನಂದವಾಯಿತು. ಆದರೆ ಮದ್ದುಮಾಟಗಳ ಪರಿಣಾಮವನ್ನು ಅವರು ಎಷ್ಟೋ ಸಲ ಕೇಳಿ ತಿಳಿದಿದ್ದರು. ಆದರಿಂದ ಇಷ್ಟವಾಗಬಹುದು; ಕೆಲವು ವೇಳೆ ಅನಿಷ್ಟವೂ ಲಭಿಸಬಹುದು. ಆದ ಕಾರಣ ಅವರಿಗೆ ಬಲವಾದ ಭಯವು ಉತ್ಪನ್ನವಾಯಿತು. ಅದರ ಪರಿಣಾಮವು ವಿಪರೀತವಾದರೆ ಮುಂದೆ ತಮ್ಮ ಗತಿಯೇನು? ಮನದಲ್ಲಿ ಕಳವಳಗೊಂಡು ಅವರು ನುಡಿದರು, ‘ಈ ಹಂಚಿಕೆ ಯೋಗ್ಯವಿದೆ. ಆದರೆ ಮದ್ದು-ಮಾಟಗಳು ಬಹಳ ಕಠಿಣವಂತೆ. ಆದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೆ ಮೆಚ್ಚು ಹೋಗಿ ಹುಚ್ಚರಾಗುವರಂತೆ!’

‘ಹೌದು; ಇದೊಂದು ಕಡೆಯ ಉಪಾಯ. ನೀವು ಈಗ ದಿಕ್ಕೇಡಿಗಳಾಗುವ ಹೊತ್ತು ಬಂದಿದೆ. ಇಂಥ ಸಮಯದಲ್ಲಿ ಆ ದೇಸಾಯರ ಹಿತದ ಕಡೆಗೆ ನೋಡುವದೇನು ನನಗೆ ಸರಿದೋರುವದಿಲ್ಲ. ತಾವೇ ಸಾಯುವ ಹೊತ್ತಿನಲ್ಲಿ ಮಂದಿಯನ್ನು ನೋಡುವದೆಲ್ಲಿಯ ನ್ಯಾಯವು? ಈ ಸಮಯದಲ್ಲಿ ನೀವು ಕೆಚ್ಚೆದೆಯನ್ನು ತೋರಿದರೆ ನನ್ನದೂ ನಿಮ್ಮದೂ ಕೂಡಿಯೇ ಕಲ್ಯಾಣವಾಗುವದು.’

ಇದನ್ನು ಕೇಳಿ ಚಂದ್ರಾವತಿಬಾಯಿಯವರು ಸುಮ್ಮನಾದರು. ಒಡ-ಕಣ್ಣನು ಹೋಗುವಾಗ, ‘ಹಾಗಾದರೆ ಆ ದೆವ್ವವನ್ನು ನೀವು ಇನ್ನೊಮ್ಮೆ ಇಲ್ಲಿ ತರಿಸಿರಿ; ಅಂದರೆ ನಾನು ನಿಮ್ಮನ್ನು ಕರೆದೊಯ್ಯುವದು ಹಗುರಾದ ಕೆಲಸ.’ ಎಂದು ಹೇಳಿದನು.

ಅಂದೇ ಮಧ್ಯಾಹ್ನಕ್ಕೆ ಊಟವಾದ ಮೇಲೆ ಹತ್ತುತಾಸಿನ ಸುಮಾರಕ್ಕೆ ಚಂದ್ರಾವತಿಬಾಯಿಯವರು ತಮಗೆ ಭೂತಬಾಧೆಯಾದ ವಿಧಾನವನ್ನು ಮುಗಿಸಿದರು. ಮನೆಯಲ್ಲಿ ಎಲ್ಲರೂ ಗಾಬರಿಯಾಗಿ ಗೊಂದಲದಲ್ಲಿ ಬಿದ್ದರು. ಒಡಕಣ್ಣನು ತಾತ್ಕಾಲಿಕ ಉಪಾಯಗಳನ್ನು ಮಾಡಿ ಆ ದೆವ್ವವನ್ನು ಮರಳಿ ಕಳಿಸಿ

ದನು. ಸಂಜೆಗೆ ಗೋಪಾಳರಾಯರು ಮನೆಗೆ ಬಂದಮೇಲೆ ಆದ ಸಂಗತಿಗಳ ನ್ನೆಲ್ಲ ಉಪ್ಪುಕಾರ ಹಚ್ಚಿ ಬಣ್ಣಿಸಿದನು. ಗೋಪಾಳರಾಯರು ಅಲ್ಲಿಯೇ ಮೂಲೆಯಲ್ಲಿ ಮುಸುಕು ಹಾಕಿಕೊಂಡು ಕುಳಿತ ಚಂದ್ರಾವತಿಬಾಯಿಯವ ರನ್ನು ಮಾತಾಡಿಸಿದರು. ಆಗ ಬಾಯಿಯವರು ತಮಗೆ ಭೂತಬಾಧೆಯಿಂದ ಬಹಳ ತ್ರಾಸವಾಗಿದ್ದರಿಂದ ಕೈಲಾದ ಪ್ರಯತ್ನಗಳನ್ನು ಮಾಡಿ ತಮ್ಮ ಕಷ್ಟ ವನ್ನು ಪರಿಹರಿಸಬೇಕೆಂದು ದೈನ್ಯದಿಂದ ಬೇಡಿಕೊಂಡರು. ಸಮೀಪದಲ್ಲಿದ್ದ ಒಡಕಣ್ಣಾಸು ಹಳ್ಳಿಕೇರಿಯ ಸಿದ್ದಯ್ಯನ ಬಗ್ಗೆ ತನಗೆ ತಿಳಿದ ಸಂಗತಿಯನ್ನು ಹೇಳಿ, ಅದೇ ಭೂತಪರಿಹಾರ ಸ್ಥಾನವೆಂದು ಸೂಚಿಸಿದನು. ಚಂದ್ರಾವತಿ ಬಾಯಿಯವರೂ ಅದನ್ನೇ ಹೇಳಿದರು. ಗೋಪಾಳರಾಯರು ಅದಕ್ಕೆ ನಿರ್ವಾಹವಿಲ್ಲದೆ ಒಪ್ಪಿ, ಶ್ರಾವಣ ಅಮಾವಾಸ್ಯೆಯು ಆದಿತ್ಯವಾರವಿರುವದ ರಿಂದ ಅಂದು ಅವರು ಹೋಗಿಬರಬಹುದೆಂದು ಹೇಳಿದರು.

ಈ ಪ್ರಕಾರ ಬಾಯಿಯವರು ಗೋಪಾಳರಾಯರ ಅಪ್ಪಣೆ ಪಡೆದು, ಶ್ರಾವಣದ ಆದಿತ್ಯವಾರ ದಿವಸ ಮುಂಜಾನೆ ಎದ್ದು ತಮ್ಮ ಪ್ರವಾಸದ ದೋಡಣಿಗಳನ್ನು ಮಾಡಿಕೊಂಡು ಒಡಕಣ್ಣಾನೊಡನೆ ಹೊರಟರು. ಮುದ್ಹೊ ರಿಂದ ಎರಡು ಮೈಲು ಹೋದ ಬಳಿಕ ದೊಡ್ಡ ಅಡವಿಯು ಹತ್ತಿತು. ಅಲ್ಲಿ ಅಡ್ಡತಿಡ್ಡಾದ ಮಾರ್ಗ; ನೀರಿನ ಸೆಳವಿನಿಂದ ಅಲ್ಲಲ್ಲಿ ಕೊರಕಲುಗಳು ಬಿದ್ದಿವೆ. ಗಿಡದ ಟೊಂಗೆಗಳು ಸವಾರಿಯ ಚಾಪೆಗೆ ತಟಿದು ಚಾಪೆಯನ್ನು ಹರಿಯ ಹತ್ತಿವೆ. ಅಲ್ಲಲ್ಲಿ ಮಾರ್ಗದಲ್ಲಿ ನೀರು ನಿಂತಿದ್ದು ಚಕ್ಕಡಿಯ ಗಾಲಿಗಳು ಕೆಸರಿನಲ್ಲಿ ಸಿಗಿಬೀಳಹತ್ತಿವೆ; ಹೀಗಾದ್ದರಿಂದ ಹಿಂದೆ ಒಗ್ಗಾಲಿಯಾಗದಂತೆ ಚಕ್ಕಡಿಯನ್ನು ಹಿಡಿದು ಸಾವಕಾಶವಾಗಿ ಅದನ್ನು ಹೊಡೆಯಹತ್ತಿ ದ್ದಾರೆ. ಅಷ್ಟರಲ್ಲಿ ಒಂದು ಇಕ್ಕಟ್ಟಾದ ಇಳಿಜಾರ ಮಾರ್ಗವು ಒಂದಿತು. ಆಗ ಚಕ್ಕಡಿಹೊಡೆಯುವವನು ನಡೆಯುತ್ತ ಬರುವದೇ ಯೋಗ್ಯವೆಂದು ಒಡಕಣ್ಣಾಸಿಗೆ ಹೇಳಿದನು. ಆಗ ಒಡಕಣ್ಣಾನೂ ಚಂದ್ರಾವತಿಬಾಯಿಯವರೂ ಇಳಿದು ಹಿಂದಿನಿಂದ ನಡೆಯುತ್ತ ಬರಹತ್ತಿದರು. ಇಳಿಜಾರಿಯ ಮಾರ್ಗ ವಿದ್ದುದರಿಂದ ಎತ್ತುಗಳು ಓಡಹತ್ತಿ ಚಕ್ಕಡಿಯು ಸ್ವಲ್ಪ ಮುಂದೆ ಹೋಯಿತು. ಚಂದ್ರಾವತಿಬಾಯಿಯವರು ಇಂಥ ಅರಣ್ಯವನ್ನು ಎಂದೂ ನೋಡಿದ್ದಿಲ್ಲ. ನೀಟಾಗಿ ಬೆಳೆದ ತೇಗಿನ ಗಿಡಗಳನ್ನೂ, ಮತ್ತಿ, ಹೊನ್ನಿ

ಸಿಸವು ಮೊದಲಾದ ಮಹಾವೃಕ್ಷಗಳನ್ನು ನೋಡಿ ಅವರು ದಂಗುಬಡೆದರು. ಅಲ್ಲಲ್ಲಿ ಅನೇಕ ಪೆಳೆಗಳು ಹಬ್ಬಿದ್ದವು. ಬಿದುರಿನ ಪೆಳೆಗಳು ಹಸಿರು ಬಣ್ಣದಿಂದ ಕಂಗೊಳಿಸುತ್ತಿದ್ದವು. ಶ್ರೀಗಂಧದ ಗಿಡಗಳ ಸುತ್ತಲೂ ಚದುರಂಗದ ಬಳ್ಳಿಗಳು ಹಬ್ಬಿ ಮೇಲೆ ಬೆಳೆದು ಆ ಗಿಡಗಳನ್ನು ಹತ್ತಿಕ್ಕಿ ಹಿಂಸ್ರಪಶುಗಳಿಗೆ ಆಶ್ರಯಕೊಟ್ಟಿದ್ದವು. ಅಲ್ಲಿ ನವಿಲುಗಳು ನರ್ತಿಸುತ್ತಿದ್ದವು. ಅನೇಕ ಜಾತಿಯ ಹಕ್ಕಿಗಳು ಧ್ವನಿಗೈಯ್ಯುತ್ತಲಿದ್ದವು. ಹಸಿರು ಹುಲ್ಲಿನಲ್ಲಿ ಅಡಗಿದ ಹುಳುಗಳು ಚಿರ್‌ಗುಟ್ಟುತ್ತಲಿದ್ದವು. ಗಾಳಿಯ ವೇಗದಿಂದ ಮರಗಳು ಒಂದಕ್ಕೊಂದು ತಿಕ್ಕಾಡಿ ಭಯಂಕರ ಶಬ್ದವಾಗುತ್ತಿತ್ತು. ಅಡವಿಯ ಹಂದಿಗಳು ಗುರುಗುಟ್ಟುತ್ತಿದ್ದವು. ಹುಲಿಗಳು ಗುಡುಗು ಹಾಕುತ್ತಿದ್ದವು. ಚೀರನಾಯಿಗಳು ಬೆನ್ನುಹತ್ತಿದ್ದರಿಂದ ಸಾರಂಗಗಳು ಮೈಮೇಲೆ ಎಚ್ಚರವಿಲ್ಲದೆ ದೊಡ್ಡದೊಡ್ಡ ಪೆಳೆಗಳನ್ನು ಹಾರುತ್ತ ಚಂದ್ರಾವತಿಬಾಯಿಯವರ ಮೇಲೆಯೇ ಜಿಗಿದವು. ಆಗ ಚಂದ್ರಾವತಿಬಾಯಿಯವರು ಗಾಬರಿಯಾಗಿ ಚಕ್ಕಡಿಯನ್ನು ತರುಬಲಿಕ್ಕೆ ತಿಳಿಸಿ ಲಗುಬಗೆಯಿಂದ ಹೋಗಿ ಚಕ್ಕಡಿಯಲ್ಲಿ ಕುಳಿತರು. ಬಳಿಕ ಚಕ್ಕಡಿಯು ಒಂದು ದಿನ್ನೆಯನ್ನು ಹತ್ತಬೇಕಾಯಿತು. ಅಲ್ಲಿಂದ ಅರಣ್ಯವನ್ನು ನೋಡಿದರೆ ಈ ಅರಣ್ಯಕ್ಕೆ ಅಂತವಿಲ್ಲವೆಂಬಂತೆ ಕಾಣುತ್ತಿತ್ತು. ಆಗ 'ಚಂದ್ರಾವತಿಬಾಯಿಯವರು ಹಳ್ಳೀಕೇರಿಯು ಇನ್ನೂ ದೂರವಿರಬಹುದೆಂದು ತಿಳಿದರು. ಅಷ್ಟರಲ್ಲಿ ಚಕ್ಕಡಿಯು ಆ ದಿನ್ನೆಯನ್ನು ಇಳಿಯಹತ್ತಿತು. ಅಲ್ಲಿ ಸ್ವಲ್ಪ ಬೈಲು ಪ್ರದೇಶವೂ ಹತ್ತೆಂಟು ಹುಲ್ಲ ಗುಡಿಸಲುಗಳೂ, ಒಂದು ಹಂಚಿನ ಮನೆಯೂ ಅವರ ಕಣ್ಣಿಗೆ ಕಾಣಿಸಿದವು. ಚಕ್ಕಡಿ ಹೊಡೆಯುವವನು ಇದೇ ಹಳ್ಳೀಕೇರಿಯೆಂದು ಒಡಕಣ್ಣನಿಗೆ ತಿಳಿಸಿದನು. ಬಳಿಕ ಬತ್ತದ ಗದ್ದೆಗಳು ಕಣ್ಣಿಗೆ ಬಿದ್ದವು. ಆ ಗದ್ದೆಗಳ ಸುತ್ತಲೂ ಬಿದುರು-ಬೇಲಿಯನ್ನು ಕಟ್ಟಿದ್ದರು. ಕೆಸರಿನಲ್ಲಿ ನಾಲ್ಕಾರು ಹೊಲಗಳನ್ನು ದಾಟಬೇಕಾದರೆ ಅರ್ಧತಾಸು ಹಿಡಿಯಿತು. ಅಂತೂ ನಾಲ್ಕು ತಾಸು ಮಾರ್ಗಕ್ರಮಣ ಮಾಡಿ ನಾಲ್ಕು ಮೈಲು ಬಂದು ಹಳ್ಳೀಕೇರಿಗೆ ಮುಟ್ಟಿದರು. ಅಲ್ಲಿದ್ದ ದೊಡ್ಡ ಹಂಚಿನ ಮನೆಯು ಆ ಊರ ಗೌಡರದಿರಬಹುದೆಂದು ತಿಳಿದ ಒಡಕಣ್ಣನು ಅಲ್ಲಿಗೇ ಚಕ್ಕಡಿಯನ್ನು ಹೊಡೆಸಿದನು. ಬಳಿಕ ಒಡಕಣ್ಣನು ಚಕ್ಕಡಿಯಿಂದ ಇಳಿದು ಗೌಡರಿಗೆ ಭೆಟ್ಟಿಯಾಗಿ ತಾನು ಮುಂದುಗ್ಧರ ದೇಸಾಯರ

ಮಗನೆಂದು ಹೇಳಿ ಸವಿನುಡಿಗಳಿಂದ ಗೌಡರ ಮನಸವನ್ನು ಒಲಿಸಿ, ಗೌಡರ ಕೊಟ್ಟಿಗೆಯಲ್ಲಿ ಎತ್ತುಗಳನ್ನು ಕಟ್ಟಿಸಿದನು. ಚಂದ್ರಾವತಿಬಾಯಿಯವರನ್ನು ಕರೆದುಕೊಂಡು ಹೋಗಿ ಒಡಕನು ಗೌಡರ ಮನೆಯ ಹೆಣ್ಣುಮಕ್ಕಳ ಹತ್ತಿರ ಕಳಿಸಿದನು. ಬಳಿಕ ಅವನೂ ಊರಲ್ಲಿ ತಿರುಗಾಡಿ ಊರ ಹೊರಗಿದ್ದ ಗೊಲ್ಲರ ಸಿದ್ದಯ್ಯನ ಮನೆಯನ್ನು ಗೊತ್ತುಹಚ್ಚಿಕೊಂಡು ಅಲ್ಲಿಗೆ ಹೋದನು. ಆಗ ಸಿದ್ದಯ್ಯನು ಹುಲ್ಲುಚಾಪೆಯ ಮೇಲೆ ಕುಳಿತು ಚಿಲುಮೆಯಲ್ಲಿ ತಂಬಾಕ ಹಾಕಿ ಅದನ್ನು ಸೇದುತ್ತಲಿದ್ದನು. ಆಗ ಅವನ ಮುಖವೂ ಬಾಯಿಂದ ಬಿಡತಕ್ಕ ಹೊಗೆಯೂ ತಲೆಯ ಮೇಲಿದ್ದ ಕೂದಲುಗಳೂ ವಿಂಗಡಿಸಲಿಕ್ಕೆ ಬರದಂತಿದ್ದವು. ವರಾಹಮುಖಗಜದಂತೆ ಅವನ ಆಕಾರವಿತ್ತು. ಅವನು ಒಡಕಣ್ಣನನ್ನು ನೋಡಿ, 'ನೀವು ಯಾವೂರೋರು? ಯಾರ ಹಂತ್ಯಾಕ ಬಂದೀರಿ?' ಎಂದನು.

'ನಿನ್ನ ಹಂತ್ಯಾಕ ಬಂದೇನೆಪಾ. ನಮ್ದೊಂದು ಕೆಲಸೈತಿ' ಎಂದ ಒಡಕಣ್ಣ.

'ರೊಕ್ಕ ಕೈಯ್ಯಾಗ ಬಂದವಂದ್ರ, ಕೆಲಸ ಹಗರಕೀಲೆ ಆಕ್ಕೈತಿ.'

'ರೊಕ್ಕದ ಕಾಳಜೀ ನೀ ಬಿಡು' ಎನ್ನುತ್ತ ಒಡಕಣ್ಣನು ಸಿದ್ದಯ್ಯನ ಕೈಯ್ಯಲ್ಲಿ ಹತ್ತು ರೂಪಾಯಿಗಳನ್ನಿಟ್ಟನು. 'ಆದರೆ ಕೆಲಸ ಮಾತ್ರ ಘನ ಐತಿ. ಯಾರ ಮುಂದೂ ಒಂದು ತುಟಿ ಎರಡು ಮಾಡಬಾರದು..' ಹೀಗೆಯೇ ಮುಂದೆ ಮಾತಾಡುವವನು; ಅಷ್ಟರಲ್ಲಿ ಸಿದ್ದಯ್ಯನು ಅವನನ್ನು ನಡುವೆ ತಡೆದು, 'ಅಂತಾದೇನ ಕೆಲಸರೀ? ಹೆಣ್ಣು ಒಲಿಸಿಗೊಳ್ಳೊದೈತೋ, ಮಾಟ ಮಾಡೋದೈತೋ? ಹೇಳ್ಯಾರ ಹೇಳ್ರಲ್ಲ?'

'ಛೀ ನಿನ ಮಂಜಾಳ ಹೋಗಾ! ಹೆಣ್ ಒಲಿಸಿಗೊಳ್ಯಾಕ ನೀ ಯಾಕ ಬೇಕೊ? ನನ್ನ ಕೆಲಸ ಬ್ಯಾರೇನss ಐತಿ. ನಿನ್ನ ಕಡೀಗೆ ಒಂದ ಗಿರಾಕಿ ತಂದೇನಿ. ಈಗೊಂದು ನಾಲ್ಕೈದು ವರ ದುಡ್ಡು ಸಿಗತೈತಿ. ಕೆಲಸ ಕೈಗೂಡಿದ ಮೇಲೆ ನಾನೂ ಹತ್ತೆಂಟು ವರ ಕೊಡತೇನಿ.' ಆ ಮೇಲೆ ಒಡಕಣ್ಣನು ತಾನು ಬೊಮ್ಮಗೇರಿಯ ದೇಸಾಯರ ಕುಟುಂಬವನ್ನು ಕರೆತಂದಿರುವದಾಗಿಯೂ, ಗಂಡಹೆಂಡರ ಜಗಳವಿದ್ದದದರಿಂದ ದೇಸಾಯರು ಹೆಂಡತಿ ಹೇಳಿದಂತೆ ಕೇಳುವ ಉಪಾಯವನ್ನು ಮಾಡಬೇಕೆಂದೂ ಹೇಳಿದನು.

‘ ಅದೇನು ದೊಡ್ಡ ಕೆಲಸ ಬಿಡ್ರಿ. ಆದರ ಆ ದೇಸಾಯಿ ಬಲು ದೊಡ್ಡ ಮನಸ್ಯಾರು ನೋಡ್ರಿ. ಒಮ್ಮೆ ನಾನು ಬೊಮ್ಮಗೇರ್ಯಾಗ ಹೆಂಡ ಕುಡುದು ಅಂಗಿ ಹರಕೊಂಡಿದ್ದೆ. ರಾತ್ರಿ ಥಂಡ್ಯಾಗ ‘ ಕಟಕಟ ’ ನಡಿಗಿಕೊಂತ ತಿರಗಿ ಹೊರಟಿದ್ದೆ. ದೇಸಾಯರು ನನಗೆ ಬೆಚ್ಚಗ ಹೊತಗೊಣ್ಣಾಕ ಕಂಬಳಿ ಕೊಟ್ಟು ಕಳಿಸಿದರು. ಅಂಥ ಮನಸ್ಯಾನ ಮ್ಯಾಲ ತಿರಗಿ ಬೀಳೋದಂದ್ರ ಮನಸ್ಸು ಒಗ್ಗೊದಿಲ್ರಿ. ’

‘ ಇಷ್ಟs ಹೌದಲ್ಲೋ? ನನಗ ದೇಸಗತಿ ಸಿಕ್ಕಮೇಲೆ, ನಿನಗ ಒಂದು ಹೊಲಾ ಕೊಡತೇನಿ. ಆದರ ಆ ದೇಸಾಯಿ ಮಾತ್ರ ಎಂಟು ಹತ್ತು ದಿವಸದೊಳಗs ಮುಕ್ಕಾಯ ಹೇಳಿಸಬೇಕು ’ ಎಂದು ಒಡಕಣ್ಣನು ಹೇಳಿದೊಡನೆ ದುಡ್ಡಿನ ಆಸೆಗಾಗಿ ಇಂಥ ಕೃತ್ಯಗಳಿಗೆ ಕೈಹಾಕುತ್ತಿದ್ದ ಅವನು, ಒಡಕಣ್ಣನ ನವಿಮಾತಿಗೆ ಮರುಳಾಗಿ ಒಪ್ಪಿಕೊಂಡನು. ಒಡಕಣ್ಣನು ಎಲ್ಲವನ್ನು ಸಿದ್ಧಗೊಳಿಸಿ ಚಂದ್ರಾವತಿಬಾಯಿಯವರನ್ನು ಕರೆದುತಂದನು. ಅವರಿಬ್ಬರೂ ಸನಿಯಕ್ಕೆ ಬರುತ್ತಲೇ ಸಿದ್ದಯ್ಯನು ಕಣ್ಣುಚಿಪಟುತ್ತ ‘ ಜೋಡಿ ಬೇಸಿ ಕೂಡ್ಯೆತಿ ಬಿಡ್ರಿ ’ ಎಂದನು. ಚಂದ್ರಾವತಿಬಾಯಿಯವರು ಗಾಬರಿಯಾಗಿ ನಾಚಿಕೆಯಿಂದ ತಲೆಬಾಗಿಸಿದರು.

ಒಡಕಣ್ಣ ಮತ್ತು ಚಂದ್ರಾವತಿಬಾಯಿಯವರು ಒರುವದರೊಳಗೇ ಸಿದ್ದಯ್ಯನು ತನ್ನ ಹಿತ್ತಲದಲ್ಲಿ ಹಾಕಿದ ಹಂದರದಲ್ಲಿ ಗೊಂಗಡಿ ಹಾಸಿಕೊಂಡು ತನ್ನ ಎಲ್ಲ ಸಾಹಿತ್ಯಗಳೊಂದಿಗೆ ಸಜ್ಜಾಗಿ ಕುಳಿತಿದ್ದನು. ಒಡಕಣ್ಣನು ಚಂದ್ರಾವತಿಬಾಯಿಯವರೊಂದಿಗೆ ಬಂದ ಕೂಡಲೆ ಅವರಿಗೆ ತನ್ನ ಎದುರಿಗೆ ಹಾಸಿದ ಹುಲ್ಲುಚಾಪೆಯ ಮೇಲೆ ಕುಳಿತುಕೊಳ್ಳಲಿಕ್ಕೆ ತಿಳಿಸಿದನು. ಅವರು ಚಾಪೆಯ ಮೇಲೆ ಕುಳಿತ ಮೇಲೆ ಒಡಕಣ್ಣನು ಸಿದ್ದಯ್ಯನ ಪ್ರಸಿದ್ಧಿಯನ್ನು ಕೇಳಿರುವದಾಗಿಯೂ, ತಮ್ಮ ಕೆಲಸ ಮಾಡಿಕೊಟ್ಟರೆ ಅವನ ಕೀರ್ತಿ ದೇಶದಲ್ಲೆಲ್ಲ ಹಬ್ಬುವದೆಂದೂ ಹೇಳಿದನು. ಸಿದ್ದಯ್ಯನು ಹುರುಪಿನಿಂದ ಮಾತಾಡ ಹತ್ತಿದನು. ‘ ನಿಮ್ಮ ಮನಸ್ಸಿನಾಗ ಏನೈತಿ? ಎಲ್ಲಾನೂ ಬಿಚ್ಚಿ ಹೇಳ್ರಿ. ಅದಕ್ಕ ತಕ್ಕ ಮದ್ದ ಮಾಡತೇನಿ. ಏತಾಳ ಸಾಕೇನಿ. ದೆವ್ವನ್ನ ಬಿಡಸ್ತೇನಿ. ಗಿಡಮೂಲಕೀ ಯಿದ್ಯಾ ಐತಿ. ನಮ್ಮ ಯಿದ್ಯಾ ಬಾಳಬಾಳ ಐತ್ರೀ, ಆದರ ಮಟ್ಟು ನಿಮಗ ತಿಳಿಯಾಕಿಲ್ರಿ ಕಗ್ಗ ಮಂದಿ; ಅದಕ್ಕs ಮುಂದ ಬಂದಿಲ್ರಿ ’

ಎಂದು ಹೇಳಿದನು. ಆ ಮೇಲೆ ತನ್ನಲ್ಲಿಯ ತೊಪ್ಪಲವನ್ನು ತೆಗೆದುಕೊಂಡು ರಾಪಿಸ ಬೆಲ್ಲದ ಮೇಲೆ ಹಾಕಿ ಅವರಿಬ್ಬರಿಗೂ ತಿನ್ನಲಿಕ್ಕೆ ಕೊಟ್ಟನು. ಬೆಲ್ಲವೆಲ್ಲ ಮಣ್ಣಾಗಿ ಹೋಗಿತ್ತು. ಬಾಯಿಯವರು 'ಆ ಎಲೆಯನ್ನು ಹೂರಣದಲ್ಲಿ ಹಾಕಿದರೆ ಹೂರಣದ ರುಚಿ ಕೆಡಬಹುದಲ್ಲವೇ? ಎಂದು ಕೇಳಿದರು. ಆಗ ಅವನು ಅದಕ್ಕೆ ಗೂಳಮೂಲಿ ತೊಪ್ಪಲವೆನ್ನುವರೆಂದೂ, ಅದನ್ನು ಬೆಲ್ಲದ ಭಟ್ಟಿಯಲ್ಲಿ ಹಾಕಿ ಎಲ್ಲ ಬೆಲ್ಲವನ್ನು ಕೆಡಿಸಬಹುದೆಂದೂ ಹೇಳಿದನು. ಆ ಮೇಲೆ ತನ್ನಲ್ಲಿಯ 'ವೇತಾಳೀ ಚಕ್ಕಿ', 'ಭೂತಾಳೀ ಚಕ್ಕಿ', 'ಏದಿನ ಮುಳ್ಳು' ಮುಂತಾದ ಚಮತ್ಕಾರಶಕ್ತಿಯುಳ್ಳ ಸಾಧನಗಳನ್ನು ತೋರಿಸಿದನು. ಅವನ ವಿದ್ಯೆಯನ್ನೂ, ಶಕ್ತಿಯನ್ನೂ ನೋಡಿ ಚಂದ್ರಾವತಿಬಾಯಿಯವರು ಬೆರಗಾದರು. ಅದನ್ನು ತಿಳಿದು ಸಿದ್ಧಯ್ಯನು ತನ್ನ ಸಾಮರ್ಥ್ಯವನ್ನು ಹೆಚ್ಚಾಗಿ ಹೊಗಳಿಕೊಳ್ಳಹತ್ತಿದನು. 'ಇದೇನ ಮಾಡತೀರಿ? ಇನ್ನೂ ಎಂತೆಂತಾ ಗಿಡಮೂಲಿಕಿ ಐತ್ರೀ. ಅದರ ಯಿದ್ಯಾ ಗೊತ್ತಿದ್ದರ ಬೇಕಾದ ಬುಡಮೇಲ ಮಾಡಾಕ ಬರತೈತ್ರಿ. ಇದು ಕಂಡಕಂಡವರಿಗೆ ಬರೋದಿಲ್ಲ. ಬಾಳ ಶ್ರಮ ಐತ್ರೀ ಈದನ್ನು ಗಳಿಸೋದು! ನಾನು ಬಾವಾಜೇರ ಬೆನ್ಹತ್ತಿ ಹತ್ತ ವರಸ ತಿರಿಗಿ ಈ ಯಿದ್ಯಾ ಗಳಿಸೇನ್ರಿ! ಈ ಯಿದ್ಯಾದಿಂದ ಗಿಡಾ ಬಳ್ಳೀ ಕಾಯಿ ಆಗದ್ಹಾಂಗ ಮಾಡಾಕ ಬರತೈತ್ರಿ. ಮನ್ಯಾಗ ಜಗಳಾ ಹಚ್ಚಾಕ ಬರತೈತ್ರಿ' ಎಂದು ಅವನು ಬಣ್ಣಿಸಿ ಆ ಮೇಲೆ ಒಂದು ಹೆಣ್ಣು ಹಾಗು ಒಂದು ಗಂಡು ಗೊಂಬೆಯನ್ನು ತೆಗೆದುಕೊಂಡು ಅವನ್ನು ದೂರದಲ್ಲಿರಿಸಿದನು. ಬಳಿಕ ಯಾವುದೋ ಒಂದು ತೊಪ್ಪಲದ ಹೊಗೆ ಹಾಕಿದನು. ಆಗ ಗಂಡು ಗೊಂಬೆಯು ತಿರುಗಿ ಹೆಣ್ಣಿನ ಬೆನ್ನು ಹತ್ತಿತು. ಸ್ವಲ್ಪ ಹೊತ್ತಿನ ಮೇಲೆ ಮಂತ್ರವನ್ನು ಪಠಿಸಹತ್ತಿದನು; ಆಗ ಗಂಡು ಹೋಗಿ ಹೆಣ್ಣಿನ ತೆಕ್ಕೆ ಬಿದ್ದಿತು. ಅದೆಂಥ ಮೋಜು! ಅವರಿಗೆ ತಮ್ಮ ಗಂಡನನ್ನು ಹಾಗೆಯೇ ಮೋಹಗೊಳಿಸಬಹುದಲ್ಲವೇ ಎಂದು ಆನಂದವಾಯಿತು. ಇನ್ನು ಮುಂದೆ ತೆಂಗಿನಕಾಯಿಯ ಬುಡೆಯಲ್ಲಿ ಹಿಡಿದಿಟ್ಟ ದೆವ್ವಗಳನ್ನು ವೇತಾಳ ಮಂತ್ರವನ್ನಂದು ಸಿದ್ಧಯ್ಯನು ಆಟವಾಡಿಸಿ ತೋರಿಸುವವನು. ಚಂದ್ರಾವತಿಬಾಯಿಯವರು ಸ್ತ್ರೀ-ಸಹಜವಾದ ಪುಕ್ಕತನದಿಂದ 'ಬ್ಯಾಡ ಮಹರಾಯಾ! ನನಗ ನೋಡೋದು ಆಗಲಿಕ್ಕಿಲ್ಲ. .....ಸನ್ನ ಕೆಲಸ ಅಷ್ಟುಲಗೂ ಮಾಡಿಕೊಡು' ಎಂದರು.

'ಯಾಕಾಗವಲ್ದ್ರೀ. ನಿಮ್ಮ ಗಂಡ, ನಿಮ್ಮ ಇರುದ್ದ ಒಂದು ತುಟಿ ಎರಡು ಮಾಡಬಾರದು ಹಾಂಗ ಮಾಡಿಕೊಡತೇನ್ರಿ. ಆದ ಗಟ್ಟಿ ಮುಟ್ಟಿ ಆಗ ಬೇಕಾದ್ರ ನಾಕ ಕೆಲಸಾ ಮಾಡಬೇಕಾಕ್ಕೈತ್ರಿ. ಒಂದು ಮಾಟದ ಗೊಂಬೀ, ನಾಕು ಲಿಂಬೀ ಹಣ್ಣು ಮಂತ್ರಿಸಿ ಕೊಡತೇನಿ; ಆ ಗೊಂಬೀ ನಿಮ್ಮ ಯಜ ಮಾನ್ರು ಮಲಕೊಳ್ಳೋ ಅಲ್ಲೆ ತೆಗ್ಗ ತಗದು ಹುಗಬೇಕ್ರಿ. ಲಿಂಬೀ ಹಣ್ಣ ಮನೀ ನಾಕೂ ದಿಕ್ಕಿಗೂ ಹುಗೀಬೇಕ್ರಿ. ಒಂದು ಮೆಚ್ಚಿನ ಯಂತ್ರಾ ಮಾಡಿ ಕೊಡತೇನ್ರಿ. ಅದನ್ನ ಬೆಳ್ಳೀ ತಾಯಿತದಾಗ ಹಾಕಿ ಎಡಗಡೀ ರಟ್ಯಾಗ ಕಟಿಗೋಬೇಕ್ರಿ. ಒಂದ ಗಿಡಮೂಲಿಕಿ ಕೊಡತೇನ್ರಿ. ಅದನ್ನ ಪಲ್ಲೇದಾಗ ಕೂಡಿಸಿ ನಿಮ್ಮ ಗಂಡನ ಹೊಟ್ಯಾಗ ಹಾಕಬೇಕ್ರಿ. ಒಂದ ಪುಡೀ ಕೊಡ ತೇನಿ; ಅದನ್ನ ಕಷಾ್ಯ ಮಾಡಿಸಿಗೊಂಡಾಗ ಕೊಡ್ರಿ. ಎಣ್ಣ್ಯಾಗ ಕೂಡಿಸಿ ತಲಿಗೆ ತಿಕ್ಕಬೇಕ್ರಿ. ಇಷ್ಟ ಕೆಲಸಾ ಮಾಡಿಕೊಡಾಕ ನಾ ಹತ್ತು ವರಾ ತಗೊಂತೇನಿ ನೋಡ್ರಿ. ನನ್ನ ಮಂತ್ರ ತಿರಗಿದರ ಹತ್ತಕ್ಕ ಇಪ್ಪತ್ತು ವರ ಕೊಡತೇನ್ರಿ' ಎಂದು ನುಡಿದು ಸಿದ್ದಯ್ಯಾನು ತಾನು ಹೇಳಿದಂತೆ ಎಲ್ಲ ವಸ್ತು ಗಳನ್ನು ಮಂತ್ರಿಸಿ ಕೊಟ್ಟನು. ಬಾಯಿಯವರು ತಮ್ಮ ಕೈಯ್ಯಲ್ಲಿ ಇಪ್ಪತ್ತು ವರ ಹಣವಿರದ್ದರಿಂದ ಹತ್ತು ವರಗಳ ಮೇಲೆಯೇ ಕೆಲಸ ಬಗೆಹರಿಸಬೇಕೆಂದು ಹೇಳಿದರು; ಮುಂದೆ ತಮ್ಮ ಗಂಡನು ತಮ್ಮ ಮಾತು ಕೇಳಹತ್ತಿದರೆ, ಇದರ ಎರಡರಷ್ಟು ಹಣ ಕೊಡುವೆವೆಂದು ಅಭಿವಚನವನ್ನಿತ್ತರು. ಇಷ್ಟೆಲ್ಲ ಆಗುವ ದರಲ್ಲಿ ಹೊತ್ತು ಮುಳುಗುತ್ತ ಒಂದಿತು. ಆಗ ಒಡಕಣ್ಣನು ಚಂದ್ರಾವತಿ ಬಾಯಿಯವರನ್ನು ಕರೆದುಕೊಂಡು ತಾವು ಇಳಿದುಕೊಂಡ ಗೌಡರ ಮನೆಗೆ ಕೆರೆದುಕೊಂಡು ಹೋದನು. ಒಡಕಣ್ಣನ ಮನಸ್ಸಿನಲ್ಲಿ, ಇಷ್ಟೆಲ್ಲ ಕಾರ್ಯ ಕ್ರಮಗಳಾದರೂ, ಸಿದ್ದಯ್ಯಾನು ತನ್ನ ಇಚ್ಛೆಯ ಪ್ರಕಾರ ಕೆಲಸ ಮಾಡಿರು ವನೋ ಇಲ್ಲೋ ಎಂಬ ಸಂಶಯವು ಉಳಿದಿತ್ತು. ಚಂದ್ರಾವತಿಬಾಯಿಯವ ರನ್ನು ಮನೆಗೆ ಕಳಿಸಿದ ಕೂಡಲೆ ಮರಳಿ ಸಿದ್ದಯ್ಯಾನ ಮನೆಗೆ ಬಂದು 'ನಾ ಹೇಳಿದ್ಹ್ಯಾಂಗ ಮಾಡಿಕೊಟ್ಟೇಯೋ ಇಲ್ಲೋ?' ಎಂದು ಕೇಳಿದನು.

'ಅದರ ಚಿಂತೀ ಬಿಡ್ರಿ! ನಾ ಹೊಟ್ಯಾಗ ಹಾಕಾಕ ಕೊಟ್ಟ ಎಲೀ ಪುಡ್ಯಾಗ ಮದ್ದೈತಿ. ಅದು ಹೊಟ್ಯಾಗ ಹೋತಂದ್ರ ಕಳ್ಳಿಗೆ ಹತ್ತಿ, ಮನಸ್ಯಾ ಸೊರಗಾಕ ಹತ್ತತಾನ. ಇದಕ ಇಳಿವು ಇಲ್ಲ. ಆರ ತಿಂಗಳದಾಗ

ಮನಸ್ಸ್ಯಾ ನಿಕಾಲು! ನಿಮಗ ದೇಸಗತ್ತಿ ಸಿಕ್ಕ ಮ್ಯಾಗ ನನ್ನ ಮಾತ್ರ ಮರಿ ಬ್ಯಾಡ್ರಿ' ಎಂದು ಸಿದ್ದ್ರಯ್ಯನು ಉತ್ತರವಿತ್ತನು. ಬಳಿಕ ಒಡಕಣ್ಣನು ಗೌಡರ ಮನೆಗೆ ಬಂದು ರಾತ್ರಿಯ ಫಲಾಹಾರವನ್ನು ಮಾಡಿ, ಅಂದು ಅಲ್ಲಿಯೇ ಮಲಗಿದನು. ಮರುದಿನ ಮುಂಜಾನೆ ನಸುಕಿನಲ್ಲಿಯೇ ಎದ್ದು ಅಲ್ಲಿಂದ್ದ ಹೊರಟು ಐದು ತಾಸಿನ ಸುಮಾರಕ್ಕೆ ಚಂದ್ರಾವತಿಬಾಯರೊಡನೆ ಮುದೂರಿಗೆ ಬಂದುಮುಟ್ಟಿದನು.

---

## ೧೩

### ಮೆಚ್ಚುಮದ್ದು ಮರಣವ ತಂದಿತು........

ಚಂದ್ರಾವತಿಬಾಯಿಯವರು ಭಾದ್ರಪದ ಶುದ್ಧ ಅಷ್ಟಮಿಯ ದಿವಸ ಜೇಷ್ಠಾದೇವಿಯನ್ನು ಪೂಜಿಸಿ ಮರುದಿವಸ ದೋರಕವನ್ನು ಕಟ್ಟಿಕೊಂಡು ದಶಮಿಯ ದಿವಸ ಭೋಜನೋತ್ತರ ಮುದ್ದೂರಿನಿಂದ ಹೊರಟು ಒಡಕಣ್ಣನೊಡನೆ ಬೊಮ್ಮಗೇರಿಗೆ ಬಂದರು. ಒಡಕಣ್ಣನು ಚಕ್ಕಡಿಯನ್ನು ಇಳಿದು ಬಂದು ಶ್ರೀಪತಿರಾಯರಿಗೆ ನಮಸ್ಕಾರ ಮಾಡಿ, ಮುದ್ದೂರಲ್ಲಿ ಚಂದ್ರಾವತಿಬಾಯಿಯವರಿಗೆ ಮತ್ತೆ ಭೂತಬಾಧೆಯಾದದ್ದನ್ನೂ ಅದನ್ನು ಬಿಡಿಸಿದ್ದನ್ನೂ ತಿಳಿಸಿ ಮುಂದೆ ಬಾಧೆಯಾಗದಂತೆ ಯಂತ್ರವನ್ನು ಮಾಡಿಸಿ ಗೋಪಾಳರಾಯರು ಚಂದ್ರಾವತಿಬಾಯಿಯವರಿಗೆ ಕಟ್ಟಿಸಿರುವರೆಂದು ದೇಸಾಯರಿಗೆ ತಿಳಿಸಿದನು. ಮುಂದೆ ನಾಲ್ಕಾರು ದಿವಸಗಳಾದ ಮೇಲೆ ಒಡಕಣ್ಣನೂ ಚಂದ್ರಾವತಿಬಾಯಿಯವರೂ ಒಕ್ಕಟ್ಟಿನಿಂದ ತಮ್ಮ ಚಾಟಮಾಟ ಮದ್ದುಗಳ ಪ್ರಯೋಗವನ್ನು ದೇಸಾಯರಿಗೆ ಮಾಡಲಿಕ್ಕೆ ಪ್ರಾರಂಭಿಸಿದರು. ಆ ಚಾಟಮಾಟಗಳ ಪರಿಣಾಮವು ದೇಸಾಯರ ಮೇಲೆ ಎಷ್ಟರಮಟ್ಟಿಗೆ ಆಯಿತೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಹೊಟ್ಟೆಯಲ್ಲಿ ಹಾಕಿದ ಮದ್ದಿನ ಪರಿಣಾಮವು ಮಾತ್ರ ದೇಸಾಯರ ದೇಹದ ಮೇಲೆ ಆಗದೆ ಇರಲಿಲ್ಲ. ಬರಬರುತ್ತ ದೇಸಾಯರ

ಊಟವು ಕಡಿಮೆಯಾಗಹತ್ತಿತು. ಉಂಡ ಅನ್ನವು ಜೀರ್ಣವಾಗದಂತಾಗಿ ಅವರು ನಿತ್ರಾಣರಾಗಹತ್ತಿದರು. ಆಗ ಅವರು ಕೆಲ ಪಾಕಚೂರ್ಣಗಳನ್ನು ತಕ್ಕೊಂಡರು. ಆದರಿಂದ ಏನೂ ಪ್ರಯೋಜನವಾಗಲಿಲ್ಲ. ಒರಬರುತ್ತ ದೇಸಾಯರು ಕೃಶರಾಗಹತ್ತಿದರು. ಆಗ ಒಡಕಣ್ಣನು ವೈದ್ಯರನ್ನು ಕರೆ ತಂದು ಔಷಧ ಕೊಡಿಸಹತ್ತಿದನು. ಅವರಿಗೆ ವಿಷಬಾಧೆಯಾದದ್ದೇ ವೈದ್ಯರಿಗೆ ತಿಳಿಯಲಿಲ್ಲ. ಕಾರಣ ತಕ್ಕ ಔಷಧೋಪಚಾರವನ್ನು ಮಾಡಿದರೂ ದೇಸಾಯರ ಪ್ರಕೃತಿಯು ಸುಧಾರಿಸದೆಮತ್ತಿಷ್ಟು ಕೆಡಹತ್ತಿತು. ಹೀಗೆ ಐದು ತಿಂಗಳಾಗಲು ದೇಸಾಯರು ಹಾಸಿಗೆ ಹಿಡಿದರು. ಹೊಟ್ಟೆಯಲ್ಲಿ ಉರಿಯು ಹೆಚ್ಚಾಯಿತು. ಬೆಳತನಕ ನಿದ್ರೆ ಹತ್ತದಾಯಿತು. ದೇಸಾಯರ ಸಂಶಯವು ಹೆಚ್ಚಹತ್ತಿತು. ಚಂದ್ರಾವತಿಬಾಯಿಯವರೂ ಗಾಬರಿಯಾದರು. ಚಿಂತೆಯಿಂದ ಅವರ ಮೋರೆಯು ಬಿಳುಪೇರಹತ್ತಿತು.

ಒಂದು ದಿನ ಚಂದ್ರಾವತಿಬಾಯಿಯವರು ಅಡಿಗೆ ಊಟಗಳನ್ನು ತೀರಿಸಿ ಅಡಿಗೆಯ ಮನೆಯಲ್ಲಿ ಕುಳಿತಿರುವಾಗ ಒಡಕಣ್ಣನು ನೀರು ಕುಡಿಯುವದಕ್ಕೆಂದು ಒಳಗೆ ಬಂದನು. ಇತ್ತೀಚೆಗೆ ಒಡಕಣ್ಣನು ದೇಸಾಯರ ಶುಶ್ರೂಷೆಯಲ್ಲಿಯೇ ನಿರತನಾಗಿದ್ದರಿಂದ, ಬಾಯಿಯವರಿಗೆ ಅವನ ಸಂಗಡ ಮಾತಾಡುವದೇ ಆಗಿದ್ದಿಲ್ಲ. ಇಂದು ಅಕಸ್ಮಾತ್ತಾಗಿ ದೇಸಾಯರ ಸಂಗಡ ಮಾತಾಡಲಿಕ್ಕೆಂದು ಅಣ್ಣಾದೀಕ್ಷಿತರು ಬಂದದ್ದರಿಂದ, ಅವರಿಗೆ ಒಡಕಣ್ಣನ ಸಂಗಡ ಮಾತಾಡುವ ಸಂಧಿ ದೊರೆಯಿತು. 'ಇವರಿಗೆ ಹ್ಯಾಂಗದನಪಾ? ಏನಾರ ನೆಟ್ಟಗಾಗೋ ಲಕ್ಷಣ ಆದಸೋ ಹ್ಯಾಂಗ?' ಎಂದು ಸುರುವು ಮಾಡಿದರು. 'ಏನಾಗತದೋ ಏನೋ?' ಎಂದು ಹಾರಿಸಿ ಮಾತಾಡಿದ ಒಡಕಣ್ಣ. ಈ ತರಹದ ನಿಷ್ಕಾಳಜಿಯ ಉತ್ತರವು ಈಗಿನ ಪರಿಸ್ಥಿತಿಗೆ ಸರಿಯಾಗಿರಲಿಲ್ಲ. ಒಡಕಣ್ಣನ ಉತ್ತರವು ಅವರ ಚಿಂತೆಯನ್ನು ಹೆಚ್ಚಿಸಿತು; ಅವರು ಅವನ ಮೇಲೆ ಮತ್ತಿಷ್ಟು ರೇಗಿದರು. ಹೆಂಗಸು ಏನಾದರೂ ಹೆಂಗಸೇ! ಅವಳು ಪತಿವ್ರತೆಯಲ್ಲದಿದ್ದರೂ, ತನ್ನ 'ಕುಂಕುಮ'ವೆಂಬ ಅಲಂಕಾರದ ಲೋಭ ಬಹಳ ಅವಳಿಗೆ; 'ಇನ್ನೇನಾರ ಮಾಡಲೆಪಾ ನಾನು? ಏನಾದರೂ ಮಾಡಿ ಅವರ ಜೀವಾ ಉಳಿಸಿಕೋ. . ನನ್ನ ಕುಂಕುಮಕ್ಕ ಧಕ್ಕಿ ಬರದ್ಹಾಂಗ ಮಾಡು' ಎಂದು ನೀರು ತುಂಬಿದ ಕಣ್ಣಿನಿಂದ ಅವನನ್ನು

ಸಿಟ್ಟಿಸಿ ಗದ್ಗದ ಕಂಠದಿಂದ ನುಡಿದರು. ಆದರೆ ಆ ನರಪಶುವಿಗೆಲ್ಲಿಯ ಕರುಣೆ? ಪತಿತಳಾದ ಅವಳ ಆರ್ತ ಕೂಗು ಅವನ ಕಠೋರಹೃದಯದ ಅಂತರಾಳವನ್ನು ಅಲುಗಿಸದೆ ಹೋಯಿತು. ಅವನು ತನ್ನ ಕಠೋರವಾದ ರೀತಿಯಲ್ಲಿಯೇ 'ಊರೊಳಗಿನ ಎಲ್ಲ ವೈದ್ಯರನ್ನೂ ಕರೆದು ತೋರಿಸೇನಿ. ಯಾರಿಗೂ ಅವರ ಜಡ್ಡಿನ ಹೊಳವೇ ಹತ್ತಲೊಲ್ಲದು. ಅವರ ನಶೀಬದಾಗ ಇದ್ದದ್ದು ಯಾರು ಬಿಡಿಸುವವರು?' ಎಂದು ನುಡಿದನು. ಚಂದ್ರಾವತಿಬಾಯಿಯವರು ಮಾಟ ಮಾಡಿಸುವದಕ್ಕೆ ಒಪ್ಪಿದ್ದರೂ ಕೂಡ ಅವರಿಗೆ ಆ ಸಮಯದಲ್ಲಿ ಸಂಶಯ ಬರದೆ ಹೋಗಿದ್ದಿಲ್ಲ. ಮಾಟ-ಚಟಕಿನ ಪರಿಣಾಮವು ಒಮ್ಮೊಮ್ಮೆ ವಿಪರೀತಕ್ಕಿಡಬಹುದೆಂದು ಅವರು ಅಂದೇ ಒಡಕಣ್ಣನಿಗೆ ಹೇಳಿದ್ದರು ಆದರೂ ತಮ್ಮ ಮರ್ಯಾದೆ, ಗಂಡನ ಎರಡನೇ ಮದುವೆಯ ಅಂಜಿಕೆ, ಮತ್ತು ಒಡಕಣ್ಣನ ಮೋಹ, ಇವಕ್ಕೊಳಗಾಗಿ, ಅವರು ಅದಕ್ಕೆ ಒಪ್ಪಿದರು. ಇಂದು ಅವರ ಮನಸ್ಸಿನಲ್ಲಿ ಮಾಟದಿಂದಲೇ ಹೀಗಾಗಿರಬಹುದೇನೆಂದು ಕಟಿಯುತ್ತಿತ್ತು. ಇಂಥ ವಿಚಾರಗಳನ್ನು ಅವರು ಒಡಕಣ್ಣನ ಮುಂದಲ್ಲದೆ ಹೇಳುವದಾದರೂ ಯಾರ ಮುಂದೆ? ಅವನೇ ಅವರ ಕಳವಳಗೊಂಡ ಹೃದಯಕ್ಕೆ ಸಮಾಧಾನವನ್ನುಂಟುಮಾಡುವವನು. ಆದ್ದರಿಂದ ಅವರು ಇಂದು ಆ ಮಾತೆತ್ತಿದರು. 'ಆ ಮಾಟ-ಮದ್ದಿನಿಂದಽನಽ ಹೀಂಗಾತೋ ಏನೋ?' ಎಂದ ಕೂಡಲೆ ಒಡಕಣ್ಣನು ಕವಕ್ಕನೆ ಹರಿಹಾಯ್ದು ಅವರ ಕಡೆಗೆ ನೋಡಿದನು. 'ಆ ಸಿದ್ದಯ್ಯನ ಕಡಿಗೆ ಇನ್ನೊಮ್ಮೆ ಹೋಗಿ ಅದಕ್ಕೆ ಉಪಾಯ ಏನಾದರೂ ಕೇಳಿಕೊಂಡು ಬಾ' ಎಂದು ಅವರು ಹೇಳಲು 'ಇನ್ನೆಲ್ಲಿಯ ಸಿದ್ದಯ್ಯ? ನಿಮಗೊಂದು ಹುಚ್ಚು ಹಿಡದದ. ಅವನಾರಽ ಏನ ಮಾಡಬೇಕು? ದೇಸಾಯರಿಗೆ ಏನೋ ಭಯಂಕರ ಜಡ್ಡಾಗೇದ.' ಎಂದು ಒಡಕಣ್ಣನು ಹಾರಿಸಿ. ಮಾತಾಡಿದನು. 'ಅದೇನಾದರೂ ಇರ್ಲಿ. ನೀನು ನಾಳೆ ಮುಂಜಾನೆ ಹೋಗಿ ಅವನ ಕಡಿಂದ ಔಷಧ ತರಲಿಕ್ಕೇಬೇಕು' ಎಂದು ದೃಢನಿಶ್ಚಯದಿಂದ ಮಾತಾಡಿದರು. ಒಡಕಣ್ಣನೂ ಸಿಟ್ಟಿನಿಂದ 'ಬೇಕಾದರ ನೀವೇ ಹೋಗಿ ಬರ್ರಿ. ನಾ ಏನು ದೇಸಾಯರ್ನ ಬಿಟ್ಟು ಅಗಲೋದಿಲ್ಲ' ಎಂದನು.

ಬಾಯಿಯವರು 'ನನ್ನ ಕಾಲವ್ಯಾಲ ನಾನಽ ಕಲ್ಲು ಹಾಕಿಕೊಂಡ ಹಾಂಗ ಆತಪ! ಅದರೊಳಗ ನಿನಗೇನು ಅಂಬೋದದ' ಎನ್ನುತ್ತ. ಬಿಕ್ಕಿ

ಬಿಕ್ಕಿ ಅಳಹತ್ತಿದರು. ಅಷ್ಟರಲ್ಲಿ ಅಣ್ಣಾದೀಕ್ಷಿತರು ಹೊರಟು ಹೋಗಿದ್ದರು. ದೇಸಾಯರು ತಮ್ಮ ಹೆಂಡತಿ ಅಳುವದನ್ನು ಕೇಳಿ: 'ನನಗ್ಯಾಕ ಸುಮ್ಮನ ತ್ರಾಸ ಕೊಡತೀದಿ...ಈ ಮನೀ ಒಳಗ ಸುಸೂತ್ರ ಸಮಾಧಾನದಿಂದ ಸತ್ತೇನಂದ್ರೂ ss.. ನನಗ ಸ್ವಾತಂತ್ರ್ಯ ಇಲ್ಲದ್ಹಂಗ ಆಗೇದ' ಎಂದು ನರಳುತ್ತ ನುಡಿದರು. ಒಡಕಣ್ಣನು, ಬಾಯಿಯವರು ಹೀಗೆ ಅತ್ತರೆ ಇಬ್ಬರ ಗುಟ್ಟೂ ಹೊರಬೀಳಬಹುದೆಂದು ಸಮಾಧಾನ ಹೇಳಿ, ಲಗುಬಗೆಯಿಂದ ಹೊರಟು ಹೋದನು.

ಈ ಕಟುಕರು ತಮಗೆ ವಿಷಪ್ರಯೋಗ ಮಾಡಿರಬಹುದೆಂದು ದೇಸಾಯರು ಶಂಕಿಸಿದರು. ಒಡಕನನ್ನೂ ಚಂದ್ರಾವತಿಬಾಯಿಯವರನ್ನೂ ಕಂಡರೆ ಅವರು ಕೆಂಡದಂತಾಗುವರು. ಬೇನೆಯ ವೇದನೆಯಿಂದ ಅವರು ತಮ್ಮ ಮೇಲೆ ಹರಿಹಾಯುತ್ತಿರುವರೆಂದು ಒಡಕಣ್ಣನು ಜನರಲ್ಲಿ ಸುದ್ದಿ ಹರಡಿದನು. ಚಂದ್ರಾವತಿಬಾಯಿಯವರ ಕಡೆಗೇ ಮನೆತನದ ಹಿರಿತನ ಬಂದಿತು. ಅವರು ದೇಸಾಯರಿಗೆ ಬೇನೆ ಹೆಚ್ಚಾದಂತೆ ಅವರನ್ನು ಕಾಯಹತ್ತಿದರು. ತಮ್ಮ ಬಗ್ಗೆ ದೇಸಾಯರ ಮನಸ್ಸು ಕಲುಷಿತವಾದ್ದರಿಂದ ದೇಸಾಯರು ತಮ್ಮ ವತನವನ್ನು ಯಾರಿಗಾದರೂ ಬರೆದು ಕೊಡಬಹುದೆಂಬ ಭಯವು ಒಡಕಣ್ಣನಿಗಿತ್ತು. ಈ ವಿಷಯದಲ್ಲಿ ಒಡಕಣ್ಣನು ಬಹು ದಕ್ಷನಾಗಿದ್ದನು. ದೇಸಾಯರ ಮಿತ್ರರನ್ನು ಅನೇಕ ಕುಯುಕ್ತಿಗಳನ್ನು ಮಾಡಿ ಮನೆಗೆ ಬರದಂತೆ ಮಾಡಿದನು. ದೇಸಾಯರು ತಮ್ಮ ಮಿತ್ರರಾದ ಕಲ್ಲಂಭಟ್ಟರನ್ನೂ ಅಣ್ಣಾದೀಕ್ಷಿತರನ್ನೂ ಕರೆಯ ಹೇಳಿದರೆ ಒಡಕಣ್ಣನು ಅವರನ್ನು ಕರೆಯದೆ ಏನಾದರೊಂದು ಸುಳ್ಳುಸುದ್ದಿಯನ್ನು ಹೇಳುತ್ತಿದ್ದನು. ಒಮ್ಮೆಯಂತೂ ಅವರ ಗೆಳೆಯರು ಅವರ ಮೇಲೆ ಸಿಟ್ಟಾಗಿದ್ದದರಿಂದ ಮನೆಗೆ ಬರುವದಿಲ್ಲೆಂದರೆಂದು ಹೇಳಿದನು. ಆಗ ದೇಸಾಯರು ಬಹಳ ಖಿನ್ನರಾದರು. ತಾವು ತಮ್ಮ ಮಿತ್ರರ ಹಿತೋಕ್ತಿಗಳನ್ನು ಕೇಳದ್ದರಿಂದ ತಮಗೆ ಈ ಗತಿಯಾಯಿತೆಂದು ದುಃಖಿಸಹತ್ತಿದ್ದರು.

ಒಡಕಣ್ಣನನ್ನು ಮನೆಬಿಟ್ಟು ಹೊರಹೊರಡಿಸಬೇಕೆಂದು ಮಿತ್ರರು ಪದೇ ಪದೇ ಹೇಳಿದರೂ, ತಾವು ಕೇಳಲಿಲ್ಲವೆಂದು ಪಶ್ಚಾತ್ತಾಪಪಟ್ಟರು. ತಮ್ಮ ಮೇಲೆ ಕಲಿಯ ಕಾರಸ್ಥಾನ ನಡೆದದ್ದು ತಮ್ಮ ಮಿತ್ರರಿಗೆ ತಿಳಿದಿದ್ದರೂ ತಮಗೆ ತಿಳಿಯಲಿಲ್ಲವೆನಿಸಿತು. ಒಡಕಣ್ಣನು ತಾನು ದೇಸಾಯಿಯಾಗಬೇಕೆಂಬ

ದುಷ್ಟ ಹೃದಯದಿಂದ ತಮ್ಮನ್ನು ಭಯಂಕರ ವೇದನೆಗೆ ಗುರಿಮಾಡಿ ಯಮನ ದವಡೆಯಲ್ಲಿ ದೂಡಿರುವನೆಂದು ಅವರು ಚಿಂತಿಸಹತ್ತಿದರು. ಇನ್ನು ನಾಲ್ಕಾರು ದಿವಸಗಳಲ್ಲೇ ತಾವು ಸಾಯುವದು ನಿಶ್ಚಯವೆಂದು ವ್ಯಸನ ಪಟ್ಟರು. ಬಳಿಕ ದೇಸಾಯರು ಮನಸ್ಸಿನಲ್ಲಿ ಏನೋ ಆಲೋಚಿಸಿ ತಾವು ಮೃತರಾದರೂ ಈ ಕೃತಘ್ನ ಒಡಕನಿಗೆ ದೇಸಗತಿಯು ಸಿಗದಂತೆ ವ್ಯವಸ್ಥೆ ಮಾಡಿಬಿಡಬೇಕೆಂದು ನಿರ್ಧರಿಸಿದರು.

ದೇಸಾಯರಿಗೆ ಜಡ್ಡು ಹೆಚ್ಚಾಗಿ ಅವರು ಹಾಸಿಗೆ ಹಿಡಿದಿರುವರೆಂಬ ಸುದ್ದಿಯು ಬೊಮ್ಮಗೇರಿಯ ತುಂಬ ಹಬ್ಬಿತು. ಆಗಲೂರೊಳಗಿನ ಜನರು ತಂಡತಂಡವಾಗಿ ದೇಸಾಯರ ಭೆಟ್ಟಿಗೆ ಬರಹತ್ತಿದರು. ಒಡಕಣ್ಣನಾಗಲಿ ಚಂದ್ರಾವತಿಬಾಯಿಯವರಾಗಲಿ ದೇಸಾಯರ ಬಳಿಯಲ್ಲಿ ತಪ್ಪದೆ ಇದ್ದು, ಬಂದ ಜನರಿಗೆ ದೇಸಾಯರ ಸಂಗಡ ವಿಶೇಷ ಮಾತನಾಡಗೊಡುತ್ತಿದ್ದಿಲ್ಲ. ಹೀಗಿರಲು ದೇಸಾಯರ ಬಾಲ್ಯಸ್ನೇಹಿತರಾದ ಅಣ್ಣಾದೀಕ್ಷಿತರೂ ತಿಪ್ಪಾಶಾಸ್ತ್ರಿಗಳೂ ಕಲ್ಲಂಭಟ್ಟರೂ ಬಸನಗೌಡರೂ ಕೂಡಿ ದೇಸಾಯರನ್ನು ಮಾತನಾಡಿಸಲಿಕ್ಕೆಂದು ಬಂದರು. ಅವರು ದೇಸಾಯರ ಕೃಶಶರೀರವನ್ನು ನೋಡಿ ಮರಮರನೆ ಮರುಗಿದರು. ಆಗ ದೇಸಾಯರು ಕಣ್ಣುತುಂಬ ನೀರು ತಂದು 'ನಿಮ್ಮೆಲ್ಲರ ದರ್ಶನೋತ್ಸುಕನಾಗಿ ನಾನು ಒಡಕನನ್ನು ಕಳುಹಿದರೂ, ನೀವು ಮನೆಗೆ ಬರದೆ ಇದ್ದದ್ದು ನನ್ನ ದುರ್ದೈವ! ಇಂದಾದರೂ ನಿಮಗೆ ನನ್ನ ಮೇಲೆ ಕರುಣೆ ಹುಟ್ಟಿತು. ನನ್ನ ಅವಸ್ಥೆಯನ್ನಷ್ಟು ನೋಡಿರಿ!' ಎಂದು ದೊಡ್ಡ ಧ್ವನಿ ತೆಗೆದು ಅತ್ತರು. ಬಳಿಕ ನಿಟ್ಟುಸಿರು ಬಿಟ್ಟು ಬಾಯಾರಿಕೆಯಾಗಿದ್ದರಿಂದ ಬಿಸಿನೀರು ತೆಗೆದುಕೊಂಡು ಬರಹೇಳಿ ಒಡಕಣ್ಣನನ್ನು ಒಳಗೆ ಕಳಿಸಿ ತಮ್ಮ ಮಿತ್ರರಿಗೆ ಹೀಗೆ ಹೇಳಿದರು: 'ನನ್ನ ಅವಸ್ಥೆಯಂತೂ ಮುಗಿದಂತಾಯಿತು. ಒಡಕಣ್ಣನು ಭಯಂಕರ ಮನುಷ್ಯನಿರುವನೆಂದು ನೀವು ಹೇಳಿದರೂ ನಾನು ನಿಮ್ಮ ಮಾತಿಗೆ ಕಿವಿಗೊಡಲಿಲ್ಲ. ನನ್ನ ದುರ್ದೈವ! ನನ್ನನ್ನು ಕೊಂದು ತಾನು ದೇಸಾಯಿಯಾಗಬೇಕೆಂದು ಒಡಕಣ್ಣನು ಹೂಡಿದ ತಂತ್ರವು ಕೈಗೂಡುವ ಸಮಯ ಬಂದಿದೆ. ಅವನ ಈ ಇಚ್ಛೆಯು ಸಫಲವಾಗಬಾರದು. ಅದಕ್ಕೋಸ್ಕರ ನೀವು ನನ್ನ ಸಮೀಪದ ದಾಯಾದಿಯಾದ ವೆಂಕಟರಾಯರ ಹೆಸರಿನಿಂದ ಮೃತ್ಯುಪತ್ರವನ್ನು ಬರೆದುಕೊಂಡು ಬರಬೇಕು. ಅದಕ್ಕೆ ನಾನು

ಸಹಿ ಮಾಡುವೆನು. ನಾನು ಸತ್ತ ಬಳಿಕ-ಒಡಕಣ್ಣನು ದೇಸಾಯಿಯಾಗಿ ಮೆರೆಯದಂತೆ ನೀವೆಲ್ಲರೂ ಪ್ರಯತ್ನ ಮಾಡಬೇಕು. ಇದೇ ನನ್ನ ಇಚ್ಛೆಯು' ಎಂದು ಅವರು ನುಡಿಯುವಷ್ಟರಲ್ಲಿ ಒಡಕಣ್ಣನು ಲಗುಬಗೆಯಿಂದ ನೀರನ್ನು ತೆಗೆದುಕೊಂಡು ಬಂದನು. ಆಗ ಅಣ್ಣಾದೀಕ್ಷಿತರು, ದೇಸಾಯರೆದುರು ಒಡಕಣ್ಣನು ತಾವು ಮನೆಗೆ ಬರುವದಿಲ್ಲೆಂದು ಹೇಳಿದ ಮಾತು 'ಅಭುಕ್ತ' ಸುಳ್ಳಿರುವದೋ ಇಲ್ಲೋ ಎಂದು ಒಡಕಣ್ಣನನ್ನೇ ಕೇಳಲು, ಅವನು ಅಲ್ಲಿಂದ ಹೊರಟೇಹೋದನು. ದೇಸಾಯರ ಮನಸ್ಸು ಈ ಪ್ರತ್ಯಕ್ಷ ಪ್ರಮಾಣದಿಂದ ಬಹಳವಾಗಿ ನೊಂದುಕೊಂಡಿತು. ಅವರು ಒಳಸೇರಿದ ಧ್ವನಿಯಲ್ಲಿ 'ದೀಕ್ಷಿತರೆ! ಅವನ ತಂತ್ರವು ಮಿತಿಮೀರಿದೆ. ನಿನ್ನೆ ರಾತ್ರಿ ಇವನೇ ಆಕೆಗೆ ಚುಚ್ಚಿಕೊಟ್ಟನು. ಆ ಭ್ರಷ್ಟಳು ಈ ಒಡಕಣ್ಣನನ್ನು ದತ್ತಕ ಮಾಡಿಕೊಳ್ಳಿರೆಂದು ನನಗೆ ಹೇಳಿಕೊಂಡಳು. ಅದಕ್ಕೆ ನಾನು ಒಡಂಬಡದೆ 'ನಾನು ಸಾಯಬೇಕೆಂದು ನಿನ್ನ ಮನಸ್ಸಿನಲ್ಲಿರುವದೇ?' ಎಂದು ಆರ್ಭಟಿಸಿದೆನು. ಅಷ್ಟಕ್ಕೇ ಆಕೆಯು ಬೆದರಿ ಹೋದಳು. ನನ್ನ ಪಶ್ಚಾತ್ ಆ ಒಡಕನನ್ನೇ ಆಕೆಯು ದತ್ತಕ ತೆಗೆದುಕೊಳ್ಳುವದು ನಿಶ್ಚಯವು. ಅದಕ್ಕಾಗಿಯೇ ನಿಮಗೆ ಮೃತ್ಯುಪತ್ರ ಬರೆದುಕೊಡು ಬರಬೇಕೆಂದು ನಾನು ಹೇಳಿರುವೆನು' ಎಂದರು. ಅವರ ಮಿತ್ರರೆಲ್ಲರೂ ಅವರ ಇಚ್ಛೆಯಂತೆ ಕಾರ್ಯಮಾಡಲಿಕ್ಕೆ ತನುಮನಧನಗಳಿಂದ ಪ್ರಯತ್ನ ಮಾಡುವೆವೆಂದು ವಚನವನ್ನಿತ್ತರು. 'ಈಶ್ವರೇಚ್ಛೆಯಿದ್ದಂತೆ ಆಗಲಿ' ಎಂದು ಉಸುರ್ಗರೆದರು.

ದೇಸಾಯರು ಇಲ್ಲಿಯವರೆಗೆ ಜಗತ್ತು ತಮ್ಮಂತೆಯೇ ಇರುವದೆಂದು ನಂಬಿದ್ದರು. 'ಒಡಕನಂಥ ನರರಾಕ್ಷಸರು ಭೂಮಿಯ ಮೇಲೆ ಹುಟ್ಟಿರುವರೆಂದು ನನಗೆ ಹೊಳೆದಿದ್ದಿಲ್ಲ' ಎಂದು ಅವರು ನಿಟ್ಟುಸಿರುಬಿಟ್ಟರು. ಆಗ ಅಣ್ಣಾದೀಕ್ಷಿತರ ಕಲಿಕಾಲಮಹಾತ್ಮೆಯ ಕಥನಕ್ಕೆ ಪುಟಸಿಕ್ಕಂತಾಯಿತು. ಅವರು ತಮ್ಮ ಅಜ್ಜಂದಿರ ಬ್ರಹ್ಮಪುರಿ-ವರ್ಣನೆಯಲ್ಲಿ ಹೇಳಿದ ಬೊಮ್ಮಗೇರಿಯಲ್ಲಿಯ ಕಲಿಪ್ರವೇಶವನ್ನು ಬಾಯ್ತುಂಬ ಹೊಗಳಿ ಹೇಳಿದರು: 'ದೇಸಾಯರೇ! ನೀವು ಹೇಳಿದ್ದು ಅಕ್ಷರಶಃ ನಿಜವಿದೆ. ಆ ಕಲಿಪುರುಷನು ನಿಮ್ಮಲ್ಲಿ ಕಾಲಿಟ್ಟ ದಿವಸವೇ ನಮ್ಮೂರಿಗೆ ಕಲಿಪ್ರವೇಶವಾಯಿತೆಂದು ನಾವು ತರ್ಕಿಸಿದ್ದೆವು. ಅದು ನಿಜವಾಯಿತು. ಇನ್ನು ಮುಂದೆ 'ಈ ಊರಲ್ಲಿ ಕಲಿಯ

ಕಾರಸ್ಥಾನವೇ ನಡೆದು ಗ್ರಾಮವು ಹಾಳಾಗುವದು. ಒಕ್ಕಟ್ಟು ಅಲ್ಲಲ್ಲಿ ಅಡಗುವದು. ದುರ್ಜನರ ಪ್ರಾಬಲ್ಯವಾಗಿ ಅನರ್ಥಗಳು ಮಿತಿಯಿಲ್ಲದೆ ನಡೆಯುವವು. ಕಲಹಗಳು ಹೆಚ್ಚಾಗಿ ಜನರು ಕೋರ್ಟು ಕಚೇರಿಗಳ ಬಾಗಿಲು ಕಾಯುತ್ತ ಕುಳಿತುಕೊಳ್ಳುವರು. ವಿದ್ವಾಂಸರೂ, ಕವಿಗಳೂ, ಸಜ್ಜನರೂ ಗ್ರಾಮತ್ಯಾಗ ಮಾಡುವರು. ಮಳೆ ಬೆಳೆಗಳಿಲ್ಲದೆ ಜನರು ಕೂಳು ಕೂಳು ನೀರು ನೀರು ಎನ್ನುತ್ತ ಕೊರಗುವರು. ವ್ಯಭಿಚಾರವು ವಿಪರೀತವಾಗಿ ನಡೆದು ಈ ಬೊಮ್ಮಗೇರೆಯು ತನ್ನ ಮೊದಲಿನ ಸ್ಥಿತಿಯನ್ನೇ ಹೊಂದುವ ಕಾಲ ಬಂದಿದೆ. ನಮಗೆ ಇಂಥ ಸ್ಥಿತಿಯನ್ನು ನೋಡತಕ್ಕ ಸಮಯವನ್ನು ತರ ಬೇಡೆಂದು ಆ ಪರಮಾತ್ಮನನ್ನು ಪ್ರಾರ್ಥಿಸುವೆವು ' ಎಂದರು. ದೇಸಾಯರು, ' ನೀವು ಸರ್ವಥಾ ಹೀಗೆ ನುಡಿಯಬಾರದು ! ನಿಮ್ಮೆಲ್ಲರಿಗೆ ದೇವರು ಕಲ್ಯಾಣ ಮಾಡಲಿ! ನನ್ನ ಆಯುಷ್ಯ ತುಂಬಿದೆ. ನಾನೊಬ್ಬನು ಹೋಗಿ ಬರುತ್ತೇನೆ ' ಎನ್ನುತ್ತಲೆ ಅವರ ಕಣ್ಣೊಳಗಿಂದ ಎರಡು ಹನಿಯುದುರಿ ನೆಲದ ಮೇಲೆ ಬಿದ್ದು ಅಡಗಿ ಹೋದವು. ' ಶೇಷಾಯುಷ್ಯವನ್ನು ಈಶಧ್ಯಾನದಲ್ಲಿ ಕಳೆಯಿರಿ' ಎಂದು ಹೇಳಿ ದೀಕ್ಷಿತರು ಹೊರಟಾಗ ತಮ್ಮ ಕೆಲಸದ ಬಗ್ಗೆ ದೇಸಾಯರು ಮತ್ತೊಮ್ಮೆ ನೆನಪು ಮಾಡಿದರು; ದೀಕ್ಷಿತರು ಅಷ್ಟು ಕೆಲಸವನ್ನು ತಾವು ತಪ್ಪದೆ ಮಾಡಿಕೊಂಡು ಬರುವೆವೆಂದು ಹೇಳಿ ಹೊರಟುಹೋದರು.

ಮರುದಿವಸ ಅಣ್ಣಾದೀಕ್ಷಿತರು ತಿಪ್ಪಾಶಾಸ್ತ್ರಿಗಳೊಂದಿಗೆ ಗೋವಿಂದ ನಾಯಕರ ಮನೆಗೆ ಹೋಗಿ ದೇಸಾಯರ ಪರಿಸ್ಥಿತಿಯನ್ನು ಅವರಿಗೆ ತಿಳಿಸಿ ದೇಸಾಯರು ತಮ್ಮ ಪಶ್ಚಾತ್ ವೆಂಕಟರಾಯರಿಗೇ ತಮ್ಮ ವತನವು ನಡೆಯು ವಂತೆ ಮೃತ್ಯುಪತ್ರವನ್ನು ಬರೆದುಕೊಂಡು ಬರಲಿಕ್ಕೆ ತಿಳಿಸಿದ್ದನ್ನು ಅವರಿಗೆ ಹೇಳಿದರು. ದೇಸಾಯರು ಆಸನ್ನಮರಣರಾಗಿರುವರೆಂಬುದನ್ನು ಕೇಳಿ ನಾಯ ಕರೂ ಬಹಳ ವ್ಯಸನಪಟ್ಟರು. ದೇಸಾಯರು ಮೃತರಾದರೆ ಊರ ವೈಭವವೇ ಹಾಳಾಗಿ ಹೋಗುವದೆಂದು ಅವರು ಉದ್ಗಾರ ತೆಗೆದರು. ಬಳಿಕ ಸ್ವಲ್ಪ ಹೊತ್ತಿನ ವರೆಗೆ ಎಲ್ಲರೂ ಕೂಡಿ ವಿಚಾರ ಮಾಡಿದ ಮೇಲೆ ನಾಯಕರು ವೆಂಕಟರಾಯರ ಹೆಸರು ಹಾಕಿ ದೇಸಾಯರ ಮೃತ್ಯುಲೇಖವನ್ನು ಬರೆದರು. ಅಷ್ಟರಲ್ಲಿ ಕಲ್ಲಂಭಟ್ಟರೂ ಅಲ್ಲಿಗೆ ಬಂದರು. ಆ ಮೇಲೆ ಎಲ್ಲರೂ ಕೂಡಿ ಆ ಮೃತ್ಯುಪತ್ರವನ್ನು ತೆಗೆದುಕೊಂಡು ದೇಸಾಯರ ಮನೆಗೆ ಹೋದರು. ಆಗ

ಚಂದ್ರಾವತಿಬಾಯಿಯವರು ದೇಸಾಯರ ಹತ್ತಿರ ಕುಳಿತಿದ್ದರು. ಅವರು ನಾಯಕರು ಬಂದದ್ದನ್ನು ನೋಡಿ ಒಳಗೆ ಹೋದರು. ನಾಯಕರು ದೇಸಾಯರ ಸ್ಥಿತಿಯನ್ನು ನೋಡಿ ಕಳವಳಪಟ್ಟು ಕಣ್ಣೀರು ತಂದರು.

ದೇಸಾಯರು ನಾಯಕರನ್ನು ಕಂಡು 'ನಾಯಕರೆ! ಇನ್ನು ನನ್ನ ಅವಸ್ಥೆಯು ಮುಗಿಯಿತು. ಏನೋ ಭೂಮಿಯ ಋಣವಿದ್ದುದರಿಂದ ಜೀವ ಧಾರಣ ಮಾಡಿರುವೆನು. ನನ್ನ ಮನೆತನದ ಮರ್ಯಾದೆಯನ್ನು ಕಾಯುವ ಭಾರವು ನಿಮ್ಮನ್ನೇ ಕೂಡಿದೆ!' ಎಂದು ಹೇಳಿ ಅಣ್ಣಾದೀಕ್ಷಿತರ ಕಡೆಗೆ ನೋಡಿ 'ಯಾಕೆ ದೀಕ್ಷಿತರೆ! ನಾನು ನಿನ್ನೆ ಹೇಳಿದಂತೆ ವ್ಯವಸ್ಥೆಯನ್ನು ಮಾಡಿಕೊಂಡು ಬಂದಿರುವಿರೇನು?' ಎಂದು ಕೇಳಿದರು. ದೀಕ್ಷಿತರು 'ಅದಕ್ಕಾಗಿಯೇ ನಾಯಕರು ಬಂದಿರುವರು' ಎಂದರು. ಬಳಿಕ ನಾಯಕರು ಕಲ್ಲಂಭಟ್ಟರನ್ನು ನೀರು ತರುವ ನೆವದಿಂದ ಚಂದ್ರಾವತಿಬಾಯಿಯವರು ಇತ್ತ ಕಡೆಗೆ ಬರದಂತೆ ನೋಡಲು ಕಳಿಸಿ, ತಾವು ಬರೆದುಕೊಂಡು ಬಂದ ಮೃತ್ಯುಪತ್ರವನ್ನು ದೇಸಾಯರಿಗೆ ಓದಿತೋರಿಸಿದರು. ಬಳಿಕ ದೇಸಾಯರು ಆ ಪತ್ರಕ್ಕೆ ಮೋಡಿಯಲ್ಲಿ ತಮ್ಮ ಸಹಿ ಮಾಡಿದರು. ನಾಯಕರು ತಮ್ಮ ದಸ್ತೂರ ಹಾಕಿದರು. ದೇಸಾಯರು ಹೇಳಲಾಗಿ ಅಣ್ಣಾದೀಕ್ಷಿತರೂ ತಿಪ್ಪಾಶಾಸ್ತ್ರಿಗಳೂ ತಮ್ಮ ಸಾಕ್ಷಿಗಳನ್ನು ಹಾಕಿದರು. ದೇಸಾಯರು ಆ ಮೃತ್ಯುಪತ್ರವನ್ನು ಅಣ್ಣಾದೀಕ್ಷಿತರ ಕೈಯ್ಯಲ್ಲಿ ವೆಂಕಟರಾಯರಿಗೆ ಮುಟ್ಟಿಸಲೆಂದು ಕೊಟ್ಟರು. ಅಷ್ಟರಲ್ಲಿ ಕಲ್ಲಂಭಟ್ಟರು ಬಿಸಿನೀರನ್ನು ತೆಗೆದುಕೊಂಡು ಅಲ್ಲಿಗೆ ಬಂದರು. ಬಳಿಕ ದೇಸಾಯರು 'ನಾನು ಮರಣಕಂಜಿಲ್ಲ; ಆದರೆ ಕಲಿಪುರುಷನು ನನ್ನ ಪುತ್ರನೆಂದು ಮೆರೆಯಬಾರದೆಂಬುದೇ ನನ್ನಾಸೆ' ಎಂದು ಹೇಳಿದರು. ಆಮೇಲೆ ತಮಗೆ ಮರುದಿನ ಪ್ರಾಯಶ್ಚಿತ್ತವನ್ನು ಕೊಡಿಸಬೇಕೆಂದು ಹೇಳಿ, ಎಲ್ಲರಿಗೂ ಹೋಗಿ ಬರಲು ಹೇಳಿದರು.

ಮರುದಿವಸ ಬೆಳಗಾಗುತ್ತಲೆ ಅಣ್ಣಾದೀಕ್ಷಿತರು, ಸ್ನಾನಮಾಡಿ ದೇಸಾಯರ ಇಚ್ಛೆಯ ಮೇರೆಗೆ, ಊರೊಳಗಿನ ವೈದಿಕರಿಗೆಲ್ಲ ಆಮಂತ್ರಣ ಕೊಟ್ಟು ದೇಸಾಯರ ಮನೆಗೆ ಕರೆದುಕೊಂಡು ಬಂದರು. ದೇಸಾಯರು ಹಾಸಿಗೆ ಬಿಟ್ಟು ಏಳದಂತಿದ್ದರೂ ರಟ್ಟೆಯಲ್ಲಿ ಕೈಗಳನ್ನು ಹಾಕಿಸಿಕೊಂಡು ಬಂದು ಹೊರಗೆ ಕುಳಿತರು. ಸಮಂತ್ರಸ್ನಾನಮಾಡಿ ಬಂದ ಬ್ರಹ್ಮವೃಂದಕ್ಕೆ ಅವರು

ನಮಸ್ಕರಿಸಿದರು. ಬಳಿಕ ಪಂಚಕವ್ಯಪ್ರಾಶನಮಾಡಿ ಸರ್ವ ಪ್ರಾಯಶ್ಚಿತ್ತದ ಸಂಕಲ್ಪವನ್ನು ಮಾಡಿ ಗೋದಾನವೇ ಮೊದಲಾದ ಸರ್ವದಾನಗಳನ್ನು ಸ್ವಹಸ್ತದಿಂದ ವೈದಿಕರಿಗೆ ಕೊಟ್ಟರು. ಮುಂದೆ ತಮಗೆ ತಿಲಾಂಜಲಿಯನ್ನು ಕೊಡತಕ್ಕವರು ಯಾರೂ ಇಲ್ಲದ್ದರಿಂದ, ಜನ್ಮದಿಂದಿರುವಾಗಲೇ ಸದ್ಗತಿಯ ಮಾರ್ಗವನ್ನು ಕಂಡುಕೊಳ್ಳುವೆವೆಂದು ಹೇಳಿ, ಬಂದ ಬಡಬಗ್ಗರಿಗೆಲ್ಲ ಧಾನ್ಯ ದಾನವನ್ನು ಕೊಡಲಿಕ್ಕೆ ಹೇಳಿ, ತಮ್ಮ ಬತ್ತದ ಪಣತಗಳನ್ನೆಲ್ಲ ಬರಿದು ಮಾಡಿದರು. ಬಂದ ಜನರೆಲ್ಲ ತಾವು ಹೊರತಕ್ಕಷ್ಟು ಬತ್ತವನ್ನು ತೆಗೆದುಕೊಂಡು ಮರುಗುತ್ತ ನಡೆದರು. ಇದೇ ಹೊತ್ತಿಗೆ ಹಳ್ಳೀಕೇರಿಯ ಗೊಲ್ಲರ ಸಿದ್ಧಯ್ಯನೂ ಆಕಸ್ಮಾತ್ತಾಗಿ ಬೊಮ್ಮಗೇರಿಗೆ ಬಂದಿದ್ದನು. ಅವನು ಸೇಂದಿಯ ಅಂಗಡಿಯಲ್ಲಿ ಮನಬಂದಂತೆ ಸೇಂದಿಯನ್ನು ಕುಡಿದು ಜೋಲಿಯನ್ನು ಹೊಡೆಯುತ್ತ ದೇಸಾಯರ ಮನೆಯ ಮುಂದೆ ಹಾದುಹೋಗುತ್ತಿದ್ದನು. ಅವನು ಅಲ್ಲಿ ಕೂಡಿದ ಜನಸ್ತೋಮವನ್ನು ನೋಡಿ ' ಇಲ್ಲ್ಯಾಕಿಷ್ಟ ಮಂದಿ ನೆರದೈತ್ರೀ? ' ಎಂದು ಕೇಳಿದನು.ಆಗ ಅಲ್ಲಿ ನೆರೆದವರು, ' ಏನ ಹೇಳಬೇಕಲೆ? ನಮ್ಮೂರ ದೊರಿ ಮರೆಯಾಗತಾನ. ನಮ್ಮೂರಿಗೆ ಧರ್ಮರಾಯ ಇದ್ದ್ಹಾಂಗ ಇದ್ದ ಮಾರಾಯ! ನಾಟಾ ಮಾಡಿಸ್ಯಾರಂತೋ ಎಪ್ಪಾ! ಯಾ ಪಾಪಿ ಮಾಡಿಕೊಟ್ಟಿದ್ದೀತು? ಸಾಯೋ ಕಾಲಕ್ಕ ಎಲ್ಲ ಬಡಬಗ್ಗರನ ಕರಿಸಿ ಕಾಳು ಕೊಡಾಕ ಹತ್ತ್ಯಾನ. ನೀನೂ ಒಳಗ ಹೋಗಲೇ! ಓಟ ಕಾಳು ಕೊಡತಾನ, ಹೊತಗೊಂಡು ಹೋಗು ' ಎಂದರು. ಆಗ ಸಿದ್ಧಯ್ಯನು ಮನೆಯೊಳಗೆ ಹೋಗಿ ಗೊಂಗಡಿಯ ಮೂಲೆಯಲ್ಲಿ ಬತ್ತವನ್ನು ಹಾಕಿಸಿಕೊಂಡು ಹೊರಗೆ ಬರುವ ಮುಂದೆ ಅಲ್ಲಿ ಕುಳಿತಿರುವ ಚಂದ್ರಾವತಿಬಾಯಿಯವರನ್ನೂ ಒಡಕಣ್ಣನನ್ನೂ ನೋಡಿ ಎದೆ ಎದೆ ಬಡಕೊಳ್ಳುತ್ತ ' ಅಯ್ಯೋ ನಾನು ಗಾತಾ ಮಾಡೆನ್ರೋ ಎಪಾ! ದುಡ್ಡಿನ ಆಶೇವು ಬಾಳ ಕೆಟ್ಟ. ನನ್ನ ಕೈವಾರಿ ಹೋಗ್ಯೈತಿ. ಏನು ಮಾಡಲಿ! ಅಯ್ಯಯ್ಯೋ! ಮುಗಲು ಹರದು ಬೀಳತೈತಿ. .ಮುಗಲ ಹರದು ಬೀಳತೈತಿ ' ಎಂದು ಸೇಂದಿಯ ಮಬ್ಬಿನಲ್ಲಿ ಕೂಗುತ್ತ ನಡೆದನು. ಅವನ ಮಾತಿನ ಮರ್ಮವು ಅಲ್ಲಿ ಕೂಡಿದ ಜನರಿಗೆ ಹೊಳೆಯದೆ ಇರಲಿಲ್ಲ. ಅವರು ಕುಲಕಂಟಕನಾದ ಒಡಕಣ್ಣನನ್ನೂ, ಪತಿಘಾತಕಿ ಚಂದ್ರಾವತಿಬಾಯರನ್ನೂ ಮನಬಂದಂತೆ ಹಳಿದರು. ಒಡಕಣ್ಣನು

ಹೊರಗೆ ಬಂದು ಅಲ್ಲಿ ನೆರೆದ ಜನರಿಗೆ ಮನೆಗೆ ಹೋಗಿರೆಂದು ಬೆದರಿಸಿದನು. ದೇಸಾಯರು, ಬಂದ ವೈದಿಕರಿಗೆ ನಮಸ್ಕರಿಸಿ ಮನೆಗೆ ಹೋಗಿರೆಂದು ಹೇಳಿ ತಮ್ಮ ಹಾಸಿಗೆಯ ಮೇಲೆ ಒರಗಿದರು. ಅಂದಿನಿಂದ ಅವರು ಚಂದ್ರಾವತಿ ಬಾಯರಿಂದಲೂ ಒಡಕಣ್ಣಾನಿಂದಲೂ ಅನ್ನ ನೀರು ತೆಗೆದುಕೊಳ್ಳಲಿಲ್ಲ. ಅವರ ಶುಶ್ರೂಷೆಗಳನ್ನು ಸ್ವೀಕರಿಸಲಿಲ್ಲ. ದೇಸಾಯರ ಆಶ್ರಿತನಾದ ಬ್ರಾಹ್ಮಣನೇ ತನ್ನ ಮನೆಯಿಂದ ಹಾಲು-ಹಣ್ಣುಗಳನ್ನು ತಂದು ದೇಸಾಯರಿಗೆ ಹಾಕಹತ್ತಿ ದನು. ಕರ್ಮಯೋಗಿಗಳಾದ ದೇಸಾಯರು ಹೊನ್ನು-ಹೆಣ್ಣು-ಮಣ್ಣುಗಳ ಮೇಲಿನ ಮಮತೆಯನ್ನು ತೊರೆದು, ಸರ್ವಸಂಗಪರಿತ್ಯಾಗಮಾಡಿದ ಸನ್ಯಾಸಿ ಯಂತೆ ದೇವಧ್ಯಾನಮಾಡುತ್ತ ಶಾಂತಚಿತ್ತರಾಗಿ ಮರಣವನ್ನು ಎದುರು ನೋಡಹತ್ತಿದರು.

ಮಾಘ ಶುದ್ಧ ಪೌರ್ಣಿಮೆ. ಅರುಣೋದಯ ಸಮಯ. ನಕ್ಷತ್ರ ಗಳು ಒಂದೊಂದೇ ಅಡಗಹತ್ತಿವೆ. ಸುತ್ತಲೂ ಶಾಂತತೆಯು ನೆಲೆ ಗೊಂಡಿದೆ. ಆ ಸಮಯಕ್ಕೆ ದೇಸಾಯರ ಮನೆತುಂಬ ಜನರು ನೆರೆದಿದ್ದಾರೆ. ದೇಸಾಯರಿಗೆ ಊರ್ಧ್ವಶ್ವಾಸವು ಎಳೆಯಹತ್ತಿದ್ದರಿಂದ ಬಾಯಿಂದ ಮಾತ ನಾಡಲಿಕ್ಕೆ ಬರದಂತಾಗಿದೆ. ಆಗ ಅವರು ತಮ್ಮನ್ನು ದರ್ಭಾಸನದ ಮೇಲೆ ಮಲಗಿಸಿರೆಂದು ಸಂಜ್ಞೆಮಾಡಿದರು. ಕೂಡಲೆ ಅಣ್ಣಾದೀಕ್ಷಿತರೂ ತಿಪ್ಪಾ ಶಾಸ್ತ್ರಿಗಳೂ ದೇಸಾಯರನ್ನು ಎತ್ತಿ ದರ್ಭೆ ಹಾಸಿದ ಕೃಷ್ಣಾಜಿನದ ಮೇಲೆಯೆ ಮಲಗಿಸಿದರು. ಆಗ ದೇಸಾಯರು ತಮ್ಮ ಮಿತ್ರರಿಗೂ ಬಂದ ಜನರಿಗೂ ಕೈಮುಗಿದು ದೇವಧ್ಯಾನ ಮಾಡುತ್ತ ಕಣ್ಣುಮುಚ್ಚಿದರು. ಕೂಡಲೆ ಅವರ ಆತ್ಮವು ಬ್ರಹ್ಮರಂಧ್ರವನ್ನು ಭೇದಿಸಿ ಅವರ ಜಡದೇಹವನ್ನು ಬಿಟ್ಟು ಹಾರಿ ಹೋಯಿತು. ಆಗ ಅಲ್ಲಿ ನೆರೆದ ಜನರು 'ಅಯ್ಯೋ!' ಎಂದು ಗೋಳಿಟ್ಟರು. ಚಂದ್ರಾವತಿಬಾಯಿಯವರು ಹೆಣದ ಮೇಲೆ ಬಿದ್ದು ಎದೆ ಎದೆ ಬಡಕೊಳ್ಳುತ್ತ ಹೊರಳಾಡಹತ್ತಿದರು. ಕೂಡಿದವರು ಅವರನ್ನು ಅಲ್ಲಿಂದ ಎಳೆದುಕೊಂಡು ಹೋಗಿ ದೂರ ಕುಳ್ಳಿರಿಸಿದರು. ದೇಸಾಯರ ಮರಣವಾರ್ತೆಯು ಬೆಳಗಾಗು ವದರೊಳಗೆ ಬೊಮ್ಮಗೇರಿಯ ತುಂಬ ಹಬ್ಬಿತು. ದೇಸಾಯರ ದೇಹಸಂಸ್ಕಾ ರಕ್ಕೆ ಸಾವಿರಾರು ಜನರು ನೆರೆದರು. ಎಲ್ಲರೂ ಶವದ ಹಿಂದಿನಿಂದ ಕಣ್ಣೀರು ಸುರಿಸುತ್ತಾ ಸ್ಮಶಾನಭೂಮಿಗೆ ಹೋಗಿ ದೇಸಾಯರ ದೇಹಕ್ಕೆ ಅಗ್ನಿಸಂಸ್ಕಾ

ರವನ್ನು ಮಾಡಿ, ಅವರ ಆತ್ಮಕ್ಕೆ ಶಾಂತಿಯನ್ನೀಯಲು ಪರಮಾತ್ಮನನ್ನು ಪ್ರಾರ್ಥಿಸಿ ಅಲ್ಲಿಯೇ ಸಮೀಪದಲ್ಲಿದ್ದ ಕೆರೆಯಲ್ಲಿ ಜಳಕಮಾಡಿ, 'ಮೆಚ್ಚು ಪುದ್ದು ಮರಣವ ತಂದಿತೆ'ಂದು ನುಡಿಯುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

---

## ೧೪

**ಒಡೆಕಣ್ಣನ ದತ್ತಕ ಪ್ರಕರಣ........**

ಶ್ರೀಪತಿರಾಯರು ಜೀವದಿಂದಿರುವಾಗಲೇ ಯಾರನ್ನಾದರೂ ತಮ್ಮ ದತ್ತಕಪುತ್ರನನ್ನು ಮಾಡಿಕೊಂಡರೆ ತನ್ನ ಕಾರಸ್ಥಾನವೆಲ್ಲ ಕೆಟ್ಟುಹೋಗುತ್ತ ದೆಂದು ಒಡಕಣ್ಣನು ಚಿಂತಿಸಿದ್ದನು. ದೇಸಾಯರು ಒಡಕಣ್ಣನನ್ನೂ ಚಂದ್ರಾ ವತಿಬಾಯಿಯವರನ್ನೂ ಕಂಡಕೂಡಲೆ ಕೆಂಡದಂತಾಗಹತ್ತಿದ ಮೇಲೆಯಂತೂ ಒಡಕಣ್ಣನು ಮನದಲ್ಲಿ ತಳಮಳಿಸಹತ್ತಿದನು. ಇದರ ನಿರ್ಧಾರಕ್ಕಾಗಿಯೇ ಒಡಕಣ್ಣನು ಚಂದ್ರಾವತಿಬಾಯಿಯವರ ಮುಖಾಂತರ ತನ್ನನ್ನು ದತ್ತಕ ಮಾಡಿಕೊಳ್ಳತಕ್ಕ ವಿಷಯವನ್ನು ದೇಸಾಯರೆದುರಿಗೆ ತೆಗೆಸಿದನು. ಅದಕ್ಕೆ ದೇಸಾಯರು ಧಿಕ್ಕಾರಮಾಡಿ ತಮ್ಮ ಮಿತ್ರರೆದುರಿಗೆ ಮೃತ್ಯುಲೇಖದ ಮಾತು ತೆಗೆದದ್ದರಿಂದ ಒಡಕಣ್ಣನಿಗೆ ಸ್ವಲ್ಪ ಸಮಾಧಾನವಾಯಿತು. ಚಂದ್ರಾವತಿ ಬಾಯಿಯವರು ತನ್ನ ಬಲೆಯಲ್ಲಿ ಬಿದ್ದಿರುವದರಿಂದ ದೇಸಾಯರು ಮೃತರಾದ ಮೇಲೆ ತನ್ನನ್ನೇ ಅವರು ದತ್ತಕ ತೆಗೆದುಕೊಳ್ಳುವರು; ಆ ಮೇಲೆ ವ್ಯಾಜ್ಯ ವನ್ನು ಹೂಡಿ ದೇಸಾಯರು ಬರೆದಿಟ್ಟ ಮೃತ್ಯುಪತ್ರವನ್ನು ಮಣ್ಣುಗೂಡಿಸ ಬಹುದೆಂದು ಒಡಕಣ್ಣನು ನಂಬಿದನು. ಹೀಗಿದ್ದುದರಿಂದಲೇ ದೇಸಾಯರು ಮೃತ್ಯುಪತ್ರವನ್ನು ಬರೆದುಕೊಡುವ ಕಾಲಕ್ಕೆ ಒಡಕಣ್ಣನು ಯಾವ ತಂತ್ರ ವನ್ನೂ ಹೂಡದೆ ಸುಮ್ಮನಿದ್ದನು. ಮುಂದಿನ ತನ್ನ ಕಾರ್ಯಸಾಧನೆಯ ದೆಸೆಯಿಂದ ಅವನು ತನ್ನ ಬಾಲ್ಯಸ್ನೇಹಿತರಾದ ಬಡಿಗರ ಭರಮಣ್ಣ, ಕಂಬಾರ ಕಲ್ಲಣ್ಣ, ಸೆಟ್ಟರ ಬಸೆಟ್ಟೆಪ್ಪ ಮೊದಲಾದವರೊಡನೆ ವಿಶೇಷ ಸಖ್ಯವನ್ನು ಬೆಳೆಸಿದನು.

ಶ್ರೀಪತಿರಾಯರು ಮೃತರಾದ ಕೂಡಲೆ, ಅವರ ಉತ್ತರಕ್ರಿಯೆಯನ್ನು ಮಾಡಲಿಕ್ಕೆ ಒಡಕಣ್ಣನು ತನ್ನ ತಂದೆಯಾದ ಗೋಪಾಳರಾಯರನ್ನು ಬೊಮ್ಮಗೇರಿಗೆ ಕರೆಯಿಸಿದನು; ಅಷ್ಟರಲ್ಲಿ ವೆಂಕಟರಾಯರೂ ಬೊಮ್ಮಗೇರಿಗೆ ಬಂದಿದ್ದರು. ಅಣ್ಣಾದೀಕ್ಷಿತರು ದೇಸಾಯರು ಬರೆದಿಟ್ಟ ಮೃತ್ಯುಪತ್ರವನ್ನು ವೆಂಕಟರಾಯರಿಗೆ ಕೊಟ್ಟು ನೀವೇ ಶ್ರೀಪತಿರಾಯರ ಉತ್ತರಕ್ರಿಯೆಯನ್ನು ಮಾಡಲಿಕ್ಕೆ ಯೋಗ್ಯರೆಂದು ತಿಳಿಸಿದರು. ಆದರೆ ಚಂದ್ರಾವತಿಬಾಯಿಯವರೂ ಒಡಕಣ್ಣನೂ ಕೂಡಿ ವೆಂಕಟರಾಯರನ್ನು ಮನೆಯೊಳಗೆ ಬರಗೊಡಲಿಲ್ಲ. ಗೋಪಾಳರಾಯರೇ ಚಂದ್ರಾವತಿಬಾಯಿಯವರ ಯಜಮಾನತ್ವವನ್ನು ವಹಿಸಿ ಶ್ರೀಪತಿರಾಯರ ದಿನಕರ್ಮವನ್ನು ಮಾಡಿದರು. ಅಣ್ಣಾದೀಕ್ಷಿತರೂ ತಿಪ್ಪಾಶಾಸ್ತ್ರಿಗಳೂ ಅವರ ಮನೆಗೆ ಊಟಕ್ಕೆ ಹೋಗಲಿಲ್ಲ. ದೇಸಾಯರ ಆಶ್ರಿತರೂ, ಊರೊಳಗಿನ ಕೆಲವು ಬುಭುಕ್ಷಿತರಾದ ಬ್ರಾಹ್ಮಣರೂ ಮೃಷ್ಟಾನ್ನಕ್ಕೆ ಮರುಳಾಗಿ ಅವರ ಮನೆಗೆ ಊಟಕ್ಕೆ ಹೋದರು. ಅಂತೂ ಇಂತೂ ಶ್ರೀಪತಿರಾಯರ ಉತ್ತರಕ್ರಿಯೆಯು ಸಾಂಗವಾಯಿತು. ಊರೊಳಗಿನ ಉಂಡಾಡಿಗರೂ, ಉಡಾಳರೂ, ಕೃತಘ್ನರೂ, ಮೂರ್ಖರೂ ಒಡಕಣ್ಣನ ಬೆನ್ನುಕಟ್ಟಿದರು. ಶ್ರೀಪತಿರಾಯರು ಸತ್ತು ಹತ್ತು ದಿನಸಗಳಲ್ಲಿಯೇ ಬೊಮ್ಮಗೇರಿಯಲ್ಲಿ ಎರಡು ಬಣಗಳುಂಟಾಗಿ ಊರ ಒಕ್ಕಟ್ಟು ಅಳಿದುಹೋಯಿತು.

ಶ್ರೀಪತಿರಾಯರ ಉತ್ತರಕ್ರಿಯೆಯು ಮುಗಿದ ಕೂಡಲೆ ಒಡಕಣ್ಣನು ಚಂದ್ರಾವತಿಬಾಯಿಯವರನ್ನು ಕೂಡಿಕೊಂಡು ಹನುಮಾಪುರಕ್ಕೆ ಹೋದನು. ಆಗ ದೇಸಾಯರ ರೈತಜನರೆಲ್ಲ ಬಂದು ಶ್ರೀಪತಿರಾಯರ ಗುಣವರ್ಣನೆಯನ್ನು ಮಾಡುತ್ತ ಗೋಳಿಟ್ಟರು; ಮತ್ತು ತಮ್ಮ ದೇಸಾಯರು ಈ ವರ್ಷ ಊರಲ್ಲಿ ಹುಟ್ಟಿದ ಮುಳ್ಳಗಳ್ಳಿಯನ್ನು ನಾಶಮಾಡಿಬಿಡುತ್ತೇವೆಂದು ವಚನ ಕೊಟ್ಟಿದ್ದರೆಂದೂ ಹಳಹಳಿಸಿದರು. ಆಗ ಒಡಕಣ್ಣನು 'ಮಿಂಚಿಹೋದ ಮಾತಿಗೆ ಚಿಂತಿಸಿ ಫಲವಿಲ್ಲ'ವೆಂದನು. 'ದೇಸಾಯರು ಅಲ್ಪಾಯುಷ್ಯವನ್ನು ಪಡೆದು ಬಂದದ್ದರಿಂದ ಅಕಾಲದಲ್ಲಿ ಅವರ ಅವತಾರ ಸಮಾಪ್ತಿಯಾಯಿತು. ಅವರ ಕುಟುಂಬದವರೂ ನಿಮ್ಮನ್ನು ತಾಯಿಯಂತೆ ಸಲಹುವರು. ದೇಸಾಯರು ವಚನಕೊಟ್ಟಂತೆ ಈ ವರ್ಷ ಮುಳ್ಳಗಳ್ಳಿಯನ್ನು ತೆಗೆದೊಗೆಯಲಿಕ್ಕೆ ಸಹಾಯ ಮಾಡುವರು. ನೀವೆಲ್ಲರೂ ಅವರನ್ನು ನಂಬಿ ನಡೆಗರೆ, ಅವರು ಈ ವರ್ಷದ

ಉತ್ಪನ್ನದಲ್ಲಿ ಅರ್ಧ ಉತ್ಪನ್ನವನ್ನು ಡಬಗಳ್ಳಿಯು ನಾಶಕ್ಕಾಗಿ ಉಪಯೋಗಿಸುವರು' ಎಂದು ಮುಂತಾಗಿ ಔಪಚಾರಿಕ ಮಾತುಗಳನ್ನು ಹೇಳಿ, ರೈತರ ಮನವೊಲಿಸಿದನು. ಆದರೆ ಇಷ್ಟರಲ್ಲಿ ರೈತರಿಗೆ ದೇಸಾಯರು ವೆಂಕಟರಾಯರ ಹೆಸರಿನಲ್ಲಿ ಮೃತ್ಯುಪತ್ರವನ್ನು ಮಾಡಿಟ್ಟ ಸುದ್ದಿಯ ಸುಳಿವು ಬಡಿದಿತ್ತು. ಕೂಡಲೆ ಒಬ್ಬ ರೈತನು ವೆಂಕಟರಾಯರ ಹೆಸರಿನಲ್ಲಿ ಮೃತ್ಯುಪತ್ರ ಮಾಡಿಟ್ಟದ್ದು ನಿಜವೇನೆಂದು ಕೇಳಿದನು. ಅದಕ್ಕೆ ಒಡಕಣ್ಣನು 'ಅವರು ಸಾಯುವ ಕಾಲಕ್ಕೆ ಯಾರಿಗೂ ಏನೂ ಬರಕೊಟ್ಟಿದ್ದಿಲ್ಲ; ಅವರ ಕುಟುಂಬದವರಿಗೆ ದತ್ತಕ ಮಾಡಿಕೊಂಡು ಮನೆತನ ನಿಲ್ಲಿಸಲಿಕ್ಕೆ ಹೇಳಿ ಸತ್ತರು. ಆದರೆ ಬೊಮ್ಮಗೇರಿಯೊಳಗಿನ ಕೆಲವು ಪುಂಡ ಜನರು ಕೂಡಿಕೊಂಡು ದೇಸಾಯರ ಮನೆತನವು ಅಳಿಯಬೇಕೆಂಬ ದುರಾಲೋಚನೆ ಮಾಡಿ ಅವರು ಸತ್ತಮೇಲೆ ಒಂದು ಖೊಟ್ಟಿ ಮೃತ್ಯುಪತ್ರವನ್ನು ಬರೆದು ಆ ವೆಂಕಟರಾಯನ ಕೈಯಲ್ಲಿ ಕೊಟ್ಟಿರುವರು. ಆದಕಾರಣ ಆ ವೆಂಕಟರಾಯನು ಈ ಸುದ್ದಿಯನ್ನು ಹನುಮಾಪುರದಲ್ಲಿ ಹಬ್ಬಿಸಿರುವನು. ನಿಮ್ಮ ಧನಿಯರ ಮನೆತನ ಅಳಿಯಬೇಕೆಂದು ನಿಮ್ಮ ಮನಸ್ಸಿನಲ್ಲಿದ್ದರೆ ನಿಮಗೆ ತಿಳಿದಂತೆ ಮಾಡಿ 'ರೆಂದು ಒಂದು ದೊಡ್ಡ ಭಾಷಣವನ್ನೇ ಮಾಡಿದನು. ಕೂಡಲೆ ಆ ರೈತರ ಸಮೂಹದಲ್ಲಿ ವೆಂಕಟರಾಯರ ಬಗ್ಗೆ ತಿರಸ್ಕಾರಪೂರ್ಣವಾಗಿ ಕುಚುಕುಚು ಮಾತು ಸುರುವಾಯಿತು. ಇದೇ ಸಂಧಿಯನ್ನು ಸಾಧಿಸಿ ಒಡಕಣ್ಣನು 'ನಿಮ್ಮ ಮನಸ್ಸಿನಲ್ಲಿ ದೇಸಾಯರ ಕುಟುಂಬದವರಿಗೆ ಸಹಾಯ ಮಾಡುವದಿದ್ದರೆ ಆ ವೆಂಕಟರಾಯ ಇಲ್ಲಿ ಬಂದಾಗ ಅವನಿಗೆ ಲಾವಣೀ ಪತ್ರ ಬರೆದು ಕೊಡಬೇಡಿರಿ' ಎಂದು ಉಪದೇಶಿಸಿದನು. 'ಛೇ! ಛೇ! ಆಗೋಣ್ರಿ! ಅವ ಬಂದರ ಕಾಲು ಮುರದ ಕಳಿಸ್ತೇವಿ' ಎಂದು ಎಷ್ಟೊ ತರಹವಾಗಿ ರೈತರು ವೆಂಕಟರಾಯರ ಬಗ್ಗೆ ಇರುವ ತಮ್ಮ ಅಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಒಡಕಣ್ಣನು, ರೈತರು ಹೀಗೆ ಬಾಯಿಯವರು ಹೇಳಿದಂತೆ ಕೇಳಿದರೆ, ಅವರು ದತ್ತಕ ಮಾಡಿಕೊಂಡು ಮನೆತನವನ್ನು ನಿಲ್ಲಿಸುವರು; ಮತ್ತು ಅದರಿಂದ ಇಬ್ಬರಿಗೂ ಒಳಿತೆಂದು ಹೇಳಿ ಎಲ್ಲರ ಮನಸ್ಸನ್ನು ಒಲಿಸಿಕೊಂಡನು. ಆ ಮೇಲೆ ಒಡಕಣ್ಣನು ಹನುಮಾಪುರದಲ್ಲಿ ಎರಡು ದಿವಸವಿದ್ದು ಮೃದುವಚನಗಳಿಂದ ದೇಸಾಯರ ರೈತರನ್ನು ಮರುಳುಗೊಳಿಸಿ ಆ ವರ್ಷದ ಅರ್ಧ ಲಾವಣೀ

ಹಣವನ್ನು ಡಬಗಳ್ಳಿಯು ನಾಶಕ್ಕೆಂದು ರೈತರ ಕಡೆಗೇ ಬಿಟ್ಟು ಉಳಿದ ಅರ್ಧ ಹಣವನ್ನು ತೆಗೆದುಕೊಂಡು ಬೊಮ್ಮಗೇರಿಗೆ ಬಂದನು.

ಶ್ರೀಪತಿರಾಯರು ಬರೆದುಕೊಟ್ಟ ಮೃತ್ಯುಪತ್ರದ ಪ್ರಕಾರ ಅವರ ಆಸ್ತಿಯು ತಮಗೆ ದೊರೆಯಬೇಕೆಂದು ವೆಂಕಟರಾಯರು ಪ್ರಯತ್ನ ಮಾಡಿದರು. ಆದರೆ ಹನುಮಾಪುರದ ರೈತರೂ ಜನರೂ ಉಳಿದ ಚಾವರಾತ ಜಮಾನುಗಳ ರೈತರೂ ಒಡಕಣ್ಣನ ಮಾತಿನ ಹಾಗು ದುಡ್ಡಿನ ದುರಾಸೆಯ ಮಬ್ಬಿಗೆ ಬಿದ್ದು ವೆಂಕಟರಾಯರಿಗೆ ಲಾವಣೀ ಕಬಲಾಯತಿಯನ್ನು ಬರೆದುಕೊಡಲಿಲ್ಲ. ಆದ್ದರಿಂದ ಅವರು ಕೋರ್ಟಿನ ಕಟ್ಟೆಯನ್ನು ಹತ್ತಬೇಕಾಯಿತು. ಅಲ್ಲಿ ಅವರು ಶ್ರೀಪತಿರಾಯರು ಬರೆದುಕೊಟ್ಟ ಮೃತ್ಯುಪತ್ರದ ಪ್ರಕಾರ ಅವರ ಆಸ್ತಿಯೆಲ್ಲ ತಮಗೆ ದೊರೆಯಬೇಕೆಂದು ವ್ಯಾಜ್ಯ ಹೂಡಿದರು. ಈ ಸುದ್ದಿಯು ಒಡಕಣ್ಣನಿಗೆ ತಿಳಿದ ಕೂಡಲೆ ಅವನು ವಕೀಲರ ಬಳಿಗೆ ಹೋಗಿ ಈ ವ್ಯಾಜ್ಯಕ್ಕೆ ಪ್ರತೀಕಾರದ ಉಪಾಯವನ್ನು ತಿಳಿದುಕೊಂಡು ಬೊಮ್ಮಗೇರಿಗೆ ಬಂದು ಎಲ್ಲ ಸಂಗತಿಯನ್ನು ಚಂದ್ರಾವತಿಬಾಯಿಯವರಿಗೆ ತಿಳಿಸಿದನು. ಆಗ ಚಂದ್ರಾವತಿಬಾಯಿಯವರು—'ನಾನು ಸುಮ್ಮನೆ ಕುಳಿತರೆ, ಆ ವೆಂಕಟರಾಯನು ವತನವನ್ನೆಲ್ಲಾ ಬಕ್ಕರಿಸಿ ನನ್ನ ಕೈಯಲ್ಲಿ ಪರಟೆ ಕೊಡುವನು; ಕೋರ್ಟಿನಲ್ಲಿ ಹೋಗಿ ನಿಂತರೆ ನನ್ನ ಮರ್ಯಾದೆ ಉಳಿಯುವದಿಲ್ಲ. ಇದೆಂಥ ಬಿಕ್ಕಟ್ಟಿನ ಪ್ರಸಂಗ ಬಂದಿತಲ್ಲ!' ಎಂದು ದೊಡ್ಡ ಧ್ವನಿತಗದು ಅತ್ತರು. ಆಗ ಒಡಕಣ್ಣನು ಬಾಯಿಯವರು ಕೋರ್ಟಿನ ಕಟ್ಟೆಯನ್ನು ಹತ್ತಿದರೆ, ಅವರ ಮರ್ಯಾದೆ ಹೋಗುವದೆಂದು 'ಸೋ' ಹಾಕಿದನು. ತರುವಾಯ ಅವರಿಗೆ ಸಮಾಧಾನ ಮಾಡಿ, ವತನವು ಅವರಿಗೆ ಉಳಿಯುವ ಒಂದೇ ಒಂದು ಹಂಚಿಕೆಯೆಂದರೆ, ವಕೀಲರು ಹೇಳಿದಂತೆ, ದತ್ತಕ ಮಾಡಿಕೊಳ್ಳುವದೆಂದು ತಿಳಿಸಿದನು. ವಯಸ್ಸಿನಲ್ಲಿದ್ದವರನ್ನೇ ದತ್ತಕ ಮಾಡಿಕೊಂಡು ದತ್ತಕ ಮಗನನ್ನು ಮುಂದೆ ಮಾಡಿ ನ್ಯಾಯಮಾಡಿದರೆ ಈ ವ್ಯಾಜ್ಯದಲ್ಲಿ ಜಯ ಸಿಗುವ ಸಂಭವವಿದೆಯೆಂದು ಒಡಕಣ್ಣನು ಮಾತಿಗೆ ಮೊದಲುಮಾಡಿದನು. ಚಂದ್ರಾವತಿಬಾಯಿಯವರು 'ದತ್ತಕಮಾಡಿಕೊಂಡರೆ ನಿನ್ನನ್ನೇ ಸೈ. ನೀನು ನೋಡಿದಂತೆ ಮತ್ತ್ಯಾರೂ ನನ್ನನ್ನು ನೋಡುವದಿಲ್ಲ. ಆದರೆ ಮುಂದೆ ಮದುವೆ ಮಾಡಿಕೊಂಡ ಮೇಲೆ

ಹೆಂಡತಿಯ ಕೈಯಲ್ಲಿ ಸಿಕ್ಕು ನನ್ನ ಕೈ ಬಿಡಬಾರದು ' ಎಂದು ನನುನಗೆ ನಕ್ಕು ನುಡಿದರು.

' ನೀವು ನನ್ನನ್ನು ದತ್ತಕ ಮಾಡಿಕೊಂಡರೆ ನೀವು ಹೇಳಿದಂತೆ ಕೇಳಿಕೊಂಡು ಇರುತ್ತೇನೆ. ಆಣೆ ಮಾಡಿ ಹೇಳುತ್ತೇನೆ; ಮಾಡಿಕೊಂಡ ಹೆಂಡತಿಯನ್ನಾದರೂ ಬಿಟ್ಟೇನು ನಿಮ್ಮನ್ನು ಬಿಡಲಿಕ್ಕಿಲ್ಲ. ನನ್ನ ಮೇಲೆ ನಂಬಿಕೆ ಇದ್ದರೆ ನನ್ನನ್ನು ದತ್ತಕ ಮಾಡಿಕೊಳ್ಳಿರಿ. ಮುಂದೆ ನೀವು ಕೋರ್ಟಿನ ಕಟ್ಟೆಯನ್ನು ಹತ್ತದಂತೆ ನಾನು ಎಲ್ಲ ವ್ಯವಸ್ಥೆಯನ್ನು ಮಾಡುತ್ತೇನೆ. ಆ ವೆಂಕಟರಾಯನ ವಿರುದ್ಧ ಬಡದಾಡಿ ನ್ಯಾಯವನ್ನೂ ಗೆದೆಯುತ್ತೇನೆ. ಆದರೆ ಇದರಲ್ಲಿ ನಿಮ್ಮವರೇ ನಿಮ್ಮ ವಿರುದ್ಧವಾಗಬಾರದು. ' ಎಂದನು ಒಡಕಣ್ಣ.

ಬಾಯಿಯವರು ' ನಿಮ್ಮವರು ' ಎಂಬುದರ ಬಗ್ಗೆ ಸ್ವಲ್ಪ ವಿಚಾರ ಮಾಡಿದರು. ತಮ್ಮವರೆನ್ನುವವರು ಇರುವರಾದರೂ ಯಾರು ? ಇದ್ದ ಒಬ್ಬ ಅಣ್ಣನನ್ನು ಬಿಟ್ಟರೆ ಯಾರೂ ಇಲ್ಲ. ಅವನೂ ಹೆಂಡತಿಯ ಕೈಯ್ಯಲ್ಲಿ ಸಿಕ್ಕಿರುವನು. ಅವನೂ ಆ ಕಲ್ಲಂಭಟ್ಟರ ಟೋಳಿಯಲ್ಲಿ ಸೇರುವನೋ ಏನು ? ಎಂಬ ಸಂಶಯವು ಅವರಲ್ಲಿ ಉತ್ಪನ್ನವಾಯಿತು; ಕೂಡಲೆ ಒಡಕಣ್ಣನೆದುರು ಅವರು ಆ ಪ್ರಸ್ತಾಪವನ್ನು ತೆಗೆದರು. ಒಡಕಣ್ಣನು ' ಹೀಗೆ ಮಾತ್ರ ಆಗಬಾರದು ' ಎಂದು ಒಂದು ಯುಕ್ತಿಯನ್ನು ಹೇಳಿದನು. ಚಂದ್ರಾವತಿಬಾಯಿಯವರ ಅಣ್ಣನಿಗೆ ಇರುವ ಒಬ್ಬ ಮಗಳನ್ನು ತಮ್ಮ ದತ್ತಕಪುತ್ರನಿಗೆ ವರದಕ್ಷಿಣೆಯಿಲ್ಲದೆ ಮದುವೆ ಮಾಡಿಕೊಳ್ಳುವ ಆಸೆಯನ್ನು ಚಂದ್ರಾವತಿಬಾಯರು ಹಚ್ಚಬೇಕು; ಅಂದರೆ ಲಕ್ಷ್ಮಣ ಜೋಯಿಸರು ಬಾಯಿ ತೆರೆಯುವರು ! ಚಂದ್ರಾವತಿಬಾಯಿಯವರು ಅದಕ್ಕೆ ಒಪ್ಪಿಕೊಂಡು ಮರುದಿನ ತಮ್ಮ ಅಣ್ಣನನ್ನು ಕರೆಯಿಸಿ ಒಡಕಣ್ಣನು ಹೇಳಿದಂತೆ ಸವಿಮಾತಿನಲ್ಲಿ ಹೇಳಿದರು. ತಮ್ಮ ಆಸ್ತಿಯನ್ನು ಭಾಗಾದಿಯರ ಕೈಯ್ಯಲ್ಲಿ ಕೊಡುವದಕ್ಕಿಂತ ತಾವು ಹೇಳಿದಂತೆ ಕೇಳಿಕೊಂಡಿರುವ ಒಡಕಣ್ಣನನ್ನು ದತ್ತಕ ಮಾಡಿಕೊಂಡರೆ ಇಬ್ಬರಿಗೂ ಉತ್ತಮ; ಅಣ್ಣನು ನಿರಾಧಾರಿಯಾದ ತಂಗಿಯನ್ನು ಕಟ್ಟಿಕೊಂಡು ಬಡಿದಾಡದಿದ್ದರೆ ಹೇಗೆ ? ಎಂದು ಮುಂತಾಗಿ ಕರುಣೆ ಹುಟ್ಟುವಂತೆ ಮಾತಾಡಿದರು. ' ಒಡಕಣ್ಣನಾದರೂ ನಮಗೇನು ದೂರಿನವನಲ್ಲ; ಸಣ್ಣವನಿರುವಾಗಿ

ಸಿಂದ ಜೋಪಾನ ಮಾಡಿದ್ದೇನೆ. ನಿನ್ನ ಹಿರಿಯ ಮಗಳಾದ ಗೌರಿಯನ್ನು ಅವನಿಗೆ ಮಾಡಿಕೊಂಡು ಹಿಂದಿನ ಸಂಬಂಧ ಬೆಳೆಯಿಸೋಣ. '

ಒಡಕಣ್ಣನು ದುರ್ಗುಣಪೂರ್ಣನಿರುವನೆಂದು ಲಕ್ಷ್ಮಣ ಜೋಯಿಸರಿಗೆ ಗೊತ್ತಿದ್ದರೂ, ತಂಗಿಯ ಮಾತಿನ ಮೋಹದಿಂದ, ವರದಕ್ಷಿಣೆಯಿಲ್ಲದೆ ತಮ್ಮ ಮಗಳು ದೊಡ್ಡ ವತನದಾರರ ಮನೆತನಕ್ಕೆ ಬೀಳುವಳೆಂಬ ದುರಾಸೆಯಿಂದ, ತಮ್ಮ ತಂಗಿಯ ಹೇಳಿಕೆಯಂತೆ ನಡೆಯಲಿಕ್ಕೆ ಅವರು ಒಪ್ಪಿದರು. ಬಳಿಕ ಫಾಲ್ಗುಣ ವದ್ಯ ಪಂಚಮಿಯ ದಿವಸ ಚಂದ್ರಾವತಿಬಾಯಿಯವರು ಒಡಕಣ್ಣನನ್ನು ವಿಧಿಪೂರ್ವಕ ದತ್ತಕ ತೆಗೆದುಕೊಂಡರು. ಶ್ರೀಪತಿರಾಯರ ಆಶ್ರಿತ ಬ್ರಾಹ್ಮಣನು ದಕ್ಷಿಣೆಯ ದುರಾಶೆಗೂ ಒಪ್ಪತ್ತು ಕೂಳಿನ ಮಬ್ಬಿಗೂ ಬಿದ್ದು ದತ್ತಹೋಮವನ್ನು ಮಾಡಿಸಿದನು. ಲಕ್ಷ್ಮಣ ಜೋಯಿಸರೂ ಅವರ ಕಡೆಯ ಕೆಲವು ಜನ ಬ್ರಾಹ್ಮಣರೂ ಈ ದತ್ತಕಕ್ಕೆ ಸಹಾಯ ಮಾಡಿದರು. ಅಣ್ಣಾದೀಕ್ಷಿತರು ಮೊದಲಾದ ಶ್ರೀಪತಿರಾಯರ ಮಿತ್ರರು ಹಾಗು ಗೋವಿಂದ ನಾಯಕರು ಮೊದಲಾದ ಪ್ರತಿಷ್ಠಿತ ಜನರು ಈ ದತ್ತಕಕ್ಕೆ ಒಪ್ಪಲಿಲ್ಲ. ದತ್ತಹೋಮವಾದ ನಂತರ ದತ್ತಕ ಪತ್ರವನ್ನು ಬರೆದು ಅದಕ್ಕೆ ಲಕ್ಷ್ಮಣ ಜೋಯಿಸರು ಲಾಂಗೂಲಚಾಲನ ವೃತ್ತಿಯ ಕೆಲವು ಬುಭುಕ್ಷಿತ ಬ್ರಾಹ್ಮಣರಿಂದ ಹಾಗು ಶೆಟ್ಟರ ಬಸೆಟ್ಟೆಪ್ಪ ಮೊದಲಾದ ಒಡಕಣ್ಣನ ಸ್ನೇಹಿತರ ಕಡೆಯಿಂದ ಸಾಕ್ಷಿಗಳನ್ನು ಹಾಕಿಸಿದರು. ಅಂದು ಎಲ್ಲರಿಗೂ ಮೃಷ್ಟಾನ್ನ ಭೋಜನವಾಯಿತು. ತಿಪ್ಪಾಶಾಸ್ತ್ರಿಗಳ ಪಂಗಡದ ಬ್ರಾಹ್ಮಣರು ಅಂದು ಭೋಜನಕ್ಕೆ ಬರಲಿಲ್ಲ. ಮರುದಿವಸ ಆ ದತ್ತಕ ಪತ್ರವು ಸಬ್ ರಜಿಸ್ಟ್ರಾರರ ಕಚೇರಿಯಲ್ಲಿ ನೋಂದಾಯಿಸಲಾಯಿತು. ಒಡಕಣ್ಣನು ಶ್ರೀಪತಿರಾಯರ ದತ್ತಕಪುತ್ರನೆಂದೂ ಅವರ ಆಸ್ತಿಯ ಒಡೆಯನೆಂದೂ ಮೆರೆಯಹತ್ತಿದನು. ಒಟ್ಟಿಗೆ ಒಡಕಣ್ಣನ ಇಚ್ಛೆಯು ಸಫಲವಾಯಿತು.

ಧೂರ್ತನಾದ ಒಡಕಣ್ಣನು ಬ್ರಾಹ್ಮಣರು ಭೋಜನಕ್ಕೂ, ತಿರುಕರು ತಾಂಬೂಲಕ್ಕೂ ಮರುಳಾಗುವರೆಂಬುದನ್ನು ಅರಿತಿದ್ದನು. ಅಧಿಕ್ಕೋಸ್ಕರ ಅವನು ಯಾವುದಾದರೊಂದು ದೇವತಾರಾಧನೆಯ ನೆವಮಾಡಿ ತಿಂಗಳಿಗೆ ಎರಡು ಮೂರು ಸಾರೆ ಬ್ರಾಹ್ಮಣರಿಗೆ ಸುಗ್ರಾಸಭೋಜನ ಮಾಡಿಸಹತ್ತಿದನು. ಶ್ರಾವಣಮಾಸದಲ್ಲಿ ಮಹಾರುದ್ರಾಭಿಷೇಕದ ನೆವಮಾಡಿ ಹನ್ನೊಂದು

ಜನ ಬ್ರಾಹ್ಮಣರನ್ನು ತನ್ನ ಬಲೆಯಲ್ಲಿ ಹಿಡಿದನು. ಸಂತೆಗೊಮ್ಮೆ ನಾಲ್ಕಾರು ಸಾವಿರ ವೀಳ್ಯದ ಎಲೆಗಳನ್ನೂ ಆರು ಸೇರು ಅಡಿಕೆಯನ್ನೂ ಸೇರು ತಂಬಾಕ ವನ್ನೂ ತಂದಿಟ್ಟು ಮನೆಗೆ ಬಂದವರಿಗೆಲ್ಲ ಎಲೆ ಅಡಿಕೆ ತಂಬಾಕ ತಿಂದು ಅಲ್ಲಿಯೇ ಇಟ್ಟ ಪೀಕದಾನಿಯಲ್ಲಿ ಉಗುಳಿ ಹೋಗಲಿಕ್ಕೆ ಮುಕ್ತದ್ವಾರವನ್ನು ಇಟ್ಟನು. ಇದರಿಂದ ಊರೊಳಗಿನ ತಂಬಾಕ ತಿನ್ನುವ ಚಟದ ಜನರೆಲ್ಲರೂ ಒಡಕಣ್ಣನು ಬಹುದೊಡ್ಡ ಮನುಷ್ಯನಿರುವನೆಂದು ಹೊಗಳಹತ್ತಿದರು. ಜಾಲ ಗಾರನು ನೀರಿನ ತಳಕ್ಕೆ ಬಲೆಯನ್ನು ಹಾಕಿ ಮೇಲೆ ಆಹಾರವನ್ನು ಚೆಲ್ಲಿ ಮೀನುಗಳನ್ನು ಮರುಳು ಮಾಡಿ ಹೊತ್ತು ಸಾಧಿಸಿ ಆ ಮೀನುಗಳನ್ನೆಲ್ಲ ತನ್ನ ಬಲೆಯಲ್ಲಿ ಹಿಡಿದೆಳೆದುಕೊಳ್ಳುವಂತೆ ಒಡಕಣ್ಣನ ತಂತ್ರವಿತ್ತು. ಇದು ಭೋಜನಕ್ಕೂ ಚಟಕ್ಕೂ ಮರುಳಾದ ಜನರಿಗೆ ಆಗ ಹೊಳೆಯಲಿಲ್ಲ.

---

## ೧೫

### ಕಲಿಯುಗದ ನ್ಯಾಯದೇವತೆ........

ವೆಂಕಟರಾಯರು ಹೂಡಿದ ವ್ಯಾಜ್ಯವು ನ್ಯಾಯಸ್ಥಾನದಲ್ಲಿ ವಿಚಾರಕ್ಕೆ ಹೊರಟಿತು. ಆಗ ಒಡಕಣ್ಣನು ಚಂದ್ರಾವತಿಬಾಯಿಯವರಿಂದ ಆ ಮೃತ್ಯು ಪತ್ರವು ತಮ್ಮ ಗಂಡನು ಬರೆದುಕೊಟ್ಟಿಲ್ಲವೆಂದೂ ಅದು ತಮ್ಮ ಗಂಡನು ಸತ್ತಬಳಿಕ ಮಾಡಿದ 'ಖೊಟ್ಟಿ' ಕಾಗದವಿರುತ್ತದೆಂದೂ, ಮತ್ತು ತಮ್ಮ ಗಂಡನು ಸಾಯುವಾಗ ಆಜ್ಞೆಕೊಟ್ಟ ಪ್ರಕಾರ ಶ್ರೀವಲ್ಲಭನೆಂಬವನನ್ನು ದತ್ತಕ ಮಾಡಿಕೊಂಡಿರುವೆನೆಂದೂ, ಆ ದತ್ತಕಪುತ್ರನನ್ನೇ ಪ್ರತಿಪಕ್ಷಿಯನ್ನು ಮಾಡಿ ಆ ವ್ಯಾಜ್ಯದ ನಿರ್ಣಯವನ್ನು ಮಾಡಬೇಕೆಂದೂ ವಕೀಲರ ಮುಖಾಂತರ ಕೋರ್ಟಿಗೆ ಪ್ರತ್ಯುತ್ತರವನ್ನು ಕೊಡಿಸಿದನು. ಬಳಿಕ ವೆಂಕಟರಾಯರು ಒಡಕಣ್ಣನನ್ನು ಪ್ರತಿಪಕ್ಷಿಯನ್ನು ಮಾಡಿ, ಶ್ರೀಪತಿರಾಯರು ಆರು ತಿಂಗಳ ವರೆಗೆ ಬೇನೆ ಬಿದ್ದಿದ್ದು ಒಡಕಣ್ಣನು ಅವರ ಮನೆಯಲ್ಲಿಯೇ ಇದ್ದುದರಿಂದ ದತ್ತಕ ಮಾಡಿಕೊಳ್ಳುವ ಇಚ್ಛೆಯು ಅವರಿಗಿದ್ದರೆ, ಅವರೇ ಮಾಡಿಕೊಳ್ಳುತ್ತಿ

ದ್ದರೆಂದೂ, ಅವರು ಸಾಯುವಾಗ ತಮ್ಮ ಹೆಂಡತಿಗೆ ದತ್ತಕ ಮಾಡಿಕೊಳ್ಳುವ ಅಧಿಕಾರವನ್ನು ಕೊಟ್ಟಿಲ್ಲವಾದ್ದರಿಂದ ಆ ದತ್ತಕವು ಅಶಾಸ್ತ್ರವಿರುತ್ತದೆಂದೂ ಕೋರ್ಟಿಗೆ ಪುನಃ ತಿಳಿಸಿದರು. ಆಗ ಶ್ರೀಪತಿರಾಯರು ಬರೆದುಕೊಟ್ಟ ಮೃತ್ಯುಲೇಖನವು ಸತ್ಯವೋ, ತಮ್ಮ ಹೆಂಡತಿಗೆ ದತ್ತಕ ಮಾಡಿಕೊಳ್ಳಲಿಕ್ಕೆ ಅಧಿಕಾರ ಕೊಟ್ಟದ್ದು ಸತ್ಯವೋ? ಎಂಬುದು ನಿರ್ಣಯಕ್ಕೆ ಹತ್ತಿತು.

ಒಡಕಣ್ಣನ ವಕೀಲರು 'ಈ ಮೃತ್ಯುಲೇಖನವು ಖೊಟ್ಟಿಯೆಂದು ಸಿದ್ಧಮಾಡಿಕೊಡುವದು ಅಸಾಧ್ಯವಿದೆ. ಕಾರಣ ನೀನು ಪ್ರಯತ್ನಪಟ್ಟು ಮೃತ್ಯುಲೇಖ ಬರೆದವರನ್ನಾಗಲಿ ಸಾಕ್ಷಿದಾರರನ್ನಾಗಲಿ ವೆಂಕಟರಾಯರ ವಿರುದ್ಧ ಸಾಕ್ಷಿ ಹೇಳುವಂತೆ ಮಾಡಬೇಕು' ಎಂದು ಒಡಕಣ್ಣನಿಗೆ ತಿಳಿಸಿದರು. ಆಗ ಒಡಕಣ್ಣನು ಆ ಮೃತ್ಯುಪತ್ರ ಬರೆದವರನ್ನು ಅಥವಾ ಸಾಕ್ಷಿದಾರರನ್ನು ಒಡಿಸಿಯೇ ತೀರುವೆನೆಂದು ವಚನ ಕೊಟ್ಟನು. ಬಳಿಕ ಒಂದು ದಿನ ಒಡಕಣ್ಣನು ಅಣ್ಣಾದೀಕ್ಷಿತರ ಮನೆಗೆ ಹೋಗಿ, 'ದೀಕ್ಷಿತರೆ! ನಿಮ್ಮ ಜೀವನ್ಮಿತ್ರರ ಮನೆತನ ನಿಲ್ಲಿಸಬೇಕೆಂಬ ಇಚ್ಛೆಯಿದ್ದರೆ, ನನ್ನನ್ನು ಕಾಪಾಡಿರಿ' ಎಂದು ಸಾಷ್ಟಾಂಗವೆರಗಿ ದೈನ್ಯದಿಂದ ಬೇಡಿಕೊಂಡನು. ಆ ಮೇಲೆ ದೇಸಾಯರ ಉತ್ತರಕ್ರಿಯೆಯ ಕಾಲಕ್ಕೆ ಭೂದಾನ ಸಂಕಲ್ಪವನ್ನು ಮಾಡಿದ್ದು, ಆ ಊರಲ್ಲಿಯ ಸರಕಾರಿ ಜಮೀನನ್ನು ಅವರಿಗೆ ಕೊಡುವದಾಗಿ ಹೇಳಿದನು. ಅಣ್ಣಾದೀಕ್ಷಿತರು ಸಿಟ್ಟಿಗೆದ್ದು 'ಸ್ವಾರ್ಥಕ್ಕಾಗಿ ಸ್ವಪಕ್ಷದ ಘಾತಮಾಡುವ ಸ್ವೈರವೃತ್ತಿಯವನು ನಾನಲ್ಲ' ಎಂದು ಸ್ಪಷ್ಟವಾಗಿ ಹೇಳಿ ಮನೆಯಿಂದ ಒಡಕಣ್ಣನನ್ನು ಹೊರಹೊರಡಿಸಿದರು. ಒಡಕಣ್ಣನಿಗೆ 'ಪ್ರಥಮಗ್ರಾಸೇ ಮಕ್ಷಿಕಾಪಾತ' ವಾದಂತಾಗಿ ಅವನಲ್ಲಿ ನಿರಾಶೆಯುಂಟಾಯಿತು. ಆ ಮೇಲೆ ನಾಯಕರ ಮನೆಗೆ ಹೋಗಿ ಅವರೆದುರು ಐದುನೂರು ರೂಪಾಯಿಗಳನ್ನು ಸುರುವಿ ತನ್ನನ್ನು ಸ್ವಪುತ್ರನಂತೆ ಕಾಯ್ದುಕೊಳ್ಳಬೇಕೆಂದು ಬೇಡಿಕೊಂಡನು. ನಾಯಕರು ಅವನ ಇಂಗಿತವನ್ನರಿತು 'ದ್ರವ್ಯದ ದುರಾಸೆಗೆ ಮರುಳಾಗಿ ದುಷ್ಕಾರ್ಯಕ್ಕೆ ಪ್ರವೃತ್ತನಾಗುವಂಥ ಸಜೀವ ಶವನಲ್ಲ ನಾನು. ಸತ್ಯಕ್ಕಾಗಿ ಸಾಯುವೆನು. ನಿನ್ನ ದುಡ್ಡನ್ನು ಕಟ್ಟಿಕೊಂಡು ಹೋಗು' ಎಂದು ಬೆದರಿಸಿ ಕಳಿಸಿದರು. ನಾಯಕರ ನಿರ್ಧಾರವನ್ನು ಕಂಡು ಒಡಕಣ್ಣನು ಬೆದರಿದನು. ನಿಸ್ಪೃಹರಾದ ಜನರಲ್ಲಿ ತನ್ನ ತಂತ್ರಗಳು ನಡೆಯವೆಂದು ಮನವರಿಕೆ ಮಾಡಿ

ಕೊಂಡನು. ಬಳಿಕ ಒಡಕಣ್ಣನು ಖಿನ್ನನಾಗಿ ಮನೆಗೆ ಬಂದು ಬೆಳತನಕ ಆಲೋಚಿಸಿ ತಿಪ್ಪಾಶಾಸ್ತ್ರಿಗಳನ್ನು ತನ್ನ ಕಡೆಗೆ ಒಲಿಸಿಕೊಳ್ಳುವ ಹೊಸ ಹಂಚಿಕೆಯನ್ನು ಹುಡುಕಿ ತೆಗೆದನು. ಮರುದಿವಸ ತಿಪ್ಪಾಶಾಸ್ತ್ರಿಗಳು ಮನೆಯಲ್ಲಿಲ್ಲದ ಹೊತ್ತು ಸಾಧಿಸಿ ಒಡಕಣ್ಣನು ಅವರ ಮನೆಗೆ ಹೋಗಿ, ಅವರ ಹೆಂಡತಿಯ ಪಾದಗಳನ್ನು ಹಿಡಿದು, ತನ್ನಂತೆ ಅವರ ಗಂಡನು ಸಾಕ್ಷಿ ಹೇಳುವಂತೆ ಮನವೊಲಿಸಿದರೆ, ತನ್ನ ಮೇಲೆ ದೊಡ್ಡ ಉಪಕಾರವಾಗುವ ದೆಂದೂ, ತಾನು ಅವರಿಗೆ ಚಂದ್ರಾವತಿಬಾಯಿಯವರ ಮುತ್ತಿನ ಬುಗುಡೆಯ ಜೋಡನ್ನೂ, ಸತ್ತ್ರನ್ನೂ ಉಡುಗರೆಯಾಗಿ ಕೊಡುವೆನೆಂದೂ ಹೇಳಿದನು. ಈ ವಿಷಯದಲ್ಲಿ ತಾವು ಗಂಡನರ ಮನವೊಲಿಸುವದಸಾಧ್ಯವೆಂದು ಹೇಳಿ ಅವರು ಒಡಕಣ್ಣನಿಗೆ ಮನೆಬಿಟ್ಟು ತೆರಳಲಿಕ್ಕೆ ಹೇಳಿದರು. ಕಾಮುಣಿಯಾದ ಮನುಷ್ಯನಿಗೆ ಜಗತ್ತೇ ಹಚ್ಚಗೆ ಕಾಣುವದು. ಅದರಂತೆ ಒಡಕಣ್ಣನು ಈ ಮೂವರಲ್ಲಿ ಯಾರಾದರೊಬ್ಬರು ತನ್ನ ಒಲೆಯಲ್ಲಿ ಸಿಗಬಹುದೆಂದು ತಿಳಿದಿದ್ದನು. ಆದರೆ ಅವನ ಕಾರ್ಯವು ಸಾಧಿಸಲಿಲ್ಲ. ಸಾಮೋಪಾಯದಿಂದ ಕಾರ್ಯವು ಸಾಧಿಸುವದಿಲ್ಲೆಂದು ಅವನು ಮನಗಂಡನು. ಕಲ್ಲಂಭಟ್ಟರಂಥ ಪುಕ್ಕರನ್ನು ಯಾವುದೊಂದು ಭೀತಿಯನ್ನು ತೋರಿಸಿ, ಒಲಿಸಿಕೊಳ್ಳಬಹುದೆಂದು ವಿಚಾ ರಿಸಿ ಅವರ ಮನೆಗೆ ಹೋದನು. ಅವರ ದಾಯಾದಿಯು ಕೋರ್ಟಿನಲ್ಲಿ ವ್ಯಾಜ್ಯ ಹೂಡುವವನಿರುವದರಿಂದ, ಅವರು ತನ್ನಂತೆ ಸಾಕ್ಷಿ ಹೇಳದಿದ್ದರೆ, ದಾಯಾ ದಿಯ ಬೆನ್ನು ಕಟ್ಟಿ, ಅವರನ್ನು ಮಣ್ಣುಗೂಡಿಸುವೆನೆಂದು ಹೇಳಿದನು. ಕಲ್ಲಂ ಭಟ್ಟರು ಒಡಕಣ್ಣನ ಮಾತನ್ನು ಕೇಳಿ ಕಿಡಿಕಿಡಿಯಾದರು. ಆಗ ಅವರು 'ಸ್ವಾಮಿದ್ರೋಹಿ', 'ಗುರುದ್ರೋಹಿ' ಎಂದು ಶಾಪಿಸಿ ಅವನನ್ನು ಹೊರಗೆ ಹಾಕಿದರು.

ಶ್ರೀಪತಿರಾಯರ ಮಿತ್ರರಲ್ಲಿ ಒಬ್ಬರಾದರೂ ತನ್ನ ಬಲೆಯಲ್ಲಿ ಬೀಳದ್ದನ್ನು ನೋಡಿ ಒಡಕಣ್ಣನಿಗೆ ಬಹಳ ವ್ಯಸನವಾಯಿತು. ಸ್ವಾರ್ಥತ್ಯಾಗಿಗಳೂ, ಸತ್ಯಾಗ್ರಹಿಗಳೂ, ಕಷ್ಟಸಹಿಷ್ಣುಗಳೂ, ಆದ ಅವರ ಮೇಲೆ ಕಲಿಯ ಕಾರ ಸ್ಥಾನಗಳು ನಡೆಯುವೆಂದು ಒಡಕಣ್ಣನು ಅರಿತನು. ಆದರೂ ಒಡಕಣ್ಣನು ಧೈರ್ಯಬಿಡದೆ, ತನ್ನ ಬಾಲ್ಯಮಿತ್ರರಾದ ಶೆಟ್ಟರ ಬಸೆಟ್ಟೆಪ್ಪ ಮೊದಲಾದವರಿಗೆ ದುಡ್ಡನ್ನು ಕೊಟ್ಟು ತನ್ನಂತೆ ಸಾಕ್ಷಿಯನ್ನು ಹೇಳಲಿಕ್ಕೆ ಗಟ್ಟಿಮಾಡಿದನು.

ಊರೊಳಗಿನ ಕಂಗಾಲರಿಗೆಲ್ಲ ಸಾಲ ಕೊಟ್ಟು ತಾನು ಹೇಳಿದಂತೆ ಕೇಳುವಂತೆ ಮಾಡಿದನು. ಮಗಳು ದೊಡ್ಡ ಮನೆತನಕ್ಕೆ ಬೀಳುವಳೆಂಬ ಆಸೆಗೆ ಸೋತು ಲಕ್ಷ್ಮಣ ಜೋಯಿಸರು ಖೊಟ್ಟಿ ಸಾಕ್ಷಿಯನ್ನು ಹೇಳಲಿಕ್ಕೆ ಸಿದ್ಧರಾದರು. ಹೀಗಾಗಿ ಬರಬರುತ್ತ ಒಡಕಣ್ಣನ ಕಡೆಗೆ ಜನರು ಹೆಚ್ಚಾಗಿ ಕೂಡಹತ್ತಿದರು.

ಶ್ರೀಪತಿರಾಯರ ಮೃತ್ಯುಪತ್ರ ಹಾಗು ಒಡಕಣ್ಣನ ದತ್ತಕ ಪತ್ರಗಳ ವ್ಯಾಜ್ಯವು ನ್ಯಾಯಾಸ್ಥಾನದಲ್ಲಿ ಎರಡು ವರ್ಷಗಳವರೆಗೆ ನಡೆಯಿತು. ಎರಡೂ ಪಂಗಡದವರು ಸಾಕ್ಷಿಯನ್ನು ಹೇಳಲಿಕ್ಕೆ ಹುರಿದುಂಬಿ ಕೋರ್ಟಿಗೆ ಎಡತಾಕ ಹತ್ತಿದರು. ಗೋವಿಂದನಾಯಕರೂ, ಅಣ್ಣಾದೀಕ್ಷಿತರೂ, ತಿಪ್ಪಾಶಾಸ್ತ್ರಿಗಳೂ ಮೊದಲಾದ ಶ್ರೀಪತಿರಾಯರ ಮಿತ್ರರೂ ದೇಶಪಾಂಡೆ ಗಿರಿಧರರಾಯರು ಕರಣಿಕ ಕೃಷ್ಣರಾಯರು ಮೊದಲಾದ ಬೊಮ್ಮಗೇರಿಯ ಪ್ರಮುಖ ಜನರೂ 'ಶ್ರೀಪತಿರಾಯರು ಸ್ವಬುದ್ಧಿಯಿಂದಲೇ ಮೃತ್ಯುಲೇಖವನ್ನು ಬರೆದುಕೊಟ್ಟರೆಂದೂ, ದತ್ತಕ ಮಾಡಿಕೊಳ್ಳುವ ಇಚ್ಛೆಯು ಅವರಿಗಿದ್ದಿಲ್ಲವೆಂದೂ ಪ್ರತಿಜ್ಞೆ ಮಾಡಿ ಸಾಕ್ಷಿ ಹೇಳಿದರು. ಇವರೆಲ್ಲರೂ ನಿಸ್ಪೃಹತೆಯಿಂದ ಸತ್ಯದ ಜೋಡನ್ನು ಹಿಡಿದರು. ಆದರೆ ಒಡಕಣ್ಣನ ಪಂಗಡದವರು ಚಕ್ಕಂದದಿಂದ ಚಕ್ಕಡಿಯಲ್ಲಿ ಕುಳಿತು ಜಾತ್ರೆಗೆ ಹೊರಟಂತೆ ವೈಭವದಿಂದ ಬಂದು ಮೃಷ್ಟಾನ್ನವನ್ನು ಭುಂಜಿಸಿ ತಿಂಡಿ ತಿನಸುಗಳನ್ನು ಯಥೇಚ್ಛವಾಗಿ ತಿಂದು, ತಮ್ಮ ಮನುಷ್ಯತ್ವವನ್ನು ಮರೆತು ಕೋರ್ಟಿನಲ್ಲಿ ಖೊಟ್ಟಿ ಸಾಕ್ಷಿಗಳನ್ನು ಹೇಳಿದರು. ಶ್ರೀಪತಿರಾಯರು ಸಾಯುವದಕ್ಕಿಂತ ಮೊದಲು ಮೂರು ದಿವಸಗಳ ಹಿಂದೆ ತಮ್ಮೆಲ್ಲರನ್ನು ಕರೆಕಳುಹಿ ಒಡಕಣ್ಣನನ್ನು ದತ್ತಕ ಮಾಡಿಕೊಳ್ಳಲಿಕ್ಕೆ ಚಂದ್ರಾವತಿಬಾಯಿಯವರಿಗೆ ಅಧಿಕಾರ ಕೊಟ್ಟರೆಂದೂ ಅವರು ಮೃತ್ಯುಲೇಖ ಬರೆದುಕೊಟ್ಟದ್ದನ್ನು ಆಗ ತಮ್ಮೆದುರಿಗೆ ತೆಗೆಯಲಿಲ್ಲವೆಂದೂ ಸಾಕ್ಷಿಗಳನ್ನು ನುಡಿದರು. ಒಟ್ಟು ಒಡಕಣ್ಣನ ಕಡೆಗೆ ಇಪ್ಪತ್ತುನಾಲ್ಕು ಸಾಕ್ಷಿಗಳೂ, ವೆಂಕಟರಾಯರ ಕಡೆಗೆ ಹನ್ನೆರಡು ಸಾಕ್ಷಿಗಳೂ ಆದವು. ಬಸನಗೌಡರಂಥ ಪುಕ್ಕ ಜನರು ಎರಡೂ ಪಂಗಡಗಳಲ್ಲಿ ಸೇರದೆ ಗೆದ್ದ ಎತ್ತಿನ ಬಾಲ ಹಿಡಿಯಬೇಕೆಂದು ಮಧ್ಯಸ್ಥರಾಗಿ ಕುಳಿತರು. ಎರಡೂ ಕಡೆಯ ವಕೀಲರೂ ತಮ್ಮ ಪಕ್ಷವನ್ನು ಚೆನ್ನಾಗಿ ಸಾಧಿಸಿದರು. ಮುಂದೆ ನ್ಯಾಯಾಧೀಶರು ಶ್ರೀಪತಿರಾಯರು ಮೃತ್ಯುಲೇಖವನ್ನು ಬರೆದುಕೊಟ್ಟ ಮೂರು ದಿವಸಗಳ

ಮೇಲೆ ಅವರ ಮನಸ್ಸಿನಲ್ಲಿ ದತ್ತಕ ಮಾಡಿಕೊಳ್ಳುವ ಇಚ್ಛೆಯುಂಟಾಗಿದ್ದರೆ ಅವರು ಮೃತ್ಯುಲೇಖವನ್ನು ಬರೆದಿಟ್ಟಂತೆ ಅಧಿಕಾರಪತ್ರವನ್ನೂ ಬರೆದಿಡ ಬಹುದಾಗಿತ್ತೆಂಬ ಸಂಶಯ ತಕ್ಕೊಂಡರು. ಒಟ್ಟಿನ ಮೇಲೆ ನ್ಯಾಯಾಸ್ಥಾನ ದಲ್ಲಿ ನಡೆಯತಕ್ಕ ವಿಧಾನಗಳೆಲ್ಲ ನಡೆದು ಇನ್ನು ನ್ಯಾಯಾಧೀಶರು ತಮ್ಮ ನಿರ್ಣಯ ಹೇಳುವದು ಮಾತ್ರ ಉಳಿದಿತ್ತು.

ಒಡಕಣ್ಣನ ವಕೀಲರು ಸಾಯಂಕಾಲದ ಭೋಜನವನ್ನು ತೀರಿಸಿ ಕೊಂಡು ದಿವಾಣಖಾನೆಗೆ ಬಂದರು. ಅಷ್ಟರಲ್ಲಿ ಒಡಕಣ್ಣನೂ, ಲಕ್ಷ್ಮಣ ಜೋಯಿಸರೂ, ಬಸೆಟ್ಟೆಪ್ಪನೂ ಅಲ್ಲಿಗೆ ಬಂದಿದ್ದರು. ವಕೀಲರು ಒಡಕಣ್ಣ ನನ್ನು ನೋಡಿ 'ತಮ್ಮಾ! ನಿನ್ನ ದತ್ತಕ ಸಿದ್ಧಮಾಡಲಿಕ್ಕೆ ನಾನು ಮಿತಿ ಮೀರಿದ ಪ್ರಯತ್ನ ಮಾಡಿರುವೆನು. ನಮಗೆ ನೀನು ಕೊಡತಕ್ಕ ಐವತ್ತು ರೂಪಾಯಿಗಳನ್ನು ಕೊಡು. ನಿನ್ನ ವ್ಯಾಜ್ಯವು ನಿನ್ನಂತೆ ಆದರೆ ಒಂದು ಸಾವಿರ ರೂಪಾಯಿಗಳನ್ನು ಕೊಡುವೆನೆಂದು ಬರೆದುಕೊಡು' ಎಂದು ಹೇಳಿ ವಕೀಲರು ತಮ್ಮ ಕಾರ್ಯವನ್ನು ಸಾಧಿಸಿಕೊಂಡರು. ಆಮೇಲೆ ಮೆಲ್ಲಗೆ ವ್ಯಾಜ್ಯದ ನಿರ್ಣಯದ ಬಗ್ಗೆ ಮಾತಾಡಿದರು. 'ದೇಸಾಯರು ತಮ್ಮ ಸಹಿ ಯನ್ನು ಹಾಕಿ ಬರೆದುಕೊಟ್ಟ ಮೃತ್ಯುಪತ್ರವು ಬರಿ ಮಾತಿನಿಂದ ಸಿದ್ಧಪಡಿಸಿದ ಅಧಿಕಾರಕ್ಕಿಂತ ಬಲಿಷ್ಠವಾಗುವದು. ಆದ್ದರಿಂದ ನಿನಗೆ ಜಯ ಸಿಗುವದೆಂದು ಎದೆತಟ್ಟಿ ಹೇಳುವಂತಿಲ್ಲ'ವೆಂದು ತಮ್ಮ ಅನುಮಾನವನ್ನು ವ್ಯಕ್ತಮಾಡಿದರು. ಒಡಕಣ್ಣನು ಏನಾದರೂ ಕಾರಸ್ಥಾನವನ್ನು ಮಾಡಿದರೆ ಮಾತ್ರ ಅವನ ಕಾರ್ಯಸಿದ್ಧಿಯಾಗಬಹುದೆಂದು ಅವನಿಗೊಂದು ಯುಕ್ತಿಯನ್ನು ಹೇಳಿದರು; ಕನಿಷ್ಠಪಕ್ಷಕ್ಕೆ ಒಂದು ಸಾವಿರ ರೂಪಾಯಿಗಳನ್ನಾದರೂ ದೊರಕಿಸಿದರೆ ಅವನ ಕಾರ್ಯವು ಅವನಂತೆ ಆಗುವದೆಂದು ತಿಳಿಸಿದರು. ಮರುದಿವಸ ಒಡಕಣ್ಣನು ಬೊಮ್ಮಗೇರಿಗೆ ಬಂದು ಆದ ಸಂಗತಿಗಳನ್ನೆಲ್ಲ ಚಂದ್ರಾವತಿ ಬಾಯಿಯವರಿಗೆ ಹೇಳಿ, ತನ್ನ ಕೈಯ್ಯಲ್ಲಿಯ ಎಲ್ಲ ಹಣವು ತೀರಿದ ಕಾಲದಲ್ಲಿ ಒಂದು ಸಾವಿರ ರೂಪಾಯಿಗಳನ್ನು ದೊರಕಿಸುವದು ಕಠಿಣವೆಂದನು. ಆಗ ಚಂದ್ರಾವತಿಬಾಯಿಯವರು ತಮ್ಮ ಮೈಮೇಲಿನ ಆಭರಣಗಳನ್ನು ಮಾರಿ ಹಣ ಕೂಡಿಸಲಿಕ್ಕೆ ಸಿದ್ಧರಾದರು. ಮರುದಿವಸ, ಅವರೂ ಒಡಕಣ್ಣನೂ ಕೂಡಿ ತಮ್ಮ ಇನಾಮ ಗ್ರಾಮವಾದ ಹನುಮಾಪುರಕ್ಕೆ ಹೋಗಬೇಕಾ

ಗಿದೆಯೆಂದು ಹೇಳಿ. ನೆಟ್ಟಗೆ ತಮ್ಮ ವಕೀಲರ ಹತ್ತಿರ ಬಂದು ತಮ್ಮ ಹಣದ ಜೋಡಣೆಯನ್ನು ಮಾಡಿದರು.

ಮುಂಜಾನೆಯ ಆರು ಗಂಟೆಯಾಗಿರಬಹುದು. ಆಕಾಶದ ತುಂಬೆಲ್ಲ ಹಿಂಜಿದ ಅರಳೆಯನ್ನು ಹರಡಿದಂತೆ ಮೋಡಗಳು ಪಸರಿಸಿದ್ದವು. ಆಗ ಕೋರ್ಟಿನ ನ್ಯಾಯಾಧೀಶರಿರುವ ಊರ ಪೂರ್ವಕ್ಕಿರುವ ಗುಡ್ಡದ ತುದಿಯಲ್ಲಿರುವ ಮಾರುತಿಯ ಗುಡಿಯ ಹಿಂದೆ ಸೂರ್ಯನು ಅಡಗಿ ಆಗಾಗ ಇಣಿಕಿ ನೋಡುವಂತೆ ತೋರುತ್ತಿದ್ದನು. ಆಗ ಗುಡ್ಡದ ಕೆಳಗೆ ತೀವ್ರವಾಗಿ ಮೇಲೆ ಏರುವದೊಂದು ಸಣ್ಣ ಚಿಕ್ಕೆಯು ಕಾಣುತ್ತಿತ್ತು. ಮೇಲೆ ಮೇಲೆ ಬಂದಂತೆ ಸಣ್ಣ ಚಿಕ್ಕೆಯು ಮನುಷ್ಯಾಕೃತಿಯಲ್ಲಿ ಪರಿಣಮಿಸಿತು. ಗುಡಿಯಲ್ಲಿ ಜನಸಂದಣಿ ಹೆಚ್ಚಾಗಬಹುದೆಂಬ ಭೀತಿಯಿಂದ ಆ ವ್ಯಕ್ತಿಯು ಗುಡಿಗೆ ಹೋಗುವ ಎಲ್ಲ ಜನರನ್ನು ಹಿಂದೆ ಹಾಕಿ ತಡವರಿಸಿ ಮುಂದೆ ಹೋಗುತ್ತಿದ್ದಿತು. ಗುಡಿಯಲ್ಲಿ ದೊಡ್ಡ ನಂದಾ ದೀಪಗಳನ್ನು ಹಚ್ಚಿದ್ದರು. ಅಲ್ಲಿರುವ ಮಾರುತಿಯ ಮೂರ್ತಿಯು ಸಣ್ಣದಾಗಿ ಬಂಗಾರದ ತಗಡಿನ ಮಡಾಸದಲ್ಲಿ ಹುಗಿದಂತಿತ್ತು. ಸನಿಯದಲ್ಲಿಯೇ ಒಬ್ಬ ಆಚಾರಿಯು ದೊಡ್ಡದೊಂದು ತಾಟನ್ನು ಹಿಡಿದುಕೊಂಡು ನಿಂತಿದ್ದನು. ಬಂದ ಜನರೆಲ್ಲ ಆ ತಬಕದಲ್ಲಿ ತಮಗೆ ಶಕ್ಯವಿದ್ದಷ್ಟು ಧನವನ್ನು ಸುರುವಿ ನಮಸ್ಕಾರಮಾಡಿ ಹೋಗುವರು. ದುಡ್ಡು ಬಹಳಿದ್ದರೆ ಹನುಮಪ್ಪನು ಮಾತಾಡುವದುಂಟು; ಅಂದರೆ ಪೂಜಾರಿಯು ಅವರ ಹೆಸರು ಕೇಳುವದುಂಟು. ಗುಡಿಯಲ್ಲಿ ಭಕ್ತರ ಸಂದಣಿಯು ಹೆಚ್ಚಾಗುವದರಲ್ಲಿ ಆಗಲೇ ಓಡಿಬರುವ ವ್ಯಕ್ತಿಯು ಗುಡಿಯ ಹತ್ತಿರ ಬಂದಿತು. ಅಲ್ಲಿಯೇ ಸನಿಯದಲ್ಲಿ ಧರ್ಮಿಷ್ಠರಾದ ನ್ಯಾಯಾಧೀಶರು ಗುಡಿಯ ಪ್ರದಕ್ಷಿಣೆ ಹಾಕುತ್ತಿದ್ದರು. ವ್ಯಕ್ತಿಯು ಗುಡಿಯಲ್ಲಿ ಹೋಗಲಿಕ್ಕೂ ನ್ಯಾಯಾಧೀಶರು ಪ್ರದಕ್ಷಣೆ ಮುಗಿಸಿ ಗುಡಿಯನ್ನು ಸೇರಲಿಕ್ಕೂ ಗಂಟುಬಿದ್ದಿತು. ವ್ಯಕ್ತಿಯು ಗಡಬಿಡಿಯಲ್ಲಿ ದೇವರಿಗೆ ನಮಸ್ಕಾರ ಮಾಡುವದನ್ನೆ ಮರೆತನು. ಕಿಸೆಯಲ್ಲಿಯ ನೂರರ ಹತ್ತು ನೋಟುಗಳನ್ನು ಅರ್ಚಕನು ಹಿಡಿದ ತಾಟಿನಲ್ಲಿಟ್ಟು 'ಹಣುಮಪ್ಪನು ನನ್ನ ಕಾರ್ಯವನ್ನು ಮಾಡಿದರೆ ಇನ್ನೂ ಹೆಚ್ಚಾಗಿ ಅವನ ಸೇವೆಯನ್ನು ಮಾಡುವೆನು.' ಎಂದು ಒಡಕಣ್ಣನು ನುಡಿದನು. ನ್ಯಾಯಾಧಿಶರು ನೋಟುಗಳನ್ನು ನೋಡಿ 'ಭಕ್ತಿಯೊಂದಿರಲಿ; ಅಂದರೆ ಮಾರುತಿಯು ನಿನ್ನ ಕಾರ್ಯ

ವನ್ನು ಸಿದ್ಧಿಮಾಡುವನು.' ಎಂದು ಅಭಯವಿತ್ತರು. ಆ ಮೇಲೆ ತಮ್ಮ ಕೈಯಲ್ಲಿಯ ಬಡಿಗೆಯನ್ನು ಅಲ್ಲಿಯೇ ಮೂಲೆಯಲ್ಲಿಟ್ಟು ದೇವರೆದುರು ಸಾಷ್ಟಾಂಗವೆರಗಿದರು. ಅವರನ್ನು ಸರಿಸಿ ಒಡಕಣ್ಣನೂ ಉದ್ದಕ್ಕೆ ಸಾಷ್ಟಾಂಗ ವೆರಗಿದನು. ನ್ಯಾಯಾಧೀಶರ ಲಕ್ಷ್ಯವು ತಾಟಿನ ಕಡೆಗೆ; ಒಡಕಣ್ಣನದು ಅವರ ಕಡೆಗೆ; ಅರ್ಚಕನದು ಇಬ್ಬರ ಕಡೆಗೆ; ಮಾರುತಿಯದು ಈ ಮಾನವರನ್ನು ನೋಡಲಾರದೆ ಮೂಲೆಯ ಕಡೆಗೆ; ಹೀಗೆ ಆ ದೃಶ್ಯವು ವರ್ಣನೀಯವಾಗಿತ್ತು. ಪೂಜಾರಿಯು ಒಡಕಣ್ಣನ ಹೆಸರನ್ನು ಕೇಳಲಾಗಿ 'ಶ್ರೀವಲ್ಲಭ, ಶ್ರೀಪತಿರಾವ, ದೇಸಾಯಿ' ಎಂದು ಉತ್ತರ ಬಂದಿತು. ನ್ಯಾಯಾಧೀಶರು ಚಾಳಿಸಿಯ ಹಿಂದಿನಿಂದ, ನಗೆಗಣ್ಣನೊಟದಿಂದ, ಒಡಕಣ್ಣನನ್ನೊಮ್ಮೆ ನೋಡಿದರು. ಒಡಕಣ್ಣನು ತನ್ನ ಕೆಲಸವು ಗೆದ್ದಿತೆಂದು ಸಂತೋಷಪಟ್ಟು ಲಗುಬಗೆಯಿಂದ ಮನೆಗೆ ಬಂದು, ಚಂದ್ರಾವತಿಬಾಯಿಯವರೊಡನೆ ಊರಿಗೆ ಬಂದನು.

ವೆಂಕಟರಾಯರೂ ಅವರ ಪಕ್ಷ ಹಿಡಿದು ಸತ್ಯವನ್ನು ಸ್ಮರಿಸಿ ಬಡಿದಾಡಿದ ಅಣ್ಣಾದೀಕ್ಷಿತರೇ ಮೊದಲಾದವರೂ, ಆ ಮೃತ್ಯುಪತ್ರಕ್ಕೆ ಪ್ರತಿಪಕ್ಷಿಗಳ ವಕೀಲರೇ ಒಪ್ಪಿದ್ದರಿಂದಲೂ, ನ್ಯಾಯಾಧೀಶರ ಒಲವು ತಮ್ಮ ಕಡೆಗೇ ಇದ್ದುದರಿಂದಲೂ, ತಮ್ಮಂತೆಯೇ ನ್ಯಾಯನಿರ್ಣಯವಾಗುವದೆಂದು ನಿರ್ಧರಿಸಿದರು. ಅವರಿಗೆ ಒಡಕಣ್ಣನ ಒಳತಂತ್ರಗಳು ಹೊಳೆಯಲಿಲ್ಲ. ನ್ಯಾಯಾಸನದ ಅನ್ಯಾಯಗಳು ತಿಳಿಯಲಿಲ್ಲ. ಹೀಗಿರುವಾಗ ಒಂದು ದಿನ ಒಡಕಣ್ಣನ ವಕೀಲರಿಂದ ಅವನ ವ್ಯಾಜ್ಯದಲ್ಲಿ ಯಶಸ್ಸು ದೊರತ ಬಗ್ಗೆ ತಾರು ಬಂದಿತು. ಆ ತಾರನ್ನು ನೋಡಿ ಒಡಕಣ್ಣನು ಆನಂದಭರಿತನಾಗಿ ಬೊಮ್ಮಗೇರಿಯ ಊರ ತುಂಬ ಸಕ್ಕರೆ ಹಂಚಿಸಿದನು. ಈ ವರ್ತಮಾನವು ದೀಕ್ಷಿತರಿಗೆ ತಿಳಿದೊಡನೆ ಅವರು ಖಿನ್ನರಾಗಿ ವೆಂಕಟರಾಯರ ಬಳಿಗೆ ಹೋಗಿ ತಮ್ಮ ಅಜ್ಜಂದಿರ ಬ್ರಹ್ಮಪುರಿ-ವರ್ಣನೆಯ ಹೊತ್ತಿಗೆಯನ್ನು ಬಿಚ್ಚಿ ತಮ್ಮ ದುಃಖವನ್ನು ವ್ಯಕ್ತಮಾಡುತ್ತ ವೆಂಕಟರಾಯರಿಗೆ ಸಮಾಧಾನ ಹೇಳಹತ್ತಿದರು. 'ನಮ್ಮ ಅಜ್ಜಂದಿರು ಬರೆದಂತೆ ಸತ್ಯಕ್ಕೆ ಸೋಲು, ಅಸತ್ಯಕ್ಕೆ ಗೆಲುವು; ಇದೆಲ್ಲ ಕಲಿಪ್ರಭಾವವು! ಈ ಕಲಿಯುಗದಲ್ಲಿ ನ್ಯಾಯದೇವತೆಯು ಕುರುಡೆಯಾಗಿ ಕುಳಿತಿರುವಳು. ಇನ್ನು ಮೇಲೆ ಈ ಊರಲ್ಲಿ ಕಲಿಯ ನರ್ತನವು ನಡೆಯಬೇಕಾಗಿದೆ

ಎಂದು ಅವರು ನಿಟ್ಟುಸಿರು ಬಿಟ್ಟರು. ಅಷ್ಟರಲ್ಲಿ ತಿಪ್ಪಾಶಾಸ್ತ್ರಿಗಳೂ ಅಲ್ಲಿಗೆ ಬಂದರು. ಅವರು ಚಿಂತಾಕ್ರಾಂತರಾದ ವೆಂಕಟರಾಯರನ್ನು ನೋಡಿ 'ಏನು ವೆಂಕಟರಾಯರs! ಅದಕ್ಯಾಕ ಇಷ್ಟು ಅಂಜತೀರಿ? ಇದು ಒಂದು ಕೋರ್ಟಿಗೇ ಮುಗೀತs? ಇನ್ನೂ ಎರಡು ಕೋರ್ಟ ಅವ.' ಎಂದು ಧೈರ್ಯಕೊಟ್ಟರು. ವೆಂಕಟರಾಯರು ಮಾತ್ರ ನಿರುಪಾಯರಾಗಿ ಎಷ್ಟೋ ಹೊತ್ತು ಸುಮ್ಮನಿದ್ದು ಕೊನೆಗೆ 'ಇನ್ನೆಲ್ಲಿಯ ಕೋರ್ಟು? ಕೈಯ್ಯಲ್ಲಿಯ ಹಣವೆಲ್ಲ ಹೋಗಿ ಭಿಕ್ಷಾ ಪಾತ್ರೆಗೆ ಬಂದಿದೆ.... ಭಿ-ಕ್ಷಾ-ಪಾ-ತ್ರೆ-ಗೆ....' ಎಂದು ಎದ್ದು ನಿಂತು ಏನೇನೋ ಅಸಂಬದ್ಧವಾಗಿ ಬಡಬಡಿಸಹತ್ತಿದರು.

---

## ೧೬

### ಒಡಕಣ್ಣನು ಚತುರ್ಭುಜನಾದ........

ಒಡಕಣ್ಣನು ಕುತಂತ್ರಗಳ ಪ್ರಭಾವದಿಂದಲೇ ದೇಸಗತಿಯನ್ನು ಸಂಪಾದಿಸಿ ತನ್ನ ಅಭಿಲಾಷೆಯನ್ನು ಪೂರ್ಣಮಾಡಿಕೊಂಡದ್ದರಿಂದ ಕುತಂತ್ರಗಳಲ್ಲಿ ಅವನ ಶ್ರದ್ಧೆಯು ಬೆಳೆಯಿತು. ಅವನು ತನ್ನ ಆಯುಷ್ಯವನ್ನೆಲ್ಲ ಕುತಂತ್ರಗಳಲ್ಲಿಯೇ ಕಳೆಯಬೇಕೆಂದು ನಿರ್ಧರಿಸಿದನು. ಮೊದಲಿಗೆ ಬೊಮ್ಮಗೇರಿಯಲ್ಲಿ ತನ್ನ ಪ್ರತಿಷ್ಠೆಯನ್ನು ಹೇಗೆ ಬೆಳಿಸಬೇಕೆಂಬ ಬಗ್ಗೆ ಹಂಚಿಕೆಗಳನ್ನು ಹಾಕಹತ್ತಿದನು. ಊರೊಳಗಿನ ಜನರೆಲ್ಲ ನಿರ್ಧನಿಕರಾಗಿ ತಾನೊಬ್ಬನೇ ಸ್ಥಿತಿವಂತನಾಗಿದ್ದರೆ ತನ್ನ ಇಚ್ಛೆಯು ಪೂರ್ಣವಾಗುವದೆಂದು ಅವನಿಗೆ ಎನಿಸಿತು. ಆಗ ಅವನಿಗೆ ಬಾಲ್ಯದಲ್ಲಿ ಕಲಿತ ಹಳೆಯ ತರಹದ ಪ್ರಾಥಮಿಕ ಪುಸ್ತಕದಲ್ಲಿದ್ದ

ತಂದೆ-ತಾಯ್ ಗಳಿಸಿರ್ದ ಧನವನು।
ನಂದನರು ತಮ್ಮೊಳಗೆ ಪಾಲಿಗೆ।
ತಂದು ಗುದ್ದಾಡುತ್ತಲರಮನೆಗಂಕೆಯನು ಮಾಡೇ॥
ಹಿಂದು ಮುಂದಕೆ ನೋಡಿದವರನು।
ಬಂಧಿಸಲ್ಲವ ತೆಗೆದುಕೊಂಬರು।
ಮುಂದೆ ಭಿಕ್ಷಾಪಾತ್ರೆಗಧಿಕಾರಿಗಳು ತಾವೆಂದು॥"

ಎಂಬ ಕವಿತೆಯೊಂದು ನೆನಪಿಗೆ ಬಂದಿತು. ಬಳಿಕ ಒಡಕಣ್ಣನು ಊರ ಜನರಲ್ಲಿ ಒಡಕನ್ನು ಹುಟ್ಟಿಸಿ, ತಂದೆ-ಮಕ್ಕಳ ನಡುವೆ ಹಾಗು ಅಣ್ಣ-ತಮ್ಮಂದಿರಲ್ಲಿ ಬಡಿದಾಟವನ್ನು ಹಚ್ಚಿಸಿ, ತಾನು ಮಧ್ಯಸ್ಥನಾಗಿ ಪರಸ್ಪರರಲ್ಲಿ ಮತ್ತಿಷ್ಟು ವೈರತ್ವವನ್ನು ಬೆಳಿಸಿ ಕೋರ್ಟಿಗೆ ಅವರನ್ನು ಬಡಿದಾಡಲಿಕ್ಕೆ ಅಟ್ಟಹತ್ತಿದನು. ತನಗೆ ದತ್ತಕ ವ್ಯಾಜ್ಯದಲ್ಲಿ ಸಹಾಯ ಮಾಡಿದವರ ಮೇಲೆಯೇ ಮೊದಲಿಗೆ ತನ್ನ ಈ ತಂತ್ರವನ್ನು ನಡೆಸಿದನು. ಸೆಟ್ಟರ ಬಸೆಟ್ಟೆಪ್ಪನು ತಮ್ಮಂದಿರೊಡನೆ ಕೋರ್ಟಿನಲ್ಲಿ ಬಡಿದಾಡಿ ಕೈಯೊಳಗಿನ ದುಡ್ಡನ್ನೆಲ್ಲ ಕಳೆದುಕೊಂಡು ಒಡಕಣ್ಣನ ಮನೆಗೆ ಎಡತಾಕುತ್ತ ಕುಳಿತನು. ಕಂಬಾರ ಕಲ್ಲಣ್ಣ ಬಡಿಗರ ಭರಮಣ್ಣ ಮೊದಲಾದವರೂ ಅಣ್ಣತಮ್ಮಂದಿರೊಡನೆ ಬಡಿದಾಡಿ ಬರಿಗೈಯ್ಯವರಾದರು. ಇನ್ನು ಲಕ್ಷ್ಮಣ ಜೋಯಿಸರೊಬ್ಬರು ಊರಲ್ಲಿ ಧನಿಕರೂ ಪ್ರತಿಷ್ಠಿತರೂ ಆಗಿದ್ದರು. ಅವರು ತನ್ನೆದುರಿಗೆ ತಲೆಎತ್ತಿ ನಡೆಯದಂತೆ ಮಾಡತಕ್ಕ ಯುಕ್ತಿಯನ್ನು ಒಡಕಣ್ಣನು ಹುಡುಕುತ್ತಿದ್ದನು. ತಾನು ಅವರ ಅಳಿಯನಾದರೆ ನಿತ್ಯವಾಗಿ ಅವರನ್ನೇ ಪರಿಪರಿಯಾಗಿ ಕಾಡಲಿಕ್ಕೆ ಬರುವದೆಂಬುದು ಅವನಿಗೆ ಹೊಳಿದಿತ್ತು. ಇದಕ್ಕಾಗಿ ಒಡಕಣ್ಣನು ಹೊಂಚು ಹಾಕಿಕೊಂಡು ಕುಳಿತಿದ್ದನು.

ಲಕ್ಷ್ಮಣ ಜೋಯಿಸರ ಹಿರಿಯ ಮಗಳಾದ ಗೌರಿಗೆ ಹನ್ನೆರಡು ವರ್ಷಗಳು ತುಂಬಿದ್ದವು. ಜೋಯಿಸರು ಮಗಳ ಮದುವೆ ಹೇಗಾಗುವದೋ ಎಂಬ ಚಿಂತೆಯಲ್ಲಿದ್ದರು. ಅಷ್ಟರಲ್ಲಿ ಒಡಕಣ್ಣನು ತಮ್ಮ ಮನೆಗೆ ವರನಾಗಿ ನಡೆಯುತ್ತ ಬಂದಿದ್ದ. ಒಡಕಣ್ಣನು ಕೋರ್ಟಿನಲ್ಲಿ ಯಶಸ್ವಿಯಾದ ಮೇಲೆ ಅವರಿಗೆ ಅವನಲ್ಲಿ ಪ್ರೇಮಾಭಿಮಾನಗಳು ಹೆಚ್ಚ ಹತ್ತಿದವು. ಒಂದು ದಿನ ಜೋಯಿಸರು ತಮ್ಮ ತಂಗಿಯಾದ ಚಂದ್ರಾವತಿಬಾಯಿಯವರ ಕಡೆಗೆ ಹೋಗಿ ತಮ್ಮ ಮಗಳ ಮದುವೆಯ ಪ್ರಸ್ತಾಪವನ್ನೆತ್ತಿದರು; ಅವರು ಹಿಂದೆ ತಮಗೆ ಕೊಟ್ಟ ವಚನದ ನೆನಪು ಮಾಡಿದರು. ಬಾಯಿಯವರು ಒಡಕಣ್ಣನು ಪ್ರಬುದ್ಧನಾದ್ದರಿಂದ ಅವನನ್ನೇ ವಿಚಾರಿಸಬೇಕೆಂದು ಹೇಳಿದರು. ಅದಕ್ಕೆ ಒಡಕಣ್ಣನು, ತಾನೇನು ಮದುವೆಗೆ ವಿರುದ್ಧನಿಲ್ಲ; ಆದರೆ ಕೈಯ್ಯಲ್ಲಿ ಹಣವಿಲ್ಲದ ಕಾರಣ ಹಿಂದು ಮುಂದೆ ನೋಡುವೆನೆಂದು ಹೇಳಿದನು. ಜೋಯಿಸರು ಮಬ್ಬಿಗೆ ಬಿದ್ದು ಅಳಿಯನಿಗೆ

ದುಡ್ಡಿನ ತ್ರಾಸವೇನೂ ಆಗದಂತೆ ತಾವು ನೋಡಿಕೊಳ್ಳುವೆವೆಂದರು. ಒಡಕಣ್ಣನು, ಜೋಯಿಸರು ವರದಕ್ಷಿಣೆಯಿಲ್ಲದೆ ತನ್ನ ಕೊರಳಲ್ಲಿ ಕನ್ಯೆಯನ್ನು ಕಟ್ಟಬೇಕೆಂದು ಮಾಡಿರುವರೆಂಬುದನ್ನು ತಿಳಿದು, ತನಗೆ ಒಂದು ಸಾವಿರ ವರದಕ್ಷಿಣೆ ಕೊಟ್ಟರೆ ಮಾತ್ರ ಮದುವೆಯಾಗುವೆನೆಂದು ಸ್ಪಷ್ಟವಾಗಿ ಹೇಳಿಬಿಟ್ಟನು. ಒಡಕಣ್ಣನು ಇಷ್ಟು ಬೇಗ ತನ್ನ ವಚನವನ್ನು ಮರೆತನೆಂಬುದನ್ನು ನೋಡಿ ಜೋಯಿಸರು ಮನದಲ್ಲಿಯೇ ನೊಂದುಕೊಂಡರು. ಎಷ್ಟೋ ಹೊತ್ತು ಸುಮ್ಮನೆ ಕುಳಿತು ವಿಚಾರ ಮಾಡಿದರು; ಕೊನೆಗೆ ಒಂದು ಸಾವಿರ ರೂಪಾಯಿ ವರದಕ್ಷಿಣೆ ಕೊಡುವದಕ್ಕೂ ಎರಡು ನೂರರ ವರೋಪ-ಚಾರಕ್ಕೂ ಒಪ್ಪಿಕೊಂಡರು. ಅದೇ ವೈಶಾಖದಲ್ಲಿಯೇ ಒಂದು ಮುಹೂರ್ತವನ್ನು ನೋಡಿ ಮದುವೆಯಾದರೆ ಒಳ್ಳೆಯದೆಂದು ಹೇಳಿ ತಮ್ಮ ಮನೆಗೆ ಹೋದರು.

ಲಕ್ಷ್ಮಣ ಜೋಯಿಸರು ಮಧ್ಯಾಹ್ನದ ಊಟವಾದ ನಂತರ ತಮ್ಮ ಹೆಂಡತಿಯಾದ ರುಕ್ಮಿಣಿಬಾಯಿಯವರೆದುರು ಗೌರಿಗೆ ಅನುರೂಪ ವರನನ್ನು ಗೊತ್ತುಮಾಡಿಕೊಂಡು ಬಂದ ಒಗ್ಗೆ ಮಾತಾಡಿದರು. ಅವರ ಹೆಂಡತಿಗೆ ಎಲ್ಲವೂ ಗೊತ್ತು; ತಮ್ಮ ಗಂಡನ ಮಾತಿನ ಕಡೆಗೆ ಅವರು ಲಕ್ಷ್ಯವನ್ನೇ ಕೊಡಲಿಲ್ಲ. 'ನಾಲ್ಕ ಮಂದೀ ಸ್ನೇಹ ಮಾಡಿಕೊಂಡು ತನ್ನಂತೆ ನ್ಯಾಯ ಮಾಡಿಕೊಂಡು ಬಂದ. ಇನ್ನೇನು? ಸ್ವಲ್ಪ ಕಪ್ಪು ಇದ್ದಾನ. ರೂಪಾ ಏನು ತೊಳಕೊಂಡು ಕುಡಿಯೋದದದ?' ಎಂದು ಜೋಯಿಸರು ಸೌಮ್ಯವಾಗಿ ಹೇಳಿದರು. 'ಅವನದ ಹೌದಲ್ಲೊ? ನಿಮ್ಮ ತಂಗಿಯ ದತ್ತಕ ಮಗ! ಅವನ ಮಹಾತ್ಮೇನ ಊರೆಲ್ಲ ಹೊಗಳತದ' ಎಂದು ತಿರಸ್ಕಾರಯುಕ್ತವಾದ ಹಾಸ್ಯದಿಂದ ರುಕ್ಮಿಣಿಬಾಯಿಯರು ನುಡಿದರು. ಜೋಯಿಸರಿಗೆ ಅಪಮಾನವಾಯಿತು. 'ನಿಮ್ಮ ತಂಗಿಯ ದತ್ತಕ ಮಗ' ಎಂದು ಉಪಹಾಸಮಾಡಿ ಮಾತಾಡಿದ್ದು ಅವರ ಅಂತಃಕರಣಕ್ಕೆ ಬರೆ ಕೊಟ್ಟಿತು. ಅವರು ಸುಮ್ಮನೆ ಕುಳಿತರು. 'ನಿಮಗ್ಯಾಂಗ ತಿಳೀಬೇಕು? ಊರೆಲ್ಲ ಡಂಗರ ಹೊಡೀತದ. ನಿಮ್ಮ ತಂಗಿ....ತಂಗಿ' ಎಂದು ರುಕ್ಮಿಣಿಬಾಯಿಯರು ಏನನ್ನೋ ನುಡಿಯುವವರಿದ್ದರು. ಅಷ್ಟರಲ್ಲಿ ಜೋಯಿಸರು ಬ್ರಹ್ಮಾಂಡ ಸಿಟ್ಟಿಗೆದ್ದುದನ್ನು ನೋಡಿ ಅವರು ನಾಲಗೆ ಕಚ್ಚಿದರು. 'ಹೆಂಗಸರ ಬುದ್ಧಿ ಮೊಳಕಾಲ ಕೆಳಗೇ'

ಎಂದು ಹೆಂಡತಿಯನ್ನು ಅಲ್ಲಗಳೆಯುತ್ತ ಜೋಯಿಸರು ತಮ್ಮ ಮಾತಿಗೆ ಮೊದಲು ಮಾಡಿದರು. 'ನನ್ನ ಮನಸ್ಸಿಗೆ ತಿಳದ್ಹಾಂಗ ಮಾಡತೇನಿ. ನೀನು ಲಗ್ನದಾಗ ಒಣಾ ಉಸಾಬರೀ ಮಾಡಿದೆಂದರ ನೋಡು!' ಇದಕ್ಕೆ ರುಕ್ಮಿಣಿ ಬಾಯರ ಉತ್ತರವೂ ತಯಾರಾಗಿತ್ತು. 'ನೀವ ಭಲಾ, ನಿಮ್ಮ ಮಗಳು ಭಲಾ. ಗಂಡಾ ಗುಂಡೀ ಮಾಡಿ ಗಂಡಗೊಂದು ಹೇಣತಿ ಮಾಡಿಬಿಡ್ರಿ. ನನ್ನ ಉಸಾಬರೀಗೆ ಬರಬ್ಯಾಡ್ರಿ.' ಎಂದು ಅವರು ಅಳಹತ್ತಿದರು. ಜೋಯಿಸರ ಎದೆ ಅರಳಿತು. 'ಏ! ಹಿಂಗ್ಯಾಕ ಮಾಡತೀಯೆ?' ಎಂದು ಅವರೂ ಅಳುವ ಧ್ವನಿಯಲ್ಲಿ ನುಡಿದರು. ಹೀಗೇ ಎಷ್ಟೋ ಹೊತ್ತು ಅರೆದಾಟ ಮಾಡಿ ಕೊನೆಗೆ ಗೌರಿಯನ್ನು ಒಡಕಣ್ಣನಿಗೇ ಕೊಡುವದಕ್ಕೆ ತಮ್ಮ ಹೆಂಡತಿಯ ಅಪ್ಪಣೆಯನ್ನು ಪಡೆಯಬೇಕಾದರೆ ಜೋಯಿಸರ ಪೂರ್ವಾರ್ಜಿತ ಪುಣ್ಯವೆಲ್ಲ ತೀರಿತು.

ಮರುದಿವಸ ಬೆಳಗಾಗುತ್ತಲೆ ಲಕ್ಷ್ಮಣ ಜೋಯಿಸರು ಎದ್ದು ಮುಖ ಪ್ರಕ್ಷಾಲನ ಮಾಡಿಕೊಂಡು ತಮ್ಮ ಹೊತ್ತಿಗೆಯ ಗಂಟನ್ನು ಬಿಚ್ಚಿ ಪಂಚಾಂಗವನ್ನು ತೆಗೆದು ತಮ್ಮ ಮಗಳ ವಿವಾಹಕ್ಕೆ ಯೋಗ್ಯವಾದ ಮುಹೂರ್ತವನ್ನು ಹುಡುಕಹತ್ತಿದರು. ವೈಶಾಖಶುದ್ಧ ನವಮಿಯ ದಿವಸ ವಿವಾಹಕ್ಕೆ ಯೋಗ್ಯವಾದ ಮುಹೂರ್ತವಿರುವದೆಂಬುದು ಅವರಿಗೆ ತಿಳಿದು ಬಂತು. ಬಳಿಕ ಅವರು ತಮ್ಮ ಉಣ್ಣೆಯ ಬಗಲಕಸಿಯಂಗಿಯನ್ನು ಹಾಕಿಕೊಂಡು ತಲೆಯ ಮೇಲೆ ರೂಮಾಲವನ್ನು ಸುತ್ತಿಕೊಂಡು ಅಂಚಿನ ಧೋತರವನ್ನು ಹೊದ್ದುಕೊಂಡು, ತಮ್ಮ ಆಶ್ರಿತ ಬ್ರಾಹಣರ ಸಂಗಡ ದೇಸಾಯರ ಮನೆಗೆ ಬಂದರು. ಆಗ ದೇಸಾಯರ ಮನೆಯಲ್ಲಿ ಬಸನಗೌಡರೂ ಬಸೆಟ್ಟೆಪ್ಪ ಮೊದಲಾದ ದೇಸಾಯರ ಮಿತ್ರರೂ ಹರಟೆ ಕೊಚ್ಚುತ್ತ ಕುಳಿತಿದ್ದರು. ಜೋಯಿಸರು ಒಳಗೆ ಹೋದಕೂಡಲೆ ಎಲ್ಲರೂ ಅವರನ್ನು ಆದರದಿಂದ ಮೇಲೆ ಕುಳ್ಳಿರಿಸಿದರು. ಜೋಯಿಸರು ಮಂಗಲಕಾರ್ಯದ ಪ್ರಸ್ತಾಪವೆತ್ತಿ, ಒಡಕಣ್ಣನಿಗೆ ತಮ್ಮ ಮಗಳಾದ ಗೌರಿಯನ್ನು ಕೊಟ್ಟು ಮದುವೆ ಮಾಡುವದಾಗಿ ನಿರ್ಧರಿಸಿದೆಯೆಂದು ಹೇಳಿದರು. ಆ ಮೇಲೆ ಜೋಯಿಸರು ಅವರೆಲ್ಲರ ಸಮ್ಮತಿಯಿಂದ ವೈಶಾಖಶುದ್ಧ ನವಮಿಯ ಮುಹೂರ್ತವನ್ನು ಗೊತ್ತುಪಡಿಸಿದರು. ಆಮೇಲೆ ಅಂದೇ ಒಳ್ಳೆಯ ಮುಹೂರ್ತವಿದ್ದುದರಿಂದ ಲಗ್ನದ ಯಾದಿಗಳನ್ನು ಬರೆಯಬೇಕೆಂದು ಜೋಯಿಸರು ಸೂಚಿ

ಸಿದರು. ಆದರೆ ಒಡಕಣ್ಣನು ಕರಾರಿನ ಬಂಧನಕ್ಕೆ ಒಳಪಟ್ಟರೆ ತನ್ನ ತಂತ್ರಗಳಿಗೆ ದಾರಿಯುಳಿಯುದಿಲ್ಲವೆಂದು ಯಾದಿಯನ್ನು ತಯಾರಿಸಲಿಕ್ಕೆ ಒಪ್ಪಲಿಲ್ಲ. "ನಾಲ್ಕು ಜನರಲ್ಲಿ ಒಪ್ಪಿಕೊಂಡಿದ್ದು ಸಾಕಾಗದೇನು? ಇಷ್ಟಾಗಿ ಅಣ್ಣ-ತಂಗಿಯರಲ್ಲಿ ಜಗಳ ಬರುವದಾದರೂ ಹೇಗೆ?" ಎಂದು ಅವನು ಮುಂಗಾಲುಪುಟಿಗೆ ಮಾತಾಡಿದನು. ಜೋಯಿಸರೇ ಹಿಂದೆ ಸರಿದು "ಹಾಗೇ ಆಗಲಿ" ಎಂದು ಒಪ್ಪಬೇಕಾಯಿತು.

ತನ್ನ ಲಗ್ನದ ನಿಶ್ಚಯವಾದ ಬಳಿಕ ಒಡಕಣ್ಣನು ತಮ್ಮ ಇನಾಮು ಗ್ರಾಮವಾದ ಹನುಮಾಪುರಕ್ಕೆ ಹೋದನು. ಅಲ್ಲಿ ತಮ್ಮ ಹೊಲ ಮಾಡತಕ್ಕ ರೈತ ಜನರನ್ನೆಲ್ಲ ಕರೆಯಿಸಿ, ಆಗ ತನ್ನ ಲಗ್ನವಿದ್ದುದರಿಂದ ಪ್ರತಿಯೊಬ್ಬ ರೈತನೂ ತನ್ನ ಲಾವಣೀಹಣದ ಮೇಲೆ ರೂಪಾಯಿಗೆ ನಾಲ್ಕು ಆಣೆಯಂತೆ ಲಗ್ನದ ಪಟ್ಟಿಯನ್ನು ಕೊಡಬೇಕೆಂದು ತಿಳಿಸಿದನು. ದೇಸಾಯರ ಹೊಲಗಳನ್ನು ಮಾಡಹತ್ತಿ ಇಪ್ಪತ್ತು ವರ್ಷಗಳಾಗಿದ್ದರೂ, ರೈತರು ಈ ತರಹದ ಹೆಚ್ಚಿನ ಪಟ್ಟಿಗಳನ್ನು ಎಂದೂ ಕೊಟ್ಟಿರಲಿಲ್ಲ. ಲಗ್ನದ ಪಟ್ಟಿಯ ಹೆಸರನ್ನು ಕೂಡ ಕೇಳದ ರೈತರು ಈಗ ಕೆರಳಿದರು. "ಹೀಂಗ ರೈತರಿಂದ ಪಟ್ಟೀ ಎತ್ತಲಿಕ್ಕೆ ದೇವರು ನಿಮಗೇನು ಕಡಿಮೆ ಮಾಡಿದ್ದಾನ್ರಿ?" ಎಂದು ರೈತರಲ್ಲಿಯ ಪ್ರಮುಖನೊಬ್ಬನು ಕೇಳಿದನು. ಒಡಕಣ್ಣನಿಗೆ ಈ ತರಹದ ಪ್ರಶ್ನೋತ್ತರವು ಸೇರಲಿಲ್ಲ. ಅವನು ಸಿಟ್ಟಿನಿಂದ "ಹಿಂದೆ ಆದದ್ದು ಆಯಿತು. ಈಗಿನ ಕಾಲ ಬದಲಾಗಿದೆ. ನೀವು ಲಗ್ನದ ಪಟ್ಟಿಯನ್ನು ಕೊಡಲೇಬೇಕು." ಎಂದು ಒತ್ತಾಯಪಡಿಸಿದನು. ರೈತರೂ ಕೊಡುವದಿಲ್ಲವೆಂದು ಗಟ್ಟಿ ಹಿಡಿದರು. ಕೂಡಲೇ ಒಡಕಣ್ಣನು ಪರಸ್ಥಳದ ರೈತರಿಗೆ ಹೊಲಗಳನ್ನು ಲಾವಣಿಯಿಂದ ಕೊಡುವೆನೆಂದು ಬೆದರಿಸಿದನು. ಎರಡು ಮೂರು ತಲೆಗಳಿಂದ ನಡೆಯುತ್ತ ಬಂದ ಜಮೀನುಗಳು ಕೈಬಿಟ್ಟು ಹೋಗುವವೆಂದು ಅಂಜಿ ಮುಂದುಗಾಣದೆ ರೈತರು ಪಟ್ಟಿಯನ್ನು ತೆತ್ತಲಿಕ್ಕೆ ಒಪ್ಪಿದರು. ಮುಂದೆ ಎರಡು ಮೂರು ದಿನಗಳಲ್ಲಿ ಒಡಕಣ್ಣನು ರೈತರಿಂದ ಹಣವನ್ನು ವಸೂಲು ಮಾಡಿಕೊಂಡು ಬೊಮ್ಮಿಗೇರಿಗೆ ಹೊರಟು ಬಂದನು.

ಒಡಕಣ್ಣನ ವಿವಾಹದ ಮುಹೂರ್ತವು ಸಮೀಪಕ್ಕೆ ಬಂದಂತೆ ಅವರ ಮನೆಯಲ್ಲಿ ಆಪ್ತೇಷ್ಟರು ಬರಹತ್ತಿದರು. ಎರಡೂ ಮನೆಗಳಲ್ಲಿ ಮದುವೆಯ

ತಯಾರಿಯು ಜೋರಿನಿಂದ ನಡೆದಿತ್ತು. ಮದುವೆಗೆ ಮುಂಚೆ ಐದಾರು ದಿನ ಬೇರೆ ಬೇರೆ ದೇವರ ಸಮಾರಾಧನೆಗಳಾದವು. ವೈಶಾಖ ಶುದ್ಧ ದ್ವಿತಿಯೆಯ ದಿವಸ ಒಡಕಣ್ಣನಿಗೆ ಸಮಾವರ್ತನೆಯಾಯಿತು. ಮುಂದೆ ಅಷ್ಟಮಿಯ ದಿವಸ ಎರಡೂ ಮನೆಗಳಲ್ಲಿ ನಾಂದೀಸ್ಥಾಪನೆಯಾಯಿತು. ಒಡಕಣ್ಣನ ಮದುವೆಯು ಎಷ್ಟು ವೈಭವದಿಂದಾಯಿತೆಂಬುದನ್ನು ವರ್ಣಿಸುವದು ಅಸಾಧ್ಯವೇ ಸರಿ. ಕನ್ಯಾಪಕ್ಷದ ಹೆಣ್ಣುಮಕ್ಕಳು ಪೀತಾಂಬರವನ್ನು ಧರಿಸಿ ಆಭರಣಗಳನ್ನಿಟ್ಟುಕೊಂಡು ವಾದ್ಯಘೋಷದೊಂದಿಗೆ ಸಡಗರದಿಂದ ಬಂದು ಭೂಮವನ್ನು ಹಾಕಿ, ವರನಿಗೂ ಅವನ ಪಕ್ಷದ ಜನರಿಗೂ ಮೃಷ್ಟಾನ್ನ ಭೋಜನವನ್ನು ಮಾಡಿಸಿದರು. ಆರು ತಾಸಿಗೆ ಮುಹೂರ್ತವಿದ್ದದರಿಂದ ಕನ್ಯಾಪಕ್ಷದವರು ವರನನ್ನು ಕರೆಯಲಿಕ್ಕೆ ವಾದ್ಯಘೋಷದೊಂದಿಗೆ ಬಂದರು. ಆಗ ವರಪಕ್ಷದ ಪುರೋಹಿತರು ಗಡಬಿಡಿ ಮಾಡಿ ಒಳಗಿನ ಹೆಣ್ಣುಮಕ್ಕಳನ್ನೆಲ್ಲ ಎಬ್ಬಿಸಿದರು. ಗಂಡಸರೂ ಅಂಗಿ ರುಮಾಲಗಳನ್ನು ಹಾಕಿಕೊಂಡು ಲಗ್ನಕ್ಕೆ ಹೊರಡಲನುವಾದರು. ಕನ್ಯಾಪಕ್ಷದ ಪುರೋಹಿತರು ವರನಿಗೆ ತೆಂಗಿನಕಾಯಿ ಮುಂಡಾಸಗಳನ್ನೂ, ಕಳಸಗಿತ್ತಿಗೆ ಖಣವನ್ನೂ ಕೊಡಿಸಿ, ಆರತಿಯನ್ನು ಮಾಡಲಿಕ್ಕೆ ಹೇಳಿದರು. ಆಮೇಲೆ ವರನನ್ನು ಕುದುರೆಯ ಮೇಲೆ ಕುಳ್ಳಿರಿಸಿ, ವಾದ್ಯಘೋಷದೊಂದಿಗೆ ಕನ್ಯೆಯ ಮನೆಗೆ ಎಲ್ಲರೂ ಹೋದರು. ಅಲ್ಲಿಗೆ ಹೋದ ಕೂಡಲೆ ಕದಲಾರತಿಯನ್ನು ಮಾಡಿ ವರನನ್ನು ವಿವಾಹಮಂಟಪದಲ್ಲಿ ಲಕ್ಷ್ಮಣ ಜೋಯಿಸರು ಒಯ್ದು ಕುಳ್ಳಿರಿಸಿದರು. ಕನ್ಯಾಪಕ್ಷದ ಪುರೋಹಿತರು ಗಡಬಿಡಿಯಿಂದ ವಾಗ್ದಾನ ಕಾರ್ಯವನ್ನು ಮಾಡಿಸಿದರು. ಆಗ ಕನ್ಯೆಯ ತಂದೆತಾಯಿಗಳು ಬಂದು ವರನ ಪಾದಗಳನ್ನು ತೊಳೆದು ಮಧುಪರ್ಕ ಪೂಜೆಯನ್ನು ಮಾಡಿದರು. ಬಳಿಕ ಅಂತಃಪಟವನ್ನು ಹಿಡಿದು ಒಡಕಣ್ಣನನ್ನು ಮಣೆಯ ಮೇಲೆ ಕುಳ್ಳಿರಿಸಿ ಮಂತ್ರಘೋಷವನ್ನು ಮಾಡುತ್ತ ಅಕ್ಷತೆಗಳನ್ನು ಹಾಕುವದಾಯಿತು. ಲಗ್ನಕ್ಕೆ ಬಂದ ಜನರೂ, ಬ್ರಾಹ್ಮಣರೂ ವಧೂವರರ ತಲೆಯ ಮೇಲೆ ಅಕ್ಷತೆಗಳನ್ನು ಹಾಕಿ, ಆಶಿರ್ವದಿಸುವದಾದ ಮೇಲೆ ಕನ್ಯಾಪಕ್ಷದ ಪುರೋಹಿತರು ಕನ್ಯಾದಾನಪ್ರಯೋಗವನ್ನು ಮಾಡಿಸಹತ್ತಿದರು; ಸಪತ್ನೀಕರಾದ ಲಕ್ಷ್ಮಣ ಜೋಯಿಸರನ್ನೂ ವರನ ಹತ್ತಿರ ಉತ್ತರಕ್ಕೆ ನೋರೆ ಮಾಡಿ ಕುಳ್ಳಿರಿಸಿ ಅವರ

ಕಡೆಯಿಂದ ಕನ್ಯಾದಾನ ಸಂಕಲ್ಪವನ್ನು ಮಾಡಿಸಿದರು. ಬಳಿಕ ಕನ್ಯಾಪಕ್ಷದ ಪುರೋಹಿತರು, 'ಧರ್ಮೇಚ, ಅರ್ಥೇಚ, ಕಾಮೇಚ, ನಾತಿ ಚರಿತವ್ಯಾತ್ವಯೇಯಂ' ಎಂದು ಲಕ್ಷ್ಮಣ ಜೋಯಿಸರಿಂದ ಅನ್ನಿಸಿ, ಒಡಕಣ್ಣನಿಗೆ ಅವನ ಕುಲಸ್ವಾಮಿಯನ್ನು ಸ್ಮರಿಸಿ 'ನಾತಿಚರಾಮಿ' ಎಂದು ಪ್ರತಿಜ್ಞೆ ಮಾಡಬೇಕೆಂದು ತಿಳಿಸಿದರು. ಆಗ ಒಡಕಣ್ಣನು, ಆ ಮಂತ್ರಗಳನ್ನು ತಮ್ಮ ಪುರೋಹಿತರೇ ಅನ್ನಬೇಕೆಂದು ಹಟ ಹಿಡಿದನು. ಕೂಡಿದ ಬ್ರಾಹ್ಮಣರು ವರನೇ ಅನ್ನಬೇಕೆಂದು ಆಗ್ರಹ ಮಾಡಲು 'ದಕ್ಷಿಣೆಗೆ ಬಂದ ಬ್ರಾಹ್ಮಣರು, ತಮ್ಮ ಕಾರ್ಯಮಾಡಿಕೊಂಡು ಹೋಗಬೇಕು, ಹೆಚ್ಚಿನ ಕಾರಭಾರ ಮಾಡಬಾರದು' ಎಂದು ಒಡಕಣ್ಣನು ಅವರನ್ನು ಬೆದರಿಸಿದನು. ಕೂಡಿದ ಬ್ರಾಹ್ಮಣರು ದಕ್ಷಿಣೆ ತಾಂಬೂಲಗಳನ್ನು ಸ್ವೀಕರಿಸಿ, ಒಡಕಣ್ಣನ ಮೂರ್ಖತನಕ್ಕೆ ನಗುತ್ತ ಹೊರಟುಹೋದರು. ವರನ ಪಕ್ಷದ ಪುರೋಹಿತರು ವರದಕ್ಷಿಣೆಯನ್ನು ಆಗಿಂದಾಗ ಕೊಡಬೇಕೆಂದು ತಿಳಿಸಿದರು. ಲಕ್ಷ್ಮಣ ಜೋಯಿಸರು ಹಣವನ್ನು ತರಲಿಕ್ಕೆಂದು ಒಳಗೆ ಹೋದಾಗ, ಒಡಕಣ್ಣನು ಅವರ ಹಿಂದಿನಿಂದ ಹೋಗಿ, ತನ್ನ ಹಿರಿಯರು ಒಂದು ಸಾವಿರ ರೂಪಾಯಿ ವರದಕ್ಷಿಣೆಗೆ ಒಪ್ಪುವದಿಲ್ಲವೆಂದೂ, ಆಗಿನ ಕಾಲದ ಮಟ್ಟಿಗೆ ಜೋಯಿಸರು ಕನಿಷ್ಟ ಒಂದೂವರೆ ಸಾವಿರ ಕೊಡಬೇಕೆಂದೂ ಹೆಚ್ಚಿನ ಹಣವನ್ನು ತಾನು ಹಿಂದುಗಡೆ ತಿರುಗಿ ಕೊಡುವೆನೆಂದೂ ಹೇಳಿದನು. ಜೋಯಿಸರು ಅದಕ್ಕೆ ಒಪ್ಪಿ ಹದಿನೈದು ನೂರು ರೂಪಾಯಿಗಳನ್ನು ತಾಟಿನಲ್ಲಿ ಹಾಕಿ ಒಡಕಣ್ಣನ ತಂದೆಯವರ ಕೈಯ್ಯಲ್ಲಿ ಕೊಟ್ಟರು. ಅವರು ವರದಕ್ಷಿಣೆಯ ಹಣವನ್ನು ಎಣಿಸಿಕೊಂಡು ವರದಕ್ಷಿಣೆ ಬಹಳ ಕಡಿಮೆಯಾಯಿತೆಂದು ಗೊಣಗುಟ್ಟಿದರು. ಜೋಯಿಸರು 'ಅಪ್ತತ್ವದಲ್ಲಿ ವರದಕ್ಷಿಣೆಯ ಬಗ್ಗೆ ಹೆಚ್ಚಿಗೆ ಚಿಕಿತ್ಸೆ ಮಾಡಬಾರದು' ಎಂದು ಅವರಲ್ಲಿ ಹೇಳಿಕೊಂಡರು.

ವರನ ಪಕ್ಷದವರು ನಾಲ್ಕು ದಿವಸಗಳವರೆಗೆ ಲಕ್ಷ್ಮಣ ಜೋಯಿಸರ ಮನೆಯಲ್ಲಿ ಸುಗ್ರಾಸಭೋಜನವನ್ನು ಮಾಡಿದರು. ನಾಲ್ಕನೆಯ ದಿನ ನಾಗೋಲಿಯ ಕಾರ್ಯವಾಯಿತು. ಆ ಕಾರ್ಯಕ್ಕೆ ಒಡಕಣ್ಣನು ವಿಷ್ಣು ತಂದು ಅಂಗಿ ರುಮಾಲುಗಳ ಸಲುವಾಗಿ ಒಂದು ನೂರು ರೂಪಾಯಿ ಎಬ್ಬಿಸಿದನು. ಐದನೆಯ ದಿನ ಊರ ಪ್ರಸ್ಥವಾಯಿತು. ಅಂದು ಒಡಕಣ್ಣನು ಕಂಠಿಯ

ಸರವನ್ನು ಕೊಟ್ಟರೆ ಮಾತ್ರ ತಾನು ಊಟಕ್ಕೆ ಬರುವೆನೆಂದು ಹಟ ಹಿಡಿದು, ಕೊನೆಗೆ ಹತ್ತು ತೊಲಿಯ ಬಂಗಾರದ ಪೋಚೆಯನ್ನು ಜೋಯಿಸರು ಕೊಟ್ಟಮೇಲೆಯೇ ಭೋಜನಕ್ಕೆ ಬಂದನು. ಇದರಿಂದ ಜೋಯಿಸರು ನಿರ್ವಿಣ್ಣರಾದರು. ಒಟ್ಟಿಗೆ ವರನಿಗೆ ಎರಡು ಸಾವಿರ ರೂಪಾಯಿಗಳನ್ನು ಅವರು ತೆತ್ತಬೇಕಾಯಿತು. ಮದುವೆ ಮುಗಿದ ಮೇಲೆ ಅವರಿಗೆ ಬುದ್ಧಿ ಬಂತು. ಆದರೆ ಈಗ ಮಾಡುವದೇನು? ಅವರ ಮಗಳನ್ನು ಮದುವೆಯಾಗಿ ಒಡಕಣ್ಣನು ಚತುರ್ಭುಜನಾಗಿ ಹೋಗಿದ್ದನು. ಜೋಯಿಸರ ತಂಗಿಯೊಡನೆ ತನ್ನ ಬ್ರಹ್ಮಚರ್ಯಾಶ್ರಮವನ್ನು ಆಚರಿಸಿದ ಒಡಕಣ್ಣನು ಈಗ ಅವರ ಮಗಳೊಡನೆ ಗಾರ್ಹಸ್ಥ್ಯವನ್ನು ಸ್ವೀಕರಿಸಲು ಸಿದ್ಧನಾದನು. ಒಡಕಣ್ಣನ ಗೃಹಸ್ಥಾಶ್ರಮವನ್ನು ಕುರಿತು ಇನ್ನೊಂದು ಕಾದಂಬರಿಯಲ್ಲಿ ಓದಬಹುದು.

---

ಮೋಹನ

ಮುದ್ರಣಾಲಯ,

ಧಾರವಾಡ